ಸಂಪುಟ: 04 ಸಂಚಿಕೆ: 69 ಪುಟಗಳು: 08 ಗುರುವಾರ 23 ಮೇ 2024

www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ನಂಬಿಕೆಯೇ ಜೀವನ.
ಸಂಶಯವೇ ಮರಣ.
ನಂಬಿಕೆ ಅದ್ಭುತ
ಕಾರ್ಯವನ್ನು ಸಾಧಿಸಿದರೆ
ಸಂಶಯ ಸರ್ವನಾಶಕ್ಕೆ
ಕಾರಣವಾಗುತ್ತದೆ

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## 'ಮೂಗಿನ ಸ್ಪ್ರೇ' ಗೊಂದಲಕ್ಕೆ ಸ್ಪಷ್ಟನೆ ನೀಡಿದ ಆರೋಗ್ಯ ಸಚಿವ

• ಉದಯವಾಹಿನಿ, ಬೆಂಗಳೂರು

ಖಾಸಗಿ ಔಷಧೀಯ ಕಂಪನಿಯಿಂದ ರಾಜ್ಯ ವೈದ್ಯಕೀಯ ಸರಬರಾಜು ನಿಗಮಕ್ಕೆ ಸರಬರಾಜು ಮಾಡಿದ ಆಕ್ಸಿಮೆಟಾಜೋಲಿನ್ ಹೈಡ್ರೋಕ್ಲೋರೈಡ್ ದ್ರಾವಣವು ಪ್ರಾಣಿಗಳ ಬಳಕೆಗೆ ಅಲ್ಲ ಎಂದು ರಾಜ್ಯ ಆರೋಗ್ಯ ಇಲಾಖೆ ಸ್ಪಷ್ಟಪಡಿಸಿದೆ.ಆದಾಗ್ಯೂ, ಮುನ್ನೆಚ್ಚರಿಕೆ ಕ್ರಮವಾಗಿ, ನಿಗಮವು ಸರಬರಾಜು ಮಾಡಿದ ಪರಿಹಾರದ ಎಲ್ಲಾ ದಾಸ್ತಾನುಗಳನ್ನು ವಾಪಸ್ ಕಳುಹಿಸುತ್ತಿದೆ. ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮಕ್ಕೆ (ಕೆಎಸ್‌ಎಂಎಸ್ಸಿಎಲ್) ಪುಷ್ಕರ್ ಫಾರ್ಮಾ ಲಿಮಿಟೆಡ್ ಪರಿಹಾರವನ್ನು ಪೂರೈಸುವ ಬಗ್ಗೆ ಉಂಟಾಗಿರುವ ಗೊಂದಲವನ್ನು ರಾಜ್ಯ ಆರೋಗ್ಯ ಇಲಾಖೆ ಗಮನಿಸಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ. ಲೇಬಲ್ಗಳಲ್ಲಿ ತಪ್ಪು ಮುದ್ರಣದ ಬಗ್ಗೆ ಫಾರ್ಮಾ ಕಂಪನಿ ರಾಜ್ಯ ಆರೋಗ್ಯ ಇಲಾಖೆಗೆ ಸೂಚನೆ ನೀಡಿದೆ ಮತ್ತು ಅದು ಪೂರೈಸುವ ಆಕ್ಸಿಮೆಟಾಜೋಲಿನ್ ಹೈಡ್ರೋಕ್ಲೋರೈಡ್ ದ್ರಾವಣವನ್ನು ಪ್ರಾಣಿಗಳ ಮೇಲೆ ಬಳಸಬಾರದು ಎಂದು ಸ್ಪಷ್ಟಪಡಿಸಿದ್ದಾರೆ. ಮೂಗಿನ ಡಿಕಾಂಗೆಸ್ಟೆಂಟ್ ಸ್ಪ್ರೇ ಆಗಿ ಬಳಸಲಾಗುವ ಔಷಧಿಯನ್ನು ಮುನ್ನೆಚ್ಚರಿಕೆ ಕ್ರಮವಾಗಿ ಕೆಎಸ್‌ಎಂಎಸ್ಸಿಎಲ್ ಗೋದಾಮುಗಳಿಂದ ಹಿಂತೆಗೆದುಕೊಳ್ಳಲಾಗುತ್ತಿದೆ. ಆಕ್ಸಿಮೆಟಾಜೋಲಿನ್ ಹೈಡ್ರೋಕ್ಲೋರೈಡ್ ದ್ರಾವಣದ ಘಟಕಗಳನ್ನು ಪರೀಕ್ಷಿಸಲು ಫಾರ್ಮಾ ಕಂಪನಿಗೆ ಸೂಚನೆ ನೀಡಲಾಯಿತು, ಅದರ ನಂತರ, ಔಷಧಿ ಎಂದು ದೃಢಪಡಿಸಲಾಯಿತು.

## ನೀರು ಹಂಚಿಕೆ ಒಪ್ಪಂದಕ್ಕೆ ಮಹಾರಾಷ್ಟ್ರ ಜೊತೆ ಮಾತುಕತೆ

• ಉದಯವಾಹಿನಿ, ಬೆಳಗಾವಿ

ಬೇಸಿಗೆಯಲ್ಲಿ ಎರಡೂ ರಾಜ್ಯಗಳ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ಮಹಾರಾಷ್ಟ್ರದೊಂದಿಗೆ ನೀರು ಹಂಚಿಕೆ ಒಪ್ಪಂದದ ಬಗ್ಗೆ ರಾಜ್ಯ ಸರ್ಕಾರ ಚರ್ಚಿಸುತ್ತಿದೆ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದ್ದಾರೆ. ಬೇಸಿಗೆಯಲ್ಲಿ ಎರಡೂ ಕಡೆ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ನೀರಿನ ವಿನಿಮಯಕ್ಕೆ ಅನುಕೂಲವಾಗುವಂತಹ ಒಪ್ಪಂದವನ್ನು ಮಹಾರಾಷ್ಟ್ರ ಬಯಸಿದೆ ಎಂದು ಹೇಳಿದರು.

ಮಾದರಿ ನೀತಿ ಸಂಹಿತೆಯನ್ನು ಸಡಿಲಿಸಿದ ನಂತರ ಈ ನಿಟ್ಟಿನಲ್ಲಿ ಸಭೆ ನಡೆಸಲಾಗುವುದು ಎಂದು ಅವರು ಹೇಳಿದರು. ಮಹಾರಾಷ್ಟ್ರ ಗಡಿಯವರೆಗೆ ನೀರು ಲಭ್ಯವಾಗುವಂತೆ ಮಾಡಲು ಮೂಲ ಸೌಕರ್ಯಗಳನ್ನು ರಚಿಸಲು ನಾವು ಸುಮಾರು 100 ಕೋಟಿ ರೂ. ಗಳ ಹೂಡಿಕೆ ಮಾಡಬೇಕಾಗಿದೆ ಎಂದು ಅವರು ಹೇಳಿದರು.

## ಪ್ರಜ್ವಲ್ ಪ್ರಕರಣದಲ್ಲಿ ಕೇಂದ್ರ ಸಹಾಯ ಮಾಡಬೇಕು: ಸಚಿವ

• ಉದಯವಾಹಿನಿ, ಬೆಂಗಳೂರು

ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಚೆನ್ನಾಗಿದೆ. ಯಾರ ಕಾಲದಲ್ಲಿ ಕೊಲೆ, ಅಪರಾಧ ಜಾಸ್ತಿ ಇತ್ತು ಅಂತ ದಾಖಲೆ ಬಿಡುಗಡೆ ಮಾಡಿದ್ದೇವೆ. ಇದಕ್ಕೆ ಮೊದಲು ಬಿಜೆಪಿಯವರು ಉತ್ತರ ಕೊಡಲಿ ಎಂದು ಗೃಹ ಸಚಿವ ಜಿ.ಪರಮೇಶ್ವರ್ ಹೇಳಿದರು. ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕಾನೂನು ಸುವ್ಯವಸ್ಥೆ ಹದಗೆಟ್ಟ ಆರೋಪ ವಿಚಾರವಾಗಿ ಮಾತನಾಡುತ್ತಾ, ಕರ್ನಾಟಕದಲ್ಲಿ ಕಾನೂನು ಸುವ್ಯವಸ್ಥೆ ಚೆನ್ನಾಗಿದೆ. ಯಾರ ಕಾಲದಲ್ಲಿ ಕೊಲೆ, ಅಪರಾಧ ಜಾಸ್ತಿ ಇತ್ತು ಅಂತ ದಾಖಲೆ ಬಿಡುಗಡೆ ಮಾಡಿದ್ದೇವೆ. ಇದಕ್ಕೆ ಮೊದಲು ಬಿಜೆಪಿಯವರು ಉತ್ತರ ಕೊಡಲಿ ಎಂದು ಟಾಂಗ್ ಕೊಟ್ಟರು. ಇನ್ನೂ ದೇವರಾಜೇಗೌಡ ರಿಲೀಸ್ ಮಾಡಿದ ಆಡಿಯೋದಲ್ಲಿ ಡಿ.ಕೆ. ಶಿವಕುಮಾರ್ ಧ್ವನಿ ಇರುವುದೇ ದೊಡ್ಡ ಸಾಕ್ಷಿ ಅಲ್ವೇ ಅನ್ನುವ ಹೆಚ್‌ಡಿಕೆ ಹೇಳಿಕೆಗೆ, ಕುಮಾರಸ್ವಾಮಿ ಪ್ರತಿಯೊಂದಕ್ಕೂ ಟೀಕಿಸಿ ಮಾತನಾಡುತ್ತಿದ್ದಾರೆ. ಆದರೆ ಕಾನೂನು ಚೌಕಟ್ಟು ಮತ್ತು ಎಸ್‌ಐಟಿ ನಿಯಮದನ್ವಯ ತನಿಖೆ ನಡೆಯುತ್ತದೆ. ಸರ್ಕಾರ ಕೂಡಾ ಇದನ್ನು ಗಮನಿಸಿಯೇ ಕೆಲಸ ಮಾಡುತ್ತದೆ ಎಂದು ಹೇಳಿದರು.

## ಹೆಚ್ಚು ಮಳೆ ಬಂದು ತಮಿಳುನಾಡಿಗೆ ನೀರು ಹರಿಯಲಿ: ಡಿಕೆಶಿ

• ಉದಯವಾಹಿನಿ, ಬೆಂಗಳೂರು

ಕಾವೇರಿ ನೀರು ಪ್ರಾಧಿಕಾರ ತಮಿಳುನಾಡಿಗೆ 2.5 ಟಿಎಂಸಿ ನೀರು ಹರಿಸುವಂತೆ ಸೂಚನೆ ನೀಡಿದ ಬೆನ್ನಲ್ಲೇ ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ನಮಗೆ ಹೆಚ್ಚು ಮಳೆ ಬರಲಿ, ತಮಿಳುನಾಡಿಗೆ ನೀರು ಹರಿಯಲಿ ಎಂದು ನೀಡಿರುವ ಹೇಳಿಕೆ ವಿವಾದಕ್ಕೆ ಕಾರಣವಾಗಿದೆ. ಮಾಧ್ಯಮಗಳೊಂದಿಗೆ ಮಾತನಾಡುವಾಗ ಡಿಕೆ ಶಿವಕುಮಾರ್ 'ಹೆಚ್ಚು ಮಳೆ ಬರಲಿ, ಹೆಚ್ಚು ಮಳೆ ಬಂದಷ್ಟು ಒಳ್ಳೆಯದೇ. ಮಳೆಯೂ ಬರಲಿ, ತಮಿಳುನಾಡಿಗೆ ನೀರು ಹರಿಯಲಿ' ಎಂದಿದ್ದಾರೆ. ಅವರ ಈ ಹೇಳಿಕೆ ವಿಪಕ್ಷಗಳ ತೀವ್ರ ಟೀಕೆಗೆ ಗುರಿಯಾಗುವ ಎಲ್ಲಾ ಸಾಧ್ಯತೆಗಳಿವೆ.

1 ಗಾಳಿ ಆಂಜನೇಯ ದೇವಸ್ಥಾನದ ಬಳಿ ಮತ್ತೊಂದು ರಾಜಕಾಲುವೆ ನಿರ್ಮಿಸಲು ಆದೇಶ

2 ನಾಯಂಡಹಳ್ಳಿ ಬಳಿ ಗುಡಿಸಲುಗಳ ತೆರವಿಗೆ ಸೂಚನೆ

3 ರಾಗಿಗುಡ್ಡ ಜಂಕ್ಷನ್ ಬಳಿಯ ರಾಜಕಾಲುವೆ ಹೂಳೆತ್ತಿ

4 ಸಂಚಾರ ಸುಗಮಕ್ಕೆ ಡಬ್ಬಲ್ ಡೆಕ್ಕರ್ ಸೇತುವೆಗೆ ಸಲಹೆ

5 ಒಣಮರ ಮರಗಳನ್ನು ಗುರುತಿಸಿ ತೆರವುಗೊಳಿಸಿ

6 ಶಾಂತಿನಗರ ವಿಧಾನಸಭಾ ಕ್ಷೇತ್ರದ ಈಜಿಪುರ ಫ್ಲೈಓವರ್ ಕಾಮಗಾರಿ ಆರಂಭಗೊಂಡು ಆರು ತಿಂಗಳಾದರೂ ಕೇವಲ ಶೇ. 4 ಕಾಮಗಾರಿ.

7 ಮಂದಗತಿ ಕಾಮಗಾರಿ ನಡೆಸಿದ್ದಕ್ಕಾಗಿ ಕಂಪನಿ ಪ್ರತಿನಿಧಿಗಳ ವಿರುದ್ಧ ಸಿಎಂ ಸಿದ್ದರಾಮಯ್ಯ ಕೆಂಡಾಮಂಡಲ



# ಕಾಮಗಾರಿ ವೀಕ್ಷಣೆ ಮಳೆಹಾನಿಯಿಂದ ರಕ್ಷಣೆ

ಬೆಂಗಳೂರಿನಲ್ಲಿ ಮುಂಗಾರು ಪೂರ್ವ ಮಳೆಯಾಗುತ್ತಿದೆ. ಹಲವು ಕಡೆಗಳಲ್ಲಿ ಮಳೆಯಿಂದ ಹಾನಿ ಉಂಟಾಗಿದೆ. ತಗ್ಗು ಪ್ರದೇಶಗಳಿಗೆ ಮಳೆ ನೀರು ನುಗ್ಗಿ ಸಮಸ್ಯೆ ಉಂಟಾಗಿದೆ. ಈಗಾಗಲೇ ಬಿಬಿಎಂಪಿ ಈ ನಿಟ್ಟಿನಲ್ಲಿ ಎಚ್ಚೆತ್ತುಕೊಂಡಿದೆ. ರಾಜಕಾಲುವೆಗಳಲ್ಲಿ ಮಳೆ ನೀರು ಸುಲಲಿತವಾಗಿ ಹರಿಯುವ ನಿಟ್ಟಿನಲ್ಲಿ ಅಡೆತಡೆಗಳನ್ನು ತೆರವುಗೊಳಿಸುವ ಕೆಲಸವೂ ನಡೆಯುತ್ತಿದೆ. ಬೆಂಗಳೂರಿನಲ್ಲಿ ಕಳೆದ ಕೆಲವು ದಿನಗಳಿಂದ ಆಗುತ್ತಿರುವ ವ್ಯಾಪಕ ಮಳೆಯಿಂದಾಗಿ ಯಲಹಂಕ ಪ್ರದೇಶಗಳಲ್ಲೂ ವಿಲ್ಲಾಗಳಿಗೆ ನೀರು ನುಗ್ಗಿದೆ. ರಸ್ತೆ ಗುಂಡಿಗಳು ವ್ಯಾಪಕವಾಗಿ ಹೆಚ್ಚಾಗಿದ್ದು, ವಾಹನ ಸವಾರರು ಪರದಾಟ ನಡೆಸುವ ಪರಿಸ್ಥಿತಿ ನಿರ್ಮಾಣವಾಗಿದೆ.

- ಸಿದ್ದರಾಮಯ್ಯ ಮುಖ್ಯಮಂತ್ರಿ

**ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರುಗಳು ನಗರ ಸಂಚಾರ ನಡೆಸಿ ಮಳೆಯಿಂದಾಗಿ ಬಾಧಿತವಾದ ಪ್ರದೇಶಗಳ ಪರಿವೀಕ್ಷಣೆ ನಡೆಸಿದರು. ಸಚಿವರಾದ ರಾಮಲಿಂಗಾರೆಡ್ಡಿ , ಭೈರತಿ ಸುರೇಶ್, ಮಂಕಾಳ ಸುಬ್ಬವೈದ್ಯ, ವಿಧಾನಪರಿಷತ್ ಸದಸ್ಯರಾದ ಗೋವಿಂದ ರಾಜು, ನಾಗರಾಜ್ ಯಾದವ್, ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಘೋಯಲ್, ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿ ರಾಕೇಶ್ ಸಿಂಗ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೇರಿದಂತೆ ಹಲವರು ಜೊತೆಯಲ್ಲಿದ್ದರು.**

### ಒಣಮರ ತೆರವಿಗೆ ಆದೇಶ

ಬನಶಂಕರಿ ಎರಡನೇ ಹಂತದ 100 ಅಡಿ ರಸ್ತೆಯಲ್ಲಿ ಸಂಚರಿಸುವಾಗ ಒಣಮರಗಳನ್ನು ತೆರವುಗೊಳಿಸದೇ ಇರುವುದನ್ನು ಗಮನಿಸಿದ ಮುಖ್ಯಮತ್ರಿಯವರು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಮಳೆ ಗಾಳಿಯಿಂದ ಅನಾಹುತವಾಗಲಿ ಎಂದು ಕಾಯುತ್ತಿದ್ದೀರಾ? ಯಾವ ಕಾರಣಕ್ಕಾಗಿ ಒಣಮರಗಳನ್ನು ತೆರವುಗೊಳಿಸಿಲ್ಲ ಎಂದು ಮುಖ್ಯಮಂತ್ರಿ ಕಿಡಿಕಾರಿದರು. ನಗರ ಸೌಂದರ್ಯಕ್ಕೆ ಹೆಚ್ಚು ಒತ್ತು ಕೊಡಬೇಕು. ಪದನಾಭನಗರ ಮೇಲ್ಸೇತುವೆ ಬಳಿ ಹಾನಿಯಾಗಿರುವ ಫುಟ್ ಪಾತ್ ಅನ್ನು ಶೀಘ್ರವಾಗಿ ದುರಸ್ತಿಗೊಳಿಸಬೇಕು. ಮೆಟ್ರೋ, ಮೇಲ್ಸೇತುವೆ ಕಾಮಗಾರಿಗಳಿಂದಾಗಿ ಅಲ್ಲಲ್ಲಿ ಹಾಕಿರುವ ಡೆಬ್ರಿಸ್‌ಗಳನ್ನು ತೆರವುಗೊಳಿಸಬೇಕೆಂದು ಮುಖ್ಯಮಂತ್ರಿ ತಾಕೀತು ಮಾಡಿದ್ದಾರೆ.

### ಜೂ.7ಕ್ಕೆ ಮುಂಗಾರು ಪ್ರವೇಶ ಸಾಧ್ಯತೆ

ರಾಜ್ಯಕ್ಕೆ ಜೂ.7ರ ಬಳಿಕ ಮುಂಗಾರು ಪ್ರವೇಶ ಆಗುವ ಸಾಧ್ಯತೆ ಇದೆ. ಮೇ ಅಂತ್ಯಕ್ಕೆ ಮುಂಗಾರು ಕೇರಳಕ್ಕೆ ಪ್ರವೇಶ ಮಾಡಲಿದೆ. ಕರ್ನಾಟಕಕ್ಕೆ ಜೂನ್ ತಿಂಗಳಲ್ಲಿ ಪ್ರವೇಶ ಮಾಡುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಈ ನಿಟ್ಟಿನಲ್ಲಿ ಮಳೆ ಹಾನಿಗೆ ಈಗಾಗಲೇ ಸರ್ಕಾರ ಮುಂಜಾಗರೂ ಕತಾಕ್ರಮಗಳನ್ನು ಕೈಗೊಳ್ಳಲು ಮುಂದಾಗಿದೆ.

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರುಗಳು ನಗರ ಸಂಚಾರ ನಡೆಸಿ ಮಳೆಯಿಂದಾಗಿ ಬಾಧಿತವಾದ ಪ್ರದೇಶಗಳ ಪರಿವೀಕ್ಷಣೆ ನಡೆಸಿದರು. ಸಚಿವರಾದ ರಾಮಲಿಂಗಾರೆಡ್ಡಿ, ಭೈರತಿ ಸುರೇಶ್, ಮಂಕಾಳ ಸುಬ್ಬವೈದ್ಯ, ವಿಧಾನಪರಿಷತ್ ಸದಸ್ಯರಾದ ಗೋವಿಂದ ರಾಜು, ನಾಗರಾಜ್ ಯಾದವ್, ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಘೋ ಯಲ್, ನಗರಾಭಿವೃದ್ಧಿ ಇಲಾಖೆಯ ಅಪರ ಮುಖ್ಯಕಾರ್ಯದರ್ಶಿ ರಾಕೇಶ್ ಸಿಂಗ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೇರಿದಂತೆ ಹಲವರು ಜೊತೆಯಲ್ಲಿದ್ದರು.

ಆರಂಭದಲ್ಲಿ ವಿಜಯನಗರ ವಿಧಾನಸಭಾ ಕ್ಷೇತ್ರದ ಗಾಳಿ ಆಂಜನೇಯ ದೇವಸ್ಥಾನ ಸಮೀಪದ ರಾಜಕಾಲುವೆಯನ್ನು ಮುಖ್ಯಮಂತ್ರಿ ವೀಕ್ಷಿಸಿದರು. ಈ ಸಂದರ್ಭದಲ್ಲಿ ಸ್ಥಳೀಯರ ಜೊತೆ ಚರ್ಚೆ ನಡೆಸಿದರು. ವಾಡಿಕೆಗಿಂತ ಹೆಚ್ಚು ಮಳೆಯಾದ ಸಂದರ್ಭದಲ್ಲಿ ರಾಜಕಾಲುವೆಯಿಂದ ಪ್ರವಾಹ ತೀವ್ರವಾಗಲಿದೆ. ದೇವಸ್ಥಾನ ಸೇರಿದಂತೆ ಅಕ್ಕಪಕ್ಕದ ಜನವಸತಿ ಪ್ರದೇಶಗಳಿಗೂ ನೀರು ನುಗ್ಗಲಿದೆ ಎಂದು ಸ್ಥಳೀಯರು ವಿವರಿಸಿದರು.


ಪ್ರಸ್ತುತ ಚಾಲ್ತಿಯಲ್ಲಿರುವ ರಾಜಕಾಲುವೆಗೆ ಸಮಾನಾಂತರವಾಗಿ ಮತ್ತೊಂದು ಕಾಲುವೆ ನಿರ್ಮಿಸುವುದರಿಂದ ಪ್ರವಾಹವನ್ನು ತಗ್ಗಿಸಬಹುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮುಖ್ಯಮಂತ್ರಿಯವರಿಗೆ ವಿವರಿಸಿದರು. ಇದಕ್ಕೆ ಅಂದಾಜು 11.5 ಕೋಟಿ ರೂ. ಗಳ ವೆಚ್ಚವಾಗಲಿದೆ ಎಂದು ಯೋಜನಾ ನಕ್ಷೆ ಸಹಿತ ಮಾಹಿತಿ ನೀಡಿದರು. ಕಾಮಗಾರಿಯನ್ನು ಕೂಡಲೇ ಕೈಗೆತ್ತಿಕೊಳ್ಳುವಂತೆ ಸೂಚಿಸಿದ ಮುಖ್ಯಮಂತ್ರಿಯವರು, ರಾಜಕಾಲುವೆಗೆ ಕಸ ಎಸೆಯುವುದನ್ನು ತಡೆಗಟ್ಟಲು ಆದೇಶಿಸಿದರು.

### ನಗರದ ಇತರ ಭಾಗಗಳಲ್ಲೂ ಡಬಲ್ ಡೆಕ್ಕರ್

ಬಿಟಿಎಂ ಲೇಔಟ್‌ನ ಮೆಟ್ರೋ ಸ್ಟೇಷನ್‌ಗೆ ಭೇಟಿ ನೀಡಿ ಪರಿಶೀಲಿಸಿದ ಮುಖ್ಯಮಂತ್ರಿಯವರು, ಮೇಲುಸೇತುವೆ ರಸ್ತೆ ಹಾಗೂ ಮೆಟ್ರೋ ಮಾರ್ಗಗಳೆರಡೂ ಒಂದರ ಮೇಲೊಂದು ಇರುವ ಡಬಲ್ ಡೆಕ್ಕರ್ 2 ಟಯರ್ ವ್ಯವಸ್ಥೆಯನ್ನು ನಗರದ ಇತರ ಭಾಗಗಳಿಗೂ ಅಳವಡಿಸುವಂತೆ ಸೂಚನೆ ನೀಡಿದರು. ಮೂರು ಕಿ.ಮೀ. ಉದ್ದದ ಈ ವ್ಯವಸ್ಥೆ ಸಂಚಾರ ದಟ್ಟಣೆ ನಿವಾರಣೆಗೆ ಮಾದರಿಯಾಗಿದೆ ಎಂದು ಪ್ರಶಂಸಿಸಿದರು. ಸಿಲ್ಕ್ ಬೋರ್ಡ್ ಜಂಕ್ಷನ್ ಸಂಚಾರ ದಟ್ಟಣೆಗೆ ಪರಿಹಾರ ರೂಪವಾಗಿ ಈ ವ್ಯವಸ್ಥೆಯನ್ನು ಅಳವಡಿಸಲಾಗುತ್ತಿದೆ. ಇದಲ್ಲದೆ, ಸುಗಮ ಸಂಚಾರಕ್ಕಾಗಿ, ಬಿಟಿಎಂ ನಿಂದ ಬನಶಂಕರಿ ಕಡೆಗೆ ಹೋಗುವಾಗ, ರಾಘವೇಂದ್ರಸ್ವಾಮಿ ಟೆಂಪಲ್ ಸರ್ಕಲ್, ಜಯನಗರ 5ನೇ ಬ್ಲಾಕ್‌ನಲ್ಲಿ ಅಂಡರ್ ಪಾಸ್ ನಿರ್ಮಾಣಕ್ಕೆ ಬೇಡಿಕೆ ಇದ್ದು, ಇಲ್ಲಿ ಅಂಡರ್ ಪಾಸ್ ನಿರ್ಮಿಸಲು ಸೂಚಿಸಿದರು.

### ಗುಡಿಸಲು ತೆರವಿಗೆ ಆದೇಶ

ನಾಯಂಡಹಳ್ಳಿ ಬಳಿ ಸ್ಥಳ ವೀಕ್ಷಣೆ ನಡೆಸಿದ ಸಿಎಂ, ಡಿಸಿಎಂ ಅವರು ನೀರು ಸರಾಗವಾಗಿ ಹರಿಯಲು ಅಡ್ಡಿಯಾಗಿರುವ ಗುಡಿಸಲುಗಳನ್ನು ತೆರವುಗೊಳಿಸುವಂತೆ ಕೊಳಚೆ ನಿರ್ಮೂಲನಾ ಮಂಡಳಿಗೆ ಸೂಚಿಸಿದರು. ನಾಯಂಡಹಳ್ಳಿಯಲ್ಲಿ ಮೇಲುಸೇತುವೆ ನಿರ್ಮಿಸುವುದರಿಂದ ರಾಜಕಾಲುವೆ ವಿಸ್ತಾರ ಕಡಿಮೆಯಾಗಿದೆ. ಹೆಚ್ಚುವರಿ ಕಾಲುವೆ ನಿರ್ಮಾಣ 7 ಕೋಟಿ ರೂ. ವೆಚ್ಚದ ಕಾಮಗಾರಿಗೆ ತಾತ್ವಿಕ ಅನುಮೋದನೆ ಸಿಕ್ಕಿದೆ. ಆದರೆ ಅದಕ್ಕೆ ಆರ್ಥಿಕ ಇಲಾಖೆ ಹಾಗೂ ಕಂದಾಯ ಇಲಾಖೆ ಅನುಮೋದನೆ ಅಗತ್ಯವಿದೆ ಎಂದು ತುಷಾರ್ ಗಿರಿನಾಥ್‌ರವರು ವಿವರಿಸಿದರು. ಎರಡು ಇಲಾಖೆಗಳು ಶೀಘ್ರವೇ ಅನುಮೋದನೆ ನೀಡಬೇಕು. ಕಾಮಗಾರಿ ತುರ್ತಾಗಿ ಆರಂಭಗೊಳ್ಳಬೇಕೆಂದು ಮುಖ್ಯಮಂತ್ರಿಯವರು ಇದೇ ವೇಳೆ ಸೂಚನೆ ನೀಡಿದರು.ರಾಜಕಾಲುವೆಯ ಮಾರ್ಗದ ಸರ್ಕಾರಿ ಜಾಗದಲ್ಲಿ ಸುಮಾರು 20 ರಿಂದ 30 ಗುಡಿಸಲುಗಳು ತಲೆ ಎತ್ತಿದ್ದು, ಅವುಗಳನ್ನು ತೆರವುಗೊಳಿಸಿ ಪರ್ಯಾಯ ವ್ಯವಸ್ಥೆ ಮಾಡಬೇಕು ಎಂದು ಅಧಿಕಾರಿಗಳು ವಿವರಿಸಿದಾಗ ಈ ನಿಟ್ಟಿನಲಿ ಕ್ರಮ ಕೈಗೊಳ್ಳುವಂತೆ ಕೊಳಚೆ ನಿರ್ಮೂಲನ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದರು. ರಸ್ತೆಗಾಗಿ ಸ್ವಾಧೀನಪಡಿಸಿಕೊಳ್ಳಲಾದ ಭೂಮಿಗೆ ಪರ್ಯಾಯವಾಗಿ ಕೆಐಎಡಿಬಿ ಜಾಗ ನೀಡಬೇಕೆಂದು ಅಧಿಕಾರಿಗಳು ವಿವರಿಸಿದರು. ಈ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಮುಖ್ಯಮಂತ್ರಿಯವರು ಸೂಚನೆ ನೀಡಿದರು. ಉದ್ದೇಶಿತ ಕಾಮಗಾರಿ ಪೂರ್ಣಗೊಂಡರೆ ನೀರು ಹರಿಯುವಿಕೆ ಸರಾಗವಾಗಲಿದೆ ಎಂದು ವಿವರಿಸಲಾಯಿತು.



## ಫೋನ್ ಟ್ಯಾಪಿಂಗ್ ಮಾಡಿಲ್ಲ, ಮಾಡುವುದೂ ಇಲ್ಲ

• ಉದಯವಾಹಿನಿ, ಬೆಂಗಳೂರು

ನಾವು ಯಾವುದೇ ಫೋನ್ ಟ್ಯಾಪಿಂಗ್ ಮಾಡಿಲ್ಲ. ಮಾಡೋದು ಇಲ್ಲ. ಮಾಜಿ ಸಿಎಂ ಹೆಚ್.ಡಿ ಕುಮಾರಸ್ವಾಮಿ ಆರೋಪ ಎಲ್ಲಾ ಸುಳ್ಳು. ನಿರಾಧಾರವಾಗಿದೆ ಅಂತ ಸಿಎಂ ಸಿದ್ಧರಾಮಯ್ಯ ತಿರುಗೇಟು ನೀಡಿದ್ದಾರೆ.

ಇಂದು ಬೆಂಗಳೂರು ಸಿಟಿ ರೌಂಡ್ಸ್ ನಡೆಸಿದ ಬಳಿಕ, ಸಿಎಂ ಸಿದ್ಧರಾಮಯ್ಯ ಹಾಗೂ ಡಿಸಿಎಂ ಡಿ.ಕೆ ಶಿವಕುಮಾರ್ ಅವರು ಕೃಷ್ಣಾದಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು. ಲೋಕಸಭೆಯ ನಂತರ ಬಿಬಿಎಂಪಿ ಚುನಾವಣೆ ಬಗ್ಗೆ ಚಿಂತನೆ ಬಿಬಿಎಂಪಿ ಚುನಾವಣೆ ಬಗ್ಗೆ ಲೋಕಸಭೆ ಫಲಿತಾಂಶದ ನಂತರ ಚಿಂತಿಸಲಾಗುವುದು ಎಂದರು. ಸಿಎಂ , ಡಿಸಿಎಂ ಫೋಟೋ ಶೂಟ್ ಮಾಡಿಸಿಕೊಂಡಿದ್ದಾರೆ ಎಂದು ಬಿಜೆಪಿಯ ಪ್ರತಿಪಕ್ಷ ನಾಯಕ ಆರ್.ಅಶೋಕ್ ಹೇಳಿಕೆ ನೀಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ಆರ್. ಅಶೋಕ್ ಕೇವಲ ಸುಳ್ಳು ಹೇಳುತ್ತಾರೆ ಎಂದರು.



ನಮ್ಮ ರಾಜಕೀಯ ಜೀವನದಲ್ಲಿ ಫೋನ್ ಟ್ಯಾಪಿಂಗ್ ಮಾಡಿಲ್ಲ, ಮಾಡುವುದಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್. ಡಿ ಕುಮಾರಸ್ವಾಮಿ ಅವರ ಹೇಳಿಕೆಗೆ ಮುಖ್ಯಮಂತ್ರಿಗಳು ಪ್ರತಿಕ್ರಿಯೆ ನೀಡಿದರು. ಪ್ರಜ್ವಲ್ ರೇವಣ್ಣ ಅವರ ಪ್ರಕರಣವನ್ನು ಮರೆಮಾಚಲು ಈ ರೀತಿ ಹೇಳಿಕೆ ನೀಡುತ್ತಿದ್ದಾರೆ ಎಂದರು.

## 2ನೇ ಸಲ ವಿಚ್ಛೇದನ ಅರ್ಜಿ ಸಲ್ಲಿಕೆಗೆ ಕಾನೂನು ಅಡ್ಡಿಯಿಲ್ಲ

• ಉದಯವಾಹಿನಿ, ಬೆಂಗಳೂರು

ಕ್ರೌರ್ಯದ ಆಧಾರದಲ್ಲಿ ಪತಿ ಮೊದಲ ಬಾರಿ ಸಲ್ಲಿಸಿದ್ದ ವಿವಾಹ ವಿಚ್ಛೇದನ ಅರ್ಜಿ ತಿರಸ್ಕೃತಗೊಂಡಿದ್ದರೆ, ಎರಡನೇ ಸಲ ಅರ್ಜಿ ಸಲ್ಲಿಸಲು ಕಾನೂನಿನಲ್ಲಿ ಯಾವುದೇ ಅಡ್ಡಿ ಇಲ್ಲಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ. ಪತಿಯೊಬ್ಬ ತನ್ನ ಮೊದಲನೇ ವಿವಾಹ ವಿಚ್ಛೇದನದ ಅರ್ಜಿ ತಿರಸ್ಕೃತಗೊಂಡ ನಂತರ ಸಲ್ಲಿಸಿದ್ದ ಎರಡನೇ ಅರ್ಜಿಯನ್ನು ಪುರಸ್ಕರಿಸಿದೆ. ಅಲ್ಲದೇ ವಿಚ್ಛೇದನ ಅರ್ಜಿ ತಿರಸ್ಕರಿಸಿದ್ದ ಮೈಸೂರಿನ ನ್ಯಾಯಾಲಯದ ಆದೇಶ ರದ್ದುಗೊಳಿಸಿ ವಿಚ್ಛೇದನ ಮಂಜೂರು ಮಾಡಿದೆ. ಪತಿ ಸಲ್ಲಿಸಿದ್ದ ಮೇಲ್ಮನವಿ ಆಲಿಸಿದ ನ್ಯಾ. ಅನು ಸಿವರಾಮನ್ ಮತ್ತು ನ್ಯಾ. ಅನಂತ ರಾಮನಾಥ ಹೆಗಡೆ ಅವರಿದ್ದ ವಿಭಾಗೀಯ ಪೀಠ, ಒಂದು ವೇಳೆ ಪತಿ ತನ್ನ ಮಗನಿಗಾಗಿ ಕಾನೂನುಬದ್ಧವಾಗಿ ನಿರ್ವಹಿಸಬೇಕಾಗಿರುವ ಕರ್ತವ್ಯಗಳನ್ನು ಪಾಲನೆ ಮಾಡದಿದ್ದರೂ ಆತ ತನ್ನ ವಿರುದ್ಧ ಪತ್ನಿಯ ಮಾನಸಿಕ ಕೌರ್ಯ ಸಾಬೀತುಪಡಿಸಿದರೆ ಸಾಕು. ಆತನಿಗೆ ವಿವಾಹ ವಿಚ್ಛೇದನ ಮಂಜೂರು ಮಾಡಬೇಕಾಗುತ್ತದೆ, ಎಂದು ಹೇಳಿದೆ. ಪತಿ ಹಾಗೂ ಪತ್ನಿ ಪರಸ್ಪರ ಮಗುವಿನ ಸುಪರ್ದಿ ಮತ್ತು ನಿರ್ವಹಣೆ ವಿಚಾರವಾಗಿ ಸಹಮತಕ್ಕೆ ಬಂದಿದ್ದಾರೆ. ದಾಖಲೆಗಳನ್ನು ಪರಿಶೀಲಿಸಿದರೆ ಪತ್ನಿಯು ಪತಿಯ ಅನೈತಿಕ ಸಂಬಂಧವನ್ನು ಸಾಬೀತುಪಡಿಸಿಲ್ಲ. ಜತೆಗೆ ಅರ್ಜಿದಾರರು ಹೇಳಿರುವಂತೆ ಪತ್ನಿಯು, ಪತಿಯ ಕಚೇರಿಗೆ ಹೋಗಿ ಅವರ ಸಹೋದ್ಯೋಗಿಗಳ ಮುಂದೆ ಸಾಕಷ್ಟು ಹಿಯಾಳಿಸಿ ಮಾತನಾಡಿದ್ದಾರೆ. ಇದನ್ನು ಪಾಟೀ ಸವಾಲಿನಲ್ಲಿ ಪತ್ನಿ ನಿರಾಕರಿಸಿಲ್ಲ. ಇದನ್ನು ಪರಿಗಣಿಸಿದರೆ ಪತಿಯು ಪತ್ನಿಯಿಂದ ಮಾನಸಿಕ ಕ್ರೌರ್ಯ ಅನುಭವಿಸುತ್ತಿದ್ದೇನೆ ಎನ್ನುವ ವಾದದಲ್ಲಿ ಹುರುಳಿದೆ. ಹಾಗಾಗಿ, ಪತಿಗೆ ವಿಚ್ಛೇದನ ಮಂಜೂರು ಮಾಡಲಾಗುವುದು, ಎಂದು ನ್ಯಾಯಪೀಠ ಆದೇಶಿಸಿದೆ.




# ರಾಜ್ಯ ವಿಧಾನ ಪರಿಷತ್ ಚುನಾವಣೆ: 3 ಸ್ಥಾನಗಳಿಗೆ ತಲಾ 3 ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸಿದ ಬಿಜೆಪಿ

**| ಆರು ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳಿಂದ ವಿಧಾನಪರಿಷತ್ತಿಗೆ ನಡೆಯುವ ಚುನಾವಣೆ |ಫೋನ್ ಟ್ಯಾಪ್ ಮಾಡುವುದು ಅಕ್ರಮ, ಅಂತಹವರನ್ನು ಜೈಲಿಗೆ ಕಳುಹಿಸಬೇಕು**

• ಉದಯವಾಹಿನಿ, ಬೆಂಗಳೂರು


**ಪ್ರಕರಣವನ್ನು ಸರ್ಕಾರ ಸಿಬಿಐಗೆ ವಹಿಸಿ**

ಜೂನ್ 13 ರಂದು ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ನಡೆಯಲಿರುವ ಚುನಾವಣೆಯಲ್ಲಿ ಪಕ್ಷವು ಗೆಲ್ಲಬಹುದಾದ ಮೂರು ಸ್ಥಾನಗಳಿಗೆ ತಲಾ ಮೂರು ಹೆಸರುಗಳನ್ನು ಕಳುಹಿಸುವಂತೆ ಬಿಜೆಪಿ ಹೈಕಮಾಂಡ್ ರಾಜ್ಯ ಘಟಕಕ್ಕೆ ಸೂಚಿಸಿದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಹೇಳಿದ್ದಾರೆ. ವಿಧಾನ ಪರಿಷತ್ ಚುನಾವಣೆಗೆ ಕಾರ್ಯತಂತ್ರಗಳ ಬಗ್ಗೆ ಚರ್ಚಿಸಲು ಪಕ್ಷದ ನಾಯಕರು ಸಭೆ ಸೇರಿದ ನಂತರ ಸುದ್ದಿಗಾರ ರೊಂದಿಗೆ ಮಾತನಾಡಿದ ಅಶೋಕ್, ಅಭ್ಯರ್ಥಿಗಳ ಹೆಸರುಗಳನ್ನು ಹೈಕಮಾಂಡ್ ಮಟ್ಟದಲ್ಲಿ ನಿರ್ಧರಿಸಲಾಗುವುದು. ರಾಜ್ಯ ಘಟಕವು ಮೂರು ಸ್ಥಾನಗಳಿಗೆ ತಲಾ ಮೂರು ಹೆಸರುಗಳನ್ನು ಶೀಘ್ರದಲ್ಲೇ ಕಳುಹಿಸಲಿದೆ ಎಂದು ಅವರು ಹೇಳಿದರು.

ಆರು ಪದವೀಧರ ಮತ್ತು ಶಿಕ್ಷಕರ ಕ್ಷೇತ್ರಗಳಿಂದ ವಿಧಾನ ಪರಿಷತ್ತಿಗೆ ನಡೆಯುವ ಚುನಾವಣೆಯ ಬಗ್ಗೆ ಮಾತನಾಡಿದ ಅಶೋಕ್, ಮತದಾರರನ್ನು ಗುರುತಿಸಿ ಪಕ್ಷದ ಅಭ್ಯರ್ಥಿಗಳಿಗೆ ಮತ ಚಲಾಯಿಸುವಂತೆ ಮಾಡಲು ಪ್ರತಿ ಮತಗಟ್ಟೆಗೆ ಉಸ್ತುವಾರಿಗಳನ್ನು ನೇಮಿಸಲು ಬಿಜೆಪಿ ನಿರ್ಧರಿಸಿದೆ ಎಂದು ಹೇಳಿದರು. ಆಡಳಿತಾರೂಢ ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಅಶೋಕ್, ರಾಜ್ಯದಲ್ಲಿ ದೂರವಾಣಿ ಕದ್ದಾಲಿಕೆ ವಾಸ್ತವ ಎಂದು ಕೆಲವು ಪೊಲೀಸ್ ಅಧಿಕಾರಿಗಳು ನನಗೆ ಹೇಳಿದ್ದಾರೆ ಎಂದು ಹೇಳಿದರು.

**ಫೋನ್ ಟ್ಯಾಪ್ ಮಾಡುವುದು ಅಕ್ರಮ**

ಫೋನ್ ಕದ್ದಾಲಿಕೆಯನ್ನು ರಾಜ್ಯ ಸರ್ಕಾರವೇ ಮಾಡುತ್ತಿದೆ. ಇದು ಸುಳ್ಳು ಎಂದಾದರೆ ಕೂಡಲೇ ಈ ಪ್ರಕರಣವನ್ನು ಸರ್ಕಾರ ಸಿಬಿಐಗೆ ವಹಿಸಿ ಪ್ರಕರಣಕ್ಕೆ ತಾರ್ಕಿಕ ಅಂತ್ಯ ಕಾಣಿಸಲಿ ಎಂದು ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಫೋನ್ ಟ್ಯಾಪಿಂಗ್ ಬಗ್ಗೆ ಮಾ ಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಹೇಳಿದ್ದಾರೆ.ಅವರಿಗೆ ಪೊಲೀಸ್ ಅಧಿಕಾರಿಗಳು ಸಂಪರ್ಕದಲ್ಲಿದ್ದು, ಅವರಿಂದ ತಿಳಿದುಕೊಂಡು ಹೇಳಿರಬಹುದು. ಫೋನ್ ಟ್ಯಾಪ್ ಮಾಡುವುದು ಅಕ್ರಮವಾಗಿದ್ದು, ಹಣ ಕೊಟ್ಟರೆ ಚೀನಾದಿಂದ ಉಪಕರಣ ಸಿಗುತ್ತದೆ. ರಾಜ್ಯಕ್ಕೆ ಇಂತಹ ಉಪಕರಣ ಎಷ್ಟು ಬಂದಿದೆ, ಎಲ್ಲೆಲ್ಲಿದೆ ಎಂದು ಪತ್ತೆ ಮಾಡಬೇಕು. ವಿರೋಧ ಪಕ್ಷಗಳ ನಾಯಕರ ಫೋನ್ ಟ್ಯಾಪ್ ಮಾಡಲಾಗುತ್ತಿದೆ ಎಂದು ನನಗೂ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ. ಈ ಬಗ್ಗೆ ಸರ್ಕಾರ ತನಿಖೆ ಮಾಡಿಸಲಿ ಎಂದು ಆಗ್ರಹಿಸಿದರು. ಫೋನ್ ಟ್ಯಾಪ್ ಮಾಡುವವರನ್ನು ಜೈಲಿಗೆ ಕಳುಹಿಸಬೇಕು. ಹಿಂದೆಯೂ ಈ ರೀತಿ ಪೊಲೀಸ್ ಅಧಿಕಾರಿಗಳು ಮಾಡಿ ತನಿಖೆಗೆ ಒಳಗಾಗಿದ್ದರು. ಸರ್ಕಾರ ಈ ಪ್ರಕರಣವನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು. ಸರ್ಕಾರ ಇದನ್ನು ಮಾಡಿಲ್ಲವೆಂದು ಎದೆ ಮುಟ್ಟಿ ಹೇಳುವುದಾದರೆ ತನಿಖೆಗೆ ನೀಡಲಿ. ಇದನ್ನು ತಾರ್ಕಿಕ ಅಂತ್ಯಕ್ಕೆ ಮುಟ್ಟಿಸಲಿ ಎಂದು ಒತ್ತಾಯಿಸಿದರು.



### ಹೆಣ್ಣು ಮಕ್ಕಳು ಕಾಲೇಜಿಗೆ ಹೋದರೆ ವಾಪಸ್ಸಾಗುವ ಗ್ಯಾರಂಟಿ ಇಲ್ಲ

ರಾಜ್ಯದಲ್ಲಿ ಕಾಂಗ್ರೆಸ್ ಟ್ಯಾಕ್ಸ್ ಎಂಬ ಕಮೀಷನ್ ಪದ್ಧತಿ ಇದೆ ಎಂದು ಆರೋಪಿಸಿರುವ ವಿಪಕ್ಷ ನಾಯಕ ಆರ್ ಅಶೋಕ್ ಅದನ್ನು ದಿಲ್ಲಿಗೆ ಸಾಗಿಸಲು ಸುರಂಗ ರಸ್ತೆ ನಿರ್ಮಾಣ ಮಾಡಲಿ, ಇಲ್ಲದಿದ್ದರೆ ಮೋದಿ ಹಿಡಿಯುತ್ತಾರೆ ಎಂದು ವ್ಯಂಗ್ಯವಾಡಿದ್ದಾರೆ. ಬೆಂಗಳೂರಿನಲ್ಲಿ ನೀರಿನ ಸಮಸ್ಯೆ ತಂದು 'ಬ್ಯಾಡ್ ಬೆಂಗಳೂರು' ಮಾಡಿದ್ದಾರೆ. ಡೆವಲಪರ್‌ಗಳು ಚದರ ಅಡಿಗೆ 100 ರೂ. 'ಕಾಂಗ್ರೆಸ್ ಟ್ಯಾಕ್ಸ್' ಎಂಬ ಕಮಿಷನ್ ಕೊಡಬೇಕಿದೆ. ಈ ಕಮಿಷನ್ ಸಾಗಿಸಲು ಸುರಂಗ ನಿರ್ಮಾಣ ಯೋಜನೆ ಮಾಡಿದ್ದಾರೆ. ಏಕೆಂದರೆ ವಿಮಾನ, ರೈಲಿನಲ್ಲಿ ಹೋದರೆ ಪ್ರಧಾನಿ ಮೋದಿ ಹಿಡಿಯುತ್ತಾರೆ. ಹಾಗಾಗಿ ಸುರಂಗ ಮಾರ್ಗ ಮಾಡಿ ದಿಲ್ಲಿಗೆ ಸಾಗಿಸಲಿ, ಎಂದು ಆರ್.ಅಶೋಕ್ ವ್ಯಂಗ್ಯವಾಡಿದರು. ಸಿಎಂ ಅವರು ರಾಜ್ಯದ ಜನತೆಗೆ ಧನ್ಯವಾದ ತಿಳಿಸಿದ್ದಾರೆ. ಅವರು ಕಾಂಗ್ರೆಸ್ ಸರಕಾರದ ಅವಧಿ ಮುಗಿಯಿತೆಂಬ ಕಾರಣಕ್ಕೆ ಧನ್ಯವಾದ ಹೇಳಿದ್ದಾರೋ ಅಥವಾ ಕಾನೂನು ಸುವ್ಯವಸ್ಥೆ ಹಾಳು ಮಾಡಿರುವ ಕೊಲೆಗಾರರಿಗೆ ಧನ್ಯವಾದ ತಿಳಿಸಿದ್ದಾರೋ ಗೊತ್ತಿಲ್ಲ. ಒಂದು ವರ್ಷದಲ್ಲಿ ಮಗು ಕೂಡ ಅಂಬೆಗಾಲಿಡುತ್ತದೆ. ಆದರೆ ಸರಕಾರ ಇನ್ನೂ ಟೇಕಾಫ್ ಆಗಿಲ್ಲ. ನೇಹಾ, ಅಂಜಲಿ ಕೊಲೆಯಾಗಿದ್ದು, ಮುಂದೆ ಯಾರ ಕೊಲೆ ಎಂಬ ಆತಂಕವಿದೆ. ಹೆಣ್ಣು ಮಕ್ಕಳು ಕಾಲೇಜಿಗೆ ಹೋದರೆ ವಾಪಸ್ಸಾಗುವ ಗ್ಯಾರಂಟಿ ಇಲ್ಲ. ಅಂಜಲಿಯ ಕೊಲೆಯಲ್ಲಿ ಪೊಲೀಸರ ಲೋಪವಿದೆ ಎಂದು ಗೃಹ ಸಚಿವರೇ ಒಪ್ಪಿಕೊಂಡಿದ್ದು, ಸರಕಾರ ಏಕೆ ಇರಬೇಕು, ಎಂದು ತರಾಟೆಗೆ ತೆಗೆದುಕೊಂಡರು.

**ಈ ದಿನದ ದರ** ಪೆಟ್ರೋಲ್: 99.84 ₹/L ಡೀಸೆಲ್ : 85.93 ₹/L ಬಂಗಾರ: ₹7,451/Gram(24ct) ₹6,830/Gram(22ct) ಬೆಳ್ಳಿ: ₹95.50/Gram



## ಸಿದ್ಧಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಘೋರವೆನಿಪ ರಾಜಸವದರಿಂದ

ನಿಜಗುಣರ ಪರಮಾರ್ಥ ಗೀತೆಯ ಮಾತು. ರಜೋಗುಣದ ಘೋರ ವೃತ್ತಿಯ ತೈಜಸ ಅಹಂಕಾರದಿಂದ ಮಾತು ಕೈ ಕಾಲು ಗುಹ್ಯ ಗುದ ಎಂಬ ಐದು ಕರ್ಮೇಂದ್ರಿಯಗಳು ಹುಟ್ಟುವವು. ಇನ್ನು ಶಾಂತ ವೃತ್ತಿಯ ವೈಕಾರಿಕ ಅಹಂಕಾರದಿಂದ ಕಿವಿ ಕಣ್ಣು ಮೂಗು ನಾಲಿಗೆ ಚರ್ಮ ಎಂಬ ಐದು ಜ್ಞಾನೇಂದ್ರಿಯಗಳು ಹುಟ್ಟುವವು. ಈ ಹತ್ತು ಇಂದ್ರಿಯಗಳು ಜ್ಞಾನಕ್ಕೆ ಹಾಗೂ ಕಾರ್ಯಕ್ಕೆ ಅಸಾಧಾರಣ ಕಾರಣಗಳಾಗಿರುವುದರಿಂದ ಇವುಗಳನ್ನು ಕರಣ ಎಂದು ಕರೆಯಲಾಗಿದೆ. ಚೈತನ್ಯ ಸ್ವರೂಪನಾದ ನಿನ್ನಿಂದ ಉದಿಸಿದ ಇವು ನಿನ್ನಲ್ಲಿಯೇ ತೋರುತ್ತವೆ. ನಿನ್ನ ಹೊರತು ಇವುಗಳಿಲ್ಲ.

## ಕರ್ನಾಟಕದಲ್ಲಿ ಜೆಡಿಎಸ್ ಪಕ್ಷದ ಕತೆ ಮುಗೀತು: ಕಾಂಗ್ರೆಸ್

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಜೆಡಿಎಸ್ ಅಸ್ತಿತ್ವ ಕಳೆದುಕೊಂಡಿದೆ. ಹೀಗಾಗಿ ಜೆಡಿಎಸ್ ಪಕ್ಷದ ಕತೆ ಮುಗಿದ ಅಧ್ಯಾಯ ಎಂಬುದಾಗಿ ಕರ್ನಾಟಕ ಕಾಂಗ್ರೆಸ್ ಭವಿಷ್ಯ ನುಡಿದಿದೆ. ಎಕ್ಸ್ ಮಾಡಿರುವಂತ ಕರ್ನಾಟಕ ಕಾಂಗ್ರೆಸ್, ರಾಜ್ಯದಲ್ಲಿ ಅಸ್ತಿತ್ವ ಕಳೆದುಕೊಂಡ ಜೆಡಿಎಸ್ ಪಕ್ಷದ ಕತೆ ಮುಗಿದ ಮುಗಿದ ಅಧ್ಯಾಯ.ಆದರೆ ಜೆಡಿಎಸ್ ಪಕ್ಷದ ಐಟಿ ಸೆಲ್ ಅಸ್ತಿತ್ವ ತೋರಿಸಿಕೊಳ್ಳಲು ಹೆಣಗಾಡುತ್ತಿದೆ ಎಂದಿದೆ. ಬಿಜೆಪಿಯ 40% ಕಮಿಷನ್ ಸರ್ಕಾರದಿಂದಾಗಿ ರಾಜಕಾಲುವೆಗಳ ಒತ್ತುವರಿಯ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದೆ ತನ್ನ ಕಮಿಷನ್ ಕಳ್ಳಾಟವನ್ನು ಮುಂದುವರೆಸಿತ್ತು, ನಮ್ಮ ಸರ್ಕಾರ ರಾಜ ಕಾಲುವೆಗಳ ಒತ್ತುವರಿಯನ್ನು ಮುಲಾಜಿಲ್ಲದೆ ತೆರವು ಮಾಡಲಿದೆ ಎಂದು ಹೇಳಿದೆ. ಚರಂಡಿ, ಕಾಲುವೆ ಸೇರಿದಂತೆ ನೀರು ಹರಿದು ಹೋಗುವ ಎಲ್ಲಾ ಮಾರ್ಗಗಳನ್ನು ಸ್ವಚ್ಛಗೊಳಿಸಿ ಮಳೆಗಾಲ ಎದುರಿಸಲು ಸಿದ್ಧವಾಗಿದೆ ತಿಳಿಸಿದೆ. ಜೆಡಿಎಸ್ ನಾಯಕರೇ, ಅಂದಹಾಗೆ ನಿಮ್ಮ ಪ್ರಜ್ವಲ್ ರೇವಣ್ಣ ಎಲ್ಲಿ ಬ್ರದರ್ ಸ್ವಾಮಿಗಳ ಜೇಬಲ್ಲಿದ್ದ ಪೆನ್ ಡ್ರೈವ್ ಎಲ್ಲಿ ಹೋಯ್ತು ನಿಮ್ಮ ನಾಯಕರು ಸಂತ್ರಸ್ತ ಮಹಿಳೆಯರನ್ನು ಸಂತೈಸುವುದು ಯಾವಾಗ? ಎಂದು ಕೇಳಿದೆ.

## ಶೈಕ್ಷಣಿಕ ವರ್ಷದ ಆರಂಭಕ್ಕೂ ಮೊದಲೇ ಖಾಸಗಿ ಶಾಲೆಗಳು ಆರಂಭ!

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಮೇ. 29 ರಿಂದ ಎಲ್ಲಾ ಸರ್ಕಾರಿ, ಅನುದಾನಿತ ಶಾಳೆಗಳು ಆರಂಭಿಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಆದರೆ ಖಾಸಗಿ ಶಾಲೆಗಳು ಆದೇಶ ಉಲ್ಲಂಘಿಸಿ ಅವಧಿಗೂ ಮುನ್ನವೇ ಶಾಲೆಗಳನ್ನು ಆರಂಭಿಸಿವೆ. ರಾಜ್ಯಾದ್ಯಂತ ಮೇ. 29 ರಿಂದ ಎಲ್ಲಾ ಶಾಲೆಗಳು ಆರಂಭಿಸುವಂತೆ ಶಾಲಾ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಆದರೆ ಶಿಕ್ಷಣ ಇಲಾಖೆಯ ಆದೇಶಕ್ಕೆ ಡೋಂಟ್ ಕೇರ್ ಎನ್ನುವಂತೆ ಬೆಂಳೂರಿನ ಹಲವು ಖಾಸಗಿ ಶಾಲೆಗಳು ಅವಧಿಗೂ ಮುನ್ನವೇ ಖಾಸಗಿ ಶಾಲೆಗಳನ್ನು ಆರಂಭಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮಕ್ಕಳ ಹಕ್ಕುಗಳ ಆಯೋಗ ಇಂದು ಬೆಂಗಳೂರಿನಲ್ಲಿ ಆಯೋಗದ ಅಧ್ಯಕ್ಷ ನಾಗನಗೌಡ ನೇತೃತ್ವದಲ್ಲಿ ದಾಳಿ ನಡೆಸಲಾಗಿದೆ. ಅವಧಿಗೂ ಮುನ್ನ ಆರಂಭಿಸಿರುವ ಖಾಸಗಿ ಶಾಲೆಗಳ ವಿರುದ್ಧ ಕ್ರಮಕ್ಕೆ ಮುಂದಾಗಿದ್ದಾರೆ.

## ಕರ್ನಾಟಕ ಶಾಸ್ತ್ರೀಯ ಸಂಗೀತ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದ ವತಿಯಿಂದ ಶ್ರೀ ನರಸಿಂಹ ಜಯಂತಿ ಸಂಗೀತೋತ್ಸವದ ಪ್ರಯುಕ್ತ ಮೇ 24, ಶುಕ್ರವಾರ ಸಂಜೆ 7-00 ಗಂಟೆಗೆ ಕು|| ದೀಪ್ತಿ ಮೋಹನ್ ಇವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ. ವಾದ್ಯ ಸಹಕಾರ : ವಿ|| ಕೃಷ್ಣ ಕಶ್ಯಪ್ (ಪಿಟೀಲು), ವಿ|| ನರಸಿಂಹ ಆರ್. ಐಯ್ಯಂಗಾರ್ (ಮೃದಂಗ), ವಿ|| ಸಚಿನ್ (ಘಟ). ಸ್ಥಳ : ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, 15ನೇ ಅಡ್ಡರಸ್ತೆ, (ಬಿಜೆಪಿ ಕಛೇರಿ ಹತ್ತಿರ) ಮಲ್ಲೇಶ್ವರಂ, ಬೆಂಗಳೂರು-560003.

## ವಿರಾಟ್ ಕೊಹ್ಲಿ ಅತ್ಯುತ್ತಮ ಆಯ್ಕೆ, ಆರ್‌ಸಿಬಿ ಕಪ್ ಗೆದ್ದೇ ಗೆಲ್ಲುತ್ತೆ

• ಉದಯವಾಹಿನಿ, ಬೆಂಗಳೂರು

ವರ್ಷ ಐಪಿಎಲ್ ಗೆಲ್ಲುವ ಉತ್ತಮ ಅವಕಾಶ ಆರ್‌ಸಿಬಿಗೆ ಇದೆ ಎಂದು ಆರ್ ಸಿಬಿಯ ಮಾಜಿ ಮಾಲೀಕ ವಿಜಯ್ ಮಲ್ಯ ಟ್ವೀಟ್ ಮಾಡಿದ್ದಾರೆ. 2008ರಲ್ಲಿ ವಿರಾಟ್ ಕೊಹ್ಲಿಯನ್ನು ಖರೀದಿಸಿದಾಗ ಅದು ಉತ್ತಮ ನಿರ್ಧಾರ ಎಂದು ನನಗೆ ತಿಳಿದಿತ್ತು ಎಂದು ಮಲ್ಯ ಹೇಳಿದರು. ಐಪಿಎಲ್ 2024ರ ಎಲಿಮಿನೇಟರ್ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್‌ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಗಳು



ಮುಖಾಮುಖಿಯಾಗಲಿದ್ದು, ಬುಧವಾರ (ಮೇ22) ಅಹಮದಾಬಾದ್‌ನಲ್ಲಿ ನಡೆಯಲಿರುವ ಈ ಪಂದ್ಯವು ಉಭಯ ತಂಡಗಳಿಗೂ ನಿರ್ಣಾಯಕ. ಅಂದರೆ ಈ ಮ್ಯಾಚ್‌ನಲ್ಲಿ ಸೋತ ತಂಡ ಐಪಿಎಲ್‌ನಿಂದ ಹೊರಬೀಳಲಿದೆ.ಈ ಪಂದ್ಯಕ್ಕೂ ಮುನ್ನ ಆರ್‌ಸಿಬಿ ತಂಡದ ಮಾಜಿ ಮಾಲೀಕ ವಿಜಯ ಮಲ್ಯ ತಂಡಕ್ಕೆ ಶುಭಕೋರಿ ಕಪ್ ಗೆಲ್ಲುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಎಕ್ಸ್‌ನಲ್ಲಿ ಬರೆದುಕೊಂಡಿರುವ ವಿಜಯ ಮಲ್ಯ, ನಾನು ಆರ್‌ಸಿಬಿ ಫ್ರಾಂಚೈಸಿಗೆ, ವಿರಾಟ್ ಕೊಹ್ಲಿಗಾಗಿ ಬಿಡ್ ಮಾಡಿದಾಗ ಇದಕ್ಕಿಂತ ಉತ್ತಮ ಆಯ್ಕೆಗಳಿಲ್ಲ ಎಂದು ನನ್ನ ಒಳ ಮನಸ್ಸು ಹೇಳುತ್ತಿತ್ತು. ಇದೀಗ ಅದೇ ಮನಸ್ಸು, ಆರ್‌ಸಿಬಿ ತಂಡಕ್ಕೆ ಟ್ರೋಫಿ ಗೆಲ್ಲಲು ಉತ್ತಮ ಅವಕಾಶವಿದೆ ಎಂದು ಹೇಳ್ತಿದೆ. ಚಿಂತಿಸದೆ ಮುನ್ನುಗ್ಗಿ, ಬೆಸ್ಟ್ ಆಫ್ ಲಕ್ ಎಂದು ತಂಡಕ್ಕೆ ಶುಭ ಹಾರೈಸಿದ್ದಾರೆ.

## ಹೊಯ್ಸಳ ವಾಹನದಲ್ಲಿ ವಸೂಲಿ ಮಾಡುತ್ತಿದ್ದ ಇಬ್ಬರು ಪೊಲೀಸ್ ಸಿಬ್ಬಂದಿ ಸಸ್ಪೆಂಡ್!

• ಉದಯವಾಹಿನಿ, ಬೆಂಗಳೂರು

ನಕಲಿ ಪೊಲೀಸರು ಹೊಯ್ಸಳ ವಾಹನದಲ್ಲಿ ಬಂದು ಜನರಿಂದ ಹಣ ವಸೂಲಿ ಮಾಡುತ್ತಿದ್ದಾರೆ ಎಂದು ಆರೋಪಿಸಿ ಸಾರ್ವಜನಿಕರು ಅಟ್ಟಿಸಿಕೊಂಡು ಹೋಗಿದ್ದ ಘಟನೆ ಸಂಬಂಧ ಇಬ್ಬರು ಪೊಲೀಸ್ ಸಿಬ್ಬಂದಿ ಅಮಾನತ್ ಆಗಿದ್ದಾರೆ. ಬೆಂಗಳೂರು ಪೊಲೀಸ್ ಆಯುಕ್ತ ಬಿ.ದಯಾನಂದ್‌ಈ ಆದೇಶ ಹೊರಡಿಸಿದ್ದಾರೆ. ಹೊಯ್ಸಳ ವಾಹನದಲ್ಲಿ ತೆರಳಿ ರಸ್ತೆ ಮೇಲೆ ನಿಂತು ಸಾರ್ವಜನಿಕರಿಂದ ಸುಲಿಗೆ ಮಾಡುತ್ತಿದ್ದ ಪೊಲೀಸರನ್ನು ಕಳ್ಳ ಕಳ್ಳ ಎಂದು ಕೂಗುತ್ತ ಸಾರ್ವಜನಿಕರು ಅಟ್ಟಿಸಿಕೊಂಡು ಹೋಗಿದ್ದ ಘಟನೆ ಬೆಂಗಳೂರಿನಲ್ಲಿ ನಡೆದಿತ್ತು. ರಾಜಗೋಪಾಲನಗರ ಠಾಣೆಯ ಎಎಸ್‌ಐ ರಾಮಲಿಂಗಯ್ಯ, ಹೆಡ್ ಕಾನ್ಸ್‌ಟೇಬಲ್‌ಪ್ರಸನ್ನ ಕುಮಾರ್ ಅವರನ್ನು ಬೆಂಗಳೂರು ಪೊಲೀಸ್‌ಆಯುಕ್ತ ಬಿ.ದಯಾನಂದ್ ಸಸ್ಪೆಂಡ್ ಮಾಡಿ ಆದೇಶ ಹೊರಡಿಸಿದ್ದಾರೆ. ರಾಮಲಿಂಗಯ್ಯ ಮತ್ತು ಪ್ರಸನ್ನ ಕುಮಾರ್ ಹೊಯ್ಸಳ ವಾಹನದಲ್ಲಿ ಬಂದು ಜನರ ಬಳಿ ಹಣ ವಸೂಲಿ ಮಾಡುತ್ತಿದ್ದರು. ಇದನ್ನು ಕೆಲವರು ವಿಡಿಯೋ ಮಾಡಿದ್ದು ಬಳಿಕ ಕಳ್ಳ, ಕಳ್ಳ ಎಂದು ಅಟ್ಟಿಸಿಕೊಂಡು ಹೋಗಿದ್ದರು. ಈ ಘಟನೆ ಪೊಲೀಸ್ ಇಲಾಖೆಗೆ ಬಹಳ ಮುಜುಗರ ತಂದಿತ್ತು. ಹೀಗಾಗಿ ಪೊಲೀಸ್ ಕಮಿಷನರ್ ತನಿಖೆಗೆ ಆದೇಶ ನೀಡಿದ್ದರು. ಸದ್ಯ ಈಗ ಇಬ್ಬರು ಪೊಲೀಸ್ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ.

# ಪ್ರಜ್ವಲ್ ಪ್ರಕರಣ ರಾಹುಲ್ ಗಾಂಧಿ ವಿರುದ್ಧ ಜೆಡಿಎಸ್ ದೂರು

■ ರಾಹುಲ್ ಗಾಂಧಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಪಕ್ಷ ಒತ್ತಾಯ ■ ಕಾಂಗ್ರೆಸ್ ಪಕ್ಷದ ಬಹಿರಂಗ ಸಭೆ

• ಉದಯವಾಹಿನಿ, ಬೆಂಗಳೂರು

ನಾನೂರು ಮಹಿಳೆಯರ ಮೇಲೆ ಪ್ರಜ್ವಲ್ ರೇವಣ್ಣ ಮಾಸ್ ರೇಪ್ ಮಾಡಿದ್ದಾರೆ ಎಂದು ಬಹಿರಂಗ ಸಭೆಗಳ ಭಾಷಣದಲ್ಲಿ ಹೇಳಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಿರುದ್ಧ ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಜೆಡಿಎಸ್ ದೂರು ನೀಡಿದೆ. ಈ ಸಂಬಂಧ ರಾಹುಲ್ ಗಾಂಧಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಪಕ್ಷ ಒತ್ತಾಯ ಮಾಡಿದೆ. ಜವಾಬ್ದಾರಿಯುತ ಸ್ಥಾನದಲ್ಲಿರುವ ರಾಹುಲ್ ಗಾಂಧಿ ಅವರು ಶಿವಮೊಗ್ಗ ಹಾಗೂ ರಾಯಚೂರಿನಲ್ಲಿ ನಡೆದ ಕಾಂಗ್ರೆಸ್ ಪಕ್ಷದ ಬಹಿರಂಗ ಸಭೆಗಳಲ್ಲಿ ಮಾಸ್ ರೇಪ್ ಬಗ್ಗೆ ಹೇಳಿದ್ದರು. ಇದೇ ಮಾಹಿತಿಯನ್ನು ಮಾಧ್ಯಮಗಳ ಮುಂದೆಯೂ ನೀಡಿದ್ದಾರೆ. ಹೀಗಾಗಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಎಸ್ ಐಟಿ ಅವರಿಗೆ ಸಮನ್ಸ್ ನೀಡಬೇಕು ಎಂದು ಜೆಡಿಎಸ್ ಒತ್ತಾಯ ಮಾಡಿದೆ.

ಜೆಡಿಎಸ್ ನಗರ ಘಟಕದ ಅಧ್ಯಕ್ಷ ಹೆಚ್.ಎಂ.ರಮೇಶ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಕೆ.ಎ.ತಿಪ್ಪೇಸ್ವಾಮಿ, ಮಂಜೇಗೌಡ, ಪರಿಷತ್ ಮಾಜಿ ಸದಸ್ಯ ಚೌಡರೆಡ್ಡಿ ತೂಪಲ್ಲಿ, ಜೆಡಿಎಸ್ ಕಾನೂನು ಘಟಕದ ರಾಜ್ಯಾಧ್ಯಕ್ಷ ಎ.ಪಿ.ರಂಗನಾಥ್, ಬೆಂಗಳೂರು ನಗರದ ಘಟಕದ ಮಹಾ ಪ್ರಧಾನ ಕಾರ್ಯದರ್ಶಿ ಎಸ್.ರಮೇಶ್ ಅವರಿದ್ದ ನಿಯೋಗ ಬುಧವಾರ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರನ್ನು ಭೇಟಿಯಾಗಿ ದೂರು ಸಲ್ಲಿಸಿದರು.



ಉದಯವಾಹಿನಿ ಚಿತ್ರ

ರಾಜ್ಯ ಸರ್ಕಾರವೂ ಈ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ SIT ರಚನೆ ಮಾಡಿದ್ದು, ಕೂಡಲೇ ಈ ತಂಡವು ರಾಹುಲ್ ಗಾಂಧಿ ಅವರಿಗೆ ಸಮನ್ಸ್ ಜಾರಿ ಮಾಡಿ ಕರೆಸಬೇಕು. ನಾನೂರು ಮಹಿಳೆಯರು ಎಂದು ತಪ್ಪು ಮಾಹಿತಿ, ಸಮಾಜಕ್ಕೆ ಕೆಟ್ಟ ಸಂದೇಶ ಹೋಗುವಂತೆ ಮಾಡಿದ ಅವರ ವಿರುದ್ಧ ಕೂಡಲೇ ಸೆಕ್ಷನ್ 202, 1860ರ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು ಜೆಡಿಎಸ್ ಆಗ್ರಹಪಡಿಸಿದೆ.

**ಎಸ್ ಐಟಿ ಗೆ ಸಮನ್ಸ್ ನೀಡಿ**

**ಅಲ್ಲದೆ, ಪೆನ್ ಡ್ರೈವ್ ಹಂಚಿಕೆಯ ಬಗ್ಗೆಯೂ ಜೆಡಿಎಸ್ ಡಿಜಿ ಅವರ ಜತೆ ಮಾತುಕತೆ ನಡೆಸಿತು. ಎಸ್ ಐಟಿ ಏಕಪಕ್ಷೀಯವಾಗಿ ತನಿಖೆ ನಡೆಸುತ್ತಿದೆ. ಪ್ರಜ್ವಲ್ ಪ್ರಕರಣಕ್ಕೆ ಸಂಬಂಧಿಸಿ ನಮ್ಮ ಪಕ್ಷದ ಕಾರ್ಯಕರ್ತರಿಗೆ ವಿನಾಕಾರಣ ಕಿರುಕುಳ ನೀಡುತ್ತಿದೆ. ಆದರೆ ಪೆನ್‌ಡ್ರೈವ್ ಹಂಚಿಕೆ ಆರೋಪಿಗಳ ಬಗ್ಗೆ ಮೌನ ವಹಿಸಿದೆ. ನ್ಯಾಯಾಲಯ ಜಾಮೀನು ನಿರಾಕರಿಸಿದ್ದರೂ ಈವರೆಗೆ ಅವರನ್ನು ಎಸ್ ಐಟಿ ಬಂಧನ ಮಾಡಿಲ್ಲ ಎಂದು ನಿಯೋಗ ದೂರಿತು.**

ರಾಹುಲ್ ಗಾಂಧಿ ಅವರ ಹೇಳಿಕೆ, ಭಾಷಣ ಎಲ್ಲವೂ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಪ್ರಸಾರವಾಗಿದೆ. ಮುದ್ರಣ ಮಾಧ್ಯಮದಲ್ಲಿಯೂ ವರದಿಯಾಗಿದೆ ಎಂದು ಪೊಲೀಸ್ ಮಹಾ ನಿರ್ದೇಶಕರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದ್ದು, ಅದಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಸಲ್ಲಿಸಿದೆ.


ನೊಂದ ಮಹಿಳೆಯರ ನ್ಯಾಯ ಕೊಡಿಸುವುದನ್ನು ಕಡೆಗಣಿಸಿ ಒಬ್ಬ ಜನಪ್ರತಿನಿಧಿಯಾಗಿ ರಾಹುಲ್ ಗಾಂಧಿ ಅವರು ಇಂಥ ಹೇಳಿಕೆ ನೀಡಿರುವುದು ಕಾನೂನು ಉಲ್ಲಂಘನೆ ಆಗಿರುತ್ತದೆ. ನಾನೂರು ಮಹಿಳೆಯರ ಮೇಲೆ ಮಾಸ್ ರೇಪ್ ಆಗಿರುವ ಬಗ್ಗೆ ರಾಹುಲ್ ಗಾಂಧಿ ಅವರಿಗೆ ಎಲ್ಲಾ ಮಾಹಿತಿ ಇದೆ ಹಾಗೂ ಅತ್ಯಾಚಾರಕ್ಕೆ ತುತ್ತಾದ ಅಷ್ಟೂ ಮಹಿಳೆಯರ ಮಾಹಿತಿ ಅವರಲ್ಲಿ ಇದೆ ಎನ್ನುವುದು ಅವರದೇ ಹೇಳಿಕೆಯಿಂದ ಸ್ಪಷ್ಟವಾಗಿದೆ. ಈ ಹಿನ್ನೆಲೆಯಲ್ಲಿ ರಾಹುಲ್ ಗಾಂಧಿ ಅವರ ವಿರುದ್ಧ ಭಾರತೀಯ ದಂಡ ಸಂಹಿತೆ ಸೆಕ್ಷನ್ 1860ರ ಅಡಿಯಲ್ಲಿ ಕೇಸ್ ದಾಖಲಿಸಬೇಕು ಎಂದು ಪೊಲೀಸ್ ಮಹಾ ನಿರ್ದೇಶಕರಲ್ಲಿ ಜೆಡಿಎಸ್ ಪಕ್ಷ ಒತ್ತಾಯ ಮಾಡಿದೆ.

## ಹೆಚ್ಚಾದ ಡೆಂಗ್ಯೂ ಜ್ವರ ಹಾವಳಿ

• ಉದಯವಾಹಿನಿ, ಬೆಂಗಳೂರು

ಕಳೆದ ಎರಡು ವಾರಗಳಿಂದ ಬೆಂಗಳೂರಿನಲ್ಲಿ ಮಳೆ ಯಾಗುತ್ತಲೇ ಇದೆ. ಇದರ ಬೆನ್ನಲ್ಲೇ ವೆಸ್ಟ್ ನೈಲ್, ಡೆಂಗ್ಯೂ ಜ್ವರ ಹಾವಳಿ ಹೆಚ್ಚಾಗಿದೆ. ಡೆಂಗ್ಯೂ ಜ್ವರದ ಬಗ್ಗೆ ನಾವು ಕೇಳಿಬರಬಹುದು. ವೆಸ್ಟ್ ನೈಲ್ ಜ್ವರವೆಂದರೇನು, ಅದರ ಲಕ್ಷಣಗಳೇನು ನೋಡೋಣ. ಈಗಾಗಲೇ ಪಕ್ಕದ ರಾಜ್ಯಗಳಾದ ಕೇರಳ, ತಮಿಳುನಾಡಿನಲ್ಲಿ ಕ್ಯೂಲೆಕ್ಸ್ ಸೊಳ್ಳೆಗಳಿಂದ ವೆಸ್ಟ್ ನೈಲ್ ಜ್ವರದ ಆತಂಕ ಶುರುವಾಗಿದೆ. ಈ ನಡುವೆ ಈಗ ಬೆಂಗಳೂರಿನಲ್ಲೂ ವೆಸ್ಟ್ ನೈಲ್ ಜ್ವರದ ಆತಂಕ ಶುರುವಾಗಿದೆ. ಕೇರಳದಲ್ಲಿ ಈಗಾಗಲೇ ವೈರಲ್ ಜ್ವರದ ಪ್ರಕರಣಗಳು ವರದಿಯಾಗಿವೆ.

ಸಾಮಾನ್ಯ ಜ್ವರಕ್ಕೂ ವೆಸ್ಟ್ ನೈಲ್ ಜ್ವರಕ್ಕೂ ಕೊಂಚ ವ್ಯತ್ಯಾಸವಿದೆ. ಈ ಜ್ವರ ತೀವ್ರವಾಗಿ ಕಾಡುತ್ತದ್ದೆ ವೈರಸ್ ಪೀಡಿತ ವ್ಯಕ್ತಿ ತೀವ್ರ ಅನಾ ರೋಗ್ಯಕ್ಕೊಳಗಾಗುತ್ತಾರೆ. ಆರಂಭದಲ್ಲಿ ಯಾವುದೇ ಲಕ್ಷಣ ಕಾಣುವುದಿಲ್ಲ. ಕ್ರಮೇಣ ತೀವ್ರ ಜ್ವರ, ತಲೆನೋವು, ಕುತ್ತಿಗೆ ಬಿಗಿತ, ಮೂರ್ಛೆ ಹೋದಂತಾಗುವುದು ಇತ್ಯಾದಿ ಕಾಣಿಸಿಕೊಳ್ಳಬಹುದು. ಜ್ವರದ ತೀವ್ರತೆ ಹೆಚ್ಚಾದಂತೆ ಪಾರ್ಶ್ವವಾಯು, ಕೋಮಾಗೆ ಹೋಗುವ ಸಾಧ್ಯತೆಯೂ ಇದೆ.



**ಹೀಗಾಗಿ ಆದಷ್ಟು ಮನೆಯ ಸುತ್ತ ಕೊಳಚೆ ನೀರು ನಿಲ್ಲದಂತೆ ನೋಡಿಕೊಳ್ಳಿ. ಆದಷ್ಟು ಸೊಳ್ಳೆ ಬತ್ತಿ ಅಥವಾ ಸೊಳ್ಳೆ ಮನೆಯೊಳಗೆ ಪ್ರವೇಶಿಸಿದಂತೆ ನೋಡಿಕೊಳ್ಳಿ. ಇನ್ನು, ಆದಷ್ಟು ಬಿಸಿ ನೀರನ್ನೇ ಕುಡಿಯಿರಿ. ಆರೋಗ್ಯಕರ ಆಹಾರ ಸೇವನೆ ಮಾಡುವ ಮೂಲಕ ಜ್ವರ ಬಾರದಂತೆ ಆರೋಗ್ಯ ರಕ್ಷಿಸಿಕೊಳ್ಳಿ ಎಂದು ಆರೋಗ್ಯ ತಜ್ಞರು ಹೇಳಿದ್ದಾರೆ.**

## ಸರ್ಕಾರದಿಂದ ಹೈನುಗಾರರಿಗೆ ಅನ್ಯಾಯ: ಬಿಜೆಪಿ

• ಉದಯವಾಹಿನಿ, ಬೆಂಗಳೂರು

ನಂದಿನಿ ಬ್ರ್ಯಾಂಡ್ ಹಣ ಬಳಸಿಕೊಂಡು ಅಂತಾ ರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳ ಪ್ರಾಯೋಜಕತ್ವ ಪಡೆಯಲು ರಾಜ್ಯ ಸರ್ಕಾರದ ಬಳಿ ಹಣ ಇದೆ. ಆದರೆ 'ನಂದಿನಿ' ಬ್ರ್ಯಾಂಡ್ ಅನ್ನು ಪೋಷಿಸುತ್ತಿರುವ ಹೈನುಗಾರಿಕೆ ರೈತರಿಗೆ ಕೊಡಲು ನಿಮ್ಮಲ್ಲಿ ಹಣ ಇಲ್ಲವೇ ಸಿದ್ದರಾಮಯ್ಯನವರೇ ಎಂದು ಬಿಜೆಪಿ ಖಾರವಾಗಿ ಪ್ರಶ್ನಿಸಿದೆ.

ಹೈನುಗಾರಿಕೆಗೆ ಪ್ರೋತ್ಸಾಹ ಧನ ನೀಡುವ ವಿಚಾರ ಕುರಿತು ಬುಧವಾರ ಟ್ವೀಟ್ ಮಾಡಿರುವ ರಾಜ್ಯ ವಿಪಕ್ಷ ನಾಯಕ ಆರ್.ಅಶೋಕ್ ಅವರು ಕಾಂಗ್ರೆಸ್ ಸರ್ಕಾರದ ನಡೆಯನ್ನು ಪ್ರಶ್ನಿಸಿದ್ದಾರೆ. ಹೈನುಗಾರರಿಗೆ ಸಮಯಕ್ಕೆ ಸರಿಯಾಗಿ ಪ್ರೋತ್ಸಾಹ ಧನ ನೀಡಲು ತಮ್ಮ ಬಳಿ ಹಣವಿಲ್ಲ ಅಲ್ಲವೇ ಸಿದ್ದರಾಮಯ್ಯನವರೇ. ನಾಡಿನ ರೈತರ ಶಾಪ ತಮಗೆ ತಟ್ಟದೇ ಇರದು ಎಂದು ಅವರು ದೂರಿದ್ದಾರೆ.

ರಾಜ್ಯದ ವಿವಿಧ ಹಾಲು ಒಕ್ಕೂಟಗಳಿಗೆ ಹಾಲು ಸರಬರಾಜು ಮಾಡುವ 26 ಲಕ್ಷಕ್ಕೂ ಹೆಚ್ಚು ರೈತರಿಗೆ ಸಲ್ಲಬೇಕಾದ 703 ಕೋಟಿ ರೂಪಾಯಿ ಪ್ರೋತ್ಸಾಹ ಧನವನ್ನು ರಾಜ್ಯ ಸರ್ಕಾರ ಬಾಕಿ ಉಳಿಸಿಕೊಂಡಿದೆ. ಸುಮಾರು 8 ತಿಂಗಳಿನಿಂದ ಬಾಕಿ ನೀಡದೇ ಸರ್ಕಾರ ರೈತರ ವಿರೋಧಿ ನೀತಿ ತಾಳಿ ಎಂದು ಆಕ್ರೋಶ ವ್ಯಕ್ತಪಡಿಸಿದರು.



ಉದಯವಾಹಿನಿ ಚಿತ್ರ

**ಹೈನುಗಾರಿಕೆಗೆ ಪ್ರೋತ್ಸಾಹ ಧನ**

**ನಂದಿನಿ ಸಂಸ್ಥೆಯ ಕೋಟ್ಯಂತರ ರೂಪಾಯಿ ಹಣ ಬಳಸಿಕೊಂಡು ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳ ಪ್ರಾಯೋಜಕತ್ವ ಪಡೆಯಲು ನಿಮ್ಮ ಸರ್ಕಾರದ ಬಳಿ ಇದೆ. ಆದರೆ ನಂದಿನಿ ಬ್ರ್ಯಾಂಡ್ ಅನ್ನ ಕಟ್ಟಿ, ಬೆಳೆಸಿ, ಪೋಷಿಸುತ್ತಿರುವ ಹೈನುಗಾರರಿಗೆ ಸಮಯಕ್ಕೆ ಸರಿಯಾಗಿ ಪ್ರೋತ್ಸಾಹ ಧನ ನೀಡಲು ತಮ್ಮ ಬಳಿ ಹಣವಿಲ್ಲ ಅಲ್ಲವೇ ಸಿದ್ದರಾಮಯ್ಯನವರೇ? ನಾಡಿನ ರೈತರ ಶಾಪ ತಮಗೆ ತಟ್ಟದೇ ಇರದು.**

## ಕಾರ್ಯಕರ್ತೆ ಕವಿತಾರವರಿಗೆ ವಿಧಾನಪರಿಷತ್ ಪರಿಗಣನೆ ಮಾಡಬೇಕು

• ಉದಯವಾಹಿನಿ, ಬೆಂಗಳೂರು

ಮಾಜಿ ಮುಖ್ಯಮಂತ್ರಿಗಳಾದ ಕೆ.ಸಿ.ರೆಡ್ಡಿರವರು ಅಂದಿನ ಮೈಸೂರು ರಾಜ್ಯ ಇಂದಿನ ಕರ್ನಾಟಕ ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿ ಉತ್ತಮ ಆಡಳಿತ ನೀಡಿ ಇಂದು ಸಹ ಜನಮಾನಸದಲ್ಲಿ ಉಳಿದಿದ್ದಾರೆ.

ಕೆ.ಸಿ.ರೆಡ್ಡಿರವರು ವಿಧಾನಸೌಧ ಬೆಂಗಳೂರಿನಲ್ಲಿ ಸ್ಥಾಪನೆಯಾಗಬೇಕು ಎಂದು ಯೋಜನೆ ರೂಪಿಸಿ ಅನುಷ್ಠಾನಕ್ಕೆ ತಂದರು, ಮಾಜಿ ಪ್ರಧಾನಿ ಜವಾಹರ್ ಲಾಲ್ ನೆಹರೂರವರ ಅಮೃತಹಸ್ತದಿಂದ ಗುದ್ದಲಿಪೂಜೆ ಮಾಡಿಸಿದರು. ಬಡವರಿಗೆ ಸೂರು ಸೌಲಭ್ಯ ಮತ್ತು ರಾಜ್ಯದ ಅಭಿವೃದ್ದಿಗೆ ಹಲವಾರು ಯೋಜನೆಗಳನ್ನು ಜಾರಿಗೆ ನವ ಕರ್ನಾಟಕ ನಿರ್ಮಾಣಕ್ಕೆ ನಾಂದಿ ಹಾಡಿದರು.ಕೆ.ಸಿ.ರೆಡ್ಡಿ ರವರ ಕುಟುಂಬದವರು ನಾಡಿನ ಒಳಿತಿಗಾಗಿ ಶ್ರಮಿಸಿದರು ಅವರ ಮೊಮ್ಮಗಳಾದ ಶ್ರೀಮತಿ ವಸಂತ ಕವಿತಾರವರ ತಾತನವರ ಆದರ್ಶ ಮಾರ್ಗದರ್ಶನ ಮತ್ತು ಸಮಾಜಸೇವೆಯನ್ನು ಮೈಗೂಡಿಸಿಕೊಂಡು ಜನ ಸೇವೆ ಮಾಡುತ್ತಿದ್ದಾರೆ. ಗ್ರಾಮೀಣ ಶಾಲೆಯ ಮಕ್ಕಳಿಗೆ ವಿಜ್ಞಾನ ತಂತ್ರಜ್ಞಾನ ಅರಿವು ಮೂಡಿಸುವ ಕಾರ್ಯಕ್ರಮ ವಿಜ್ಞಾನ ಸಲಕರಣೆಗಳ ವಿತರಣೆ ಮತ್ತು ಮಕ್ಕಳಿಗೆ ಪರಿಸರ ಜಾಗೃತಿ ಸಾಮಾಜಿಕ ಕಾರ್ಯಗಳನ್ನು ಮಾಡುತ್ತಾ ಶಿಕ್ಷಣ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ವೇಮನ ರೆಡ್ಡಿ ಜನ ಸಂಘದಲ್ಲಿ ನಿರ್ದೇಶಕಿ ಸಮಾಜ ಬಾಂಧವರ ಸಂಘಟನೆಯಲ್ಲಿ ರಾಜ್ಯಾದ್ಯಂತ ಪ್ರವಾಸ ಮಾಡಿದ್ದಾರೆ. ಶ್ರೀಮತಿ ವಸಂತ ಕವಿತಾ ರವರ ಸೇವಾ ಕಾರ್ಯವನ್ನು ಗುರುತಿಸಿದ ಆಂಧ್ರಪ್ರದೇಶ ಸರ್ಕಾರ ತಿರುಪತಿ ತಿರುಮಲ ದೇವಸ್ಥಾನದ ಎಸ್.ಬಿ.ಬಿ.ಸಿ ನಿರ್ದೇಶಕಿ ನೇಮಕ ಮಾಡಿದರು. ಕಳೆದ ವರ್ಷಗಳಿಂದ ಉತ್ತಮ ಸೇವೆ ನೀಡುತ್ತಾ ಬಂದಿದ್ದಾರೆ. ಕಾಂಗ್ರೆಸ್ ಪಕ್ಷದಲ್ಲಿ ಕಳೆದ 30ವರ್ಷಗಳಿಂದ ಸಕ್ರಿಯ ಕಾರ್ಯಕರ್ತೆಯಾಗಿ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಆಂಧ್ರ, ತೆಲಂಗಾಣ ಮತ್ತು ರಾಜ್ಯದ ಹಲವಾರು ವಿಧಾನಸಭಾ ಕ್ಷೇತ್ರಗಳಲ್ಲಿ ಚುನಾವಣೆ ಉಸ್ತುವಾರಿಯಾಗಿ ಯಶ್ವಸಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಮಹಿಳಾ ಪರ ಹೋರಾಟ, ಕಾಂಗ್ರೆಸ್ ಪಕ್ಷ ಸಂಘಟನೆ ಮತ್ತು ಸಮಾಜ ಸೇವೆಯಲ್ಲಿ ಶ್ರೀಮತಿ ವಸಂತ ಕವಿತಾ ರವರು ರಾಜ್ಯದಲ್ಲಿ ಅಪಾರ ಹೆಸರು ಗಳಿಸಿದ್ದಾರೆ. ಮಹಿಳಾ ಪರ ಧ್ವನಿಯಾಗಿರುವ, ನಾಡಿನ ಪರ ಹೋರಾಟಗಾರ್ತಿ ಶ್ರೀಮತಿ ವಸಂತ ಕವಿತಾ ರವರನ್ನು ವಿಧಾನಪರಿಷತ್ ಸದಸ್ಯ ಸ್ಥಾನಕ್ಕೆ ನೇಮಕ ಮಾಡಬೇಕು ಎಂದು ಒತ್ತಾಯವಾಗಿದೆ.

ರಾಷ್ಟ್ರಾಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಮತ್ತು ಕೆಪಿಸಿಸಿ ಅಧ್ಯಕ್ಷರು, ಉಪಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯರವರಿಗೆ ಶ್ರೀಮತಿ ವಸಂತ ಕವಿತಾರವರನ್ನು ವಿಧಾನಪರಿಷತ್ ನೇಮಕ ಮಾಡಬೇಕು ಕಾಂಗ್ರೆಸ್ ಪಕ್ಷ ಮುಖಂಡರು, ಕಾರ್ಯಕರ್ತರು ಮತ್ತು ರೆಡ್ಡಿ ಜನಸಂಘ ಮುಖಂಡರು, ಕೆ.ಸಿ.ರೆಡ್ಡಿ ಕುಟುಂಬ ಮತ್ತು ಅಭಿಮಾನಿಗಳು ಒತ್ತಾಯ ಮಾಡುತ್ತಾ ಇದ್ದಾರೆ. ಶ್ರೀಮತಿ ವಸಂತ ಕವಿತಾ ರವರನ್ನು ವಿಧಾನಪರಿಷತ್ ಆಯ್ಕೆ ಮಾಡುವುದರಿಂದ ರೆಡ್ಡಿ ಸಮುದಾಯದಕ್ಕೆ ನ್ಯಾಯ ಮತ್ತು ಮಹಿಳೆಯರಿಗೆ ಸಮಾನ ಹಕ್ಕು ನೀಡಿದ ಅವಕಾಶ, ಲಾಭ ಕಾಂಗ್ರೆಸ್ ಪಕ್ಷಕ್ಕೆ ಆಗುತ್ತದೆ ಎಂದು ನಾಡಿನ ಜನರ ಅಭಿಪ್ರಾಯವಾಗಿದೆ.





ಉದಯವಾಹಿನಿ ಚಿತ್ರ

**ಕವಿತಾರವರ ತಾತನವರ ಆದರ್ಶ ಮಾರ್ಗದರ್ಶನ**

**ಶ್ರೀಮತಿ ವಸಂತ ಕವಿತಾ ವಿದ್ಯಾವಂತೆ ಪ್ರಾಧ್ಯಪಕಿಯಾಗಿ ಸೇವೆ ಸಲ್ಲಿಸಿ ನಂತರ ಬಡವರ ಸೇವೆ ಮಾಡಬೇಕು ಎಂದು ಅಸ್ಸಿಟಂಟ್ ಪ್ರೋಫೆಸರ್ ವೃತ್ತಿಗೆ ಗುಡ್ ಬೈ ಹೇಳಿದರು, ಕಾಂಗ್ರೆಸ್ ಪಕ್ಷದ ಸಂಘಟನೆ ಸೇರ್ಪಡೆಯಾದರು. ಮಾಜಿ ಮುಖ್ಯಮಂತ್ರಿಗಳಾದ ಕೆ.ಸಿ.ರೆಡ್ಡಿರವರು ಮತ್ತು ಸರೋಜಮ್ಮರವರ ಸವಿ ನೆನಸಿನಲ್ಲಿ ಕೆ.ಸಿ.ರೆಡ್ಡಿ ವೇಲ್ ಫೇರ್ ಫೌಂಡೇಷನ್ ಸ್ಥಾಪಿಸಿದರು. ಫೌಂಡೇಷನ್ ಮೂಲಕ ಗ್ರಾಮೀಣ ಮಕ್ಕಳ ಶಿಕ್ಷಣಕ್ಕೆ ಉತ್ತೇಜನ ನೀಡುವ ಕೆಲಸ ಮಾಡುತ್ತಿದ್ದಾರೆ.**

## ಬೇರೆಯವರ ಕಾಲದ ಫೋನ್ ಕದ್ದಾಲಿಕೆ ವಿಚಾರ ಎಲ್ಲರಿಗೂ ಗೊತ್ತಿದೆ

• ಉದಯವಾಹಿನಿ, ಬೆಂಗಳೂರು

ನಮ್ಮ ಸರ್ಕಾರದ ವಿರುದ್ಧ ಫೋನ್ ಕದ್ದಾಲಿಕೆ ಆರೋಪ ಮಾಡುತ್ತಿರುವವರ ಅಧಿಕಾರ ಅವಧಿಯಲ್ಲಿ ಯಾವ ರೀತಿ ಈ ಪ್ರಕರಣ ನಡೆದಿತ್ತು ಎಂದು ಎಲ್ಲರಿಗೂ ಗೊತ್ತಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿರುಗೇಟು ನೀಡಿದರು. ಸದಾಶಿವನಗರ ನಿವಾಸದ ಬಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಬುಧವಾರ ಪ್ರತಿಕ್ರಿಯೆ ನೀಡಿದರು.ಫೋನ್ ಕದ್ದಾಲಿಕೆ ಬಗ್ಗೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರ ಆರೋಪದ ಬಗ್ಗೆ ಕೇಳಿದಾಗ, ಅಶೋಕ್ ಅವರು ಕೂಡ ಗೃಹ ಸಚಿವರಾಗಿದ್ದವರು. ಈ ಆರೋಪ ಮಾಡುತ್ತಿರುವ ಮತ್ತೆ ಕೆಲವರು ಮಾಜಿ ಮುಖ್ಯಮಂತ್ರಿಗಳಾಗಿದ್ದವರು. ಈ ವಿಚಾರವಾಗಿ ಅವರು ಪತ್ರದ ಮೂಲಕ ದೂರು ನೀಡಲಿ. ಅವರ ಕಾಲದಲ್ಲಿ ಏನೆಲ್ಲಾ ಆಗಿತ್ತು ಎಂದು ಅವರಿಗೆ ಗೊತ್ತಿದೆ ಎಂದು ತಿರುಗೇಟು ನೀಡಿದರು.



ಉದಯವಾಹಿನಿ ಚಿತ್ರ

ಇಂದಿನ ಸಚಿವರ ಸಭೆ ಬಗ್ಗೆ ಕೇಳಿದಾಗ, ರಾತ್ರಿ ಸಚಿವರುಗಳಿಗೆ ಭೋಜನಕೂಟ ಏರ್ಪಡಿಸಿದ್ದೇವೆ, ಲೋಕಸಭೆ ಚುನಾವಣೆ ನಿರ್ವಹಣೆ ಹಾಗೂ ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸುವ ಬಗ್ಗೆ ಚರ್ಚೆ ಮಾಡುತ್ತೇವೆ ಎಂದರು. ಲೋಕಸಭೆಯಲ್ಲಿ ಜವಾಬ್ದಾರಿ ನಿಭಾಯಿಸದ ಸಚಿವರ ತಲೆದಂಡವಾಗುತ್ತದೆಯೇ ಎಂದು ಕೇಳಿದಾಗ, ಈ ವಿಚಾರವಾಗಿ ನಾವು ನಿಮ್ಮ ಮುಂದೆ ಮಾತನಾಡುವುದಿಲ್ಲ ಎಂದರು. ಫೋನ್ ಕದ್ದಾಲಿಕೆ ವಿಚಾರವಾಗಿ ಸಿಎಂ, ಡಿಸಿಎಂ ಸುತ್ತಮುತ್ತಲಿನವರೇ ಮಾಹಿತಿ ನೀಡಿದ್ದಾರೆ ಎಂಬ ಕುಮಾರಸ್ವಾಮಿ ಅವರ ಹೇಳಿಕೆ ಬಗ್ಗೆ ಕೇಳಿದಾಗ, ಅವರಿಗೆ ಯಾರೆಲ್ಲಾ ಮಾಹಿತಿ ನೀಡಿದ್ದಾರೆ ಒಂದು ಪಟ್ಟಿ ಮಾಡಿ ಅಫಿಡವಿಡ್ ಸಲ್ಲಿಸಲಿ ಎಂದರು.

**ಇಂದು ಸಿಎಂ ಜತೆಗಿನ ಸಿಟಿ ರೌಂಡ್ಸ್ ಬಗ್ಗೆ ಕೇಳಿದಾಗ, ಮಳೆ ಬಂದಾಗ ಹಾನಿಗೊಳಗಾಗುವ ಪ್ರದೇಶಗಳನ್ನು ಗುರುತಿಸಿ ಮುಖ್ಯಮಂತ್ರಿಗಳ ಜತೆಗೆ ಇಂದು ಭೇಟಿ ನೀಡಿ ಪರಿಶೀಲನೆ ಮಾಡುತ್ತಿದ್ದೇವೆ. ಈ ಭಾಗಗಳಲ್ಲಿ ಮುಂಜಾಗ್ರತಾ ಕ್ರಮಗಳ ಪರಿಶೀಲನೆ ಮಾಡಲಾಗುವುದು. ಸದ್ಯ ರಾಜ್ಯದಲ್ಲಿ ಹೆಚ್ಚಿನ ಮಳೆಯಾಗಲಿ. ಭೂಮಿ ಹದವಾಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ ಎಂದರು.**

## ಹಣ ಮುಖ್ಯವಲ್ಲ, ಉದ್ಯೋಗಿಗಳ ಮೆಚ್ಚುಗೆಗೆ ಆದ್ಯತೆ

• ಉದಯವಾಹಿನಿ, ಬೆಂಗಳೂರು

ಉದ್ಯೋಗಿಗಳಿಗೆ ಅನುಕೂಲಕರ ಪರಿಸ್ಥಿತಿಗಳನ್ನು ಸೃಷ್ಟಿಸುವ ಮಹತ್ವವನ್ನು ಒತ್ತಿಹೇಳಿದ ಇನ್ಫೋಸಿಸ್ ಸಂಸ್ಥಾಪಕ ಎನ್ ಆರ್ ನಾರಾಯಣ ಮೂರ್ತಿ, ನನ್ನ ಅನುಭವದಲ್ಲಿ, ಹಣವು ಅತ್ಯಂತ ಪ್ರಮುಖ ಅಂಶವಲ್ಲ - ಉದ್ಯೋಗಿಗಳು ತಮ್ಮ ಸಾಮರ್ಥ್ಯಗಳಿಗೆ ಗೌರವ, ಮೆಚ್ಚುಗೆಯನ್ನು ಬಯಸುತ್ತಾರೆ. ಎಂದರು.

ವಿಯೆಟ್ನಾಂನ ಹನೋಯ್ನಲ್ಲಿ ಎಫ್ಪಿಟಿ ಗ್ರೂಪ್ನ ಸ್ಥಾಪಕ ಮತ್ತು ಕಾರ್ಯನಿರ್ವಾಹಕ ಅಧ್ಯಕ್ಷ ಟ್ರೂಂಗ್ ಜಿಯಾ ಬಿನ್ಹ್ ಅವರೊಂದಿಗಿನ ಸಂಭಾಷಣೆಯಲ್ಲಿ, ಹಲವಾರು ಜಾಗತಿಕ ಉದ್ಯಮಿಗಳು ತಮ್ಮ ಷೇರುಗಳಲ್ಲಿ 75% ಅನ್ನು ಕಿರಿಯ ಉದ್ಯೋಗಿಗಳಿಗೆ ಹಂಚಿಕೆ ಮಾಡುತ್ತಾರೆ ಎಂದು ಮೂರ್ತಿ ಉಲ್ಲೇಖಿಸಿದ್ದಾರೆ. ನಾಯಕರು ತಮ್ಮ ಅಧೀನ ಅಧಿಕಾರಿಗಳಿಗೆ ಪ್ರಯೋಜನಗಳನ್ನು ನೀಡುವುದರ ಹೊರತಾಗಿ, ಉದ್ಯೋಗಿಗಳು ಸ್ವತಃ ಕಂಪನಿಯ ಸಂಪನ್ಮೂಲಗಳನ್ನು ಎತ್ತಿಹಿಡಿಯಬೇಕು ಮತ್ತು ರಕ್ಷಿಸಬೇಕು. ಕೆಲಸದ ಸ್ಥಳದಲ್ಲಿ ಪಾತ್ರಗಳನ್ನು ವಿವರಿಸುವ ಪ್ರಾಮುಖ್ಯತೆಯ ಬಗ್ಗೆಯೂ ಮೂರ್ತಿ ಮಾತನಾಡಿದರು, ಸಹೋದ್ಯೋಗಿಗಳು ಕಚೇರಿಯ ಹೊರಗೆ ಸ್ನೇಹಿತರಾಗಬಹುದಾದರೂ, ಒಳಗೆ, ಅವರು ತಮ್ಮ ಗೊತ್ತುಪಡಿಸಿದ ಜವಾಬ್ದಾರಿಗಳಿಗೆ ಬದ್ಧರಾಗಿರಬೇಕು ಎಂದು ಪ್ರತಿಪಾದಿಸಿದರು.



ಉದಯವಾಹಿನಿ ಚಿತ್ರ

ಇನ್ಫೋಸಿಸ್ ಸಂಸ್ಥಾಪಕರು, 1981 ರಿಂದ, ಕಂಪನಿಯ ಗುರಿ ಕೇವಲ ಲಾಭದಾಯಕತೆಗಿಂತ ಗೌರವವನ್ನು ಗಳಿಸುವುದು ಎಂದು ನೆನಪಿಸಿಕೊಂಡರು. ಗ್ರಾಹಕರಿಂದ ಗೌರವವು ಲಾಭದಾಯಕತೆಗೆ ಅನುವಾದಿಸುತ್ತದೆ ಮತ್ತು ಉನ್ನತ ಪ್ರತಿಭೆಗಳನ್ನು ಆಕರ್ಷಿಸುತ್ತದೆ ಎಂದು ಅವರು ಹೇಳಿದರು.

# ನಿವಾಸಿಗಳಿಗೆ ಕಹಿ ಸುದ್ದಿ: ವಾತಾವರಣದಲ್ಲಿ ಭಾರೀ ಬದಲಾವಣೆ

■ ಸಿಲಿಕಾನ್ ಸಿಟಿಗೆ ಕೆಲವೆಡೆ ಮಳೆಯ ಮುನ್ಸೂಚನೆ ■ ಏಕಾಏಕಿ ಹೀಗೆ ವಾತಾವರಣ ಬದಲಾಗಿದ್ದರಿಂದ ಜನರು ಅಚ್ಚರಿ

• ಉದಯವಾಹಿನಿ, ಬೆಂಗಳೂರು

ರಾಜ್ಯ ರಾಜಧಾನಿ ಬೆಂಗಳೂರು ಕಳೆದ ಎರಡು ವಾರಗಳಿಂದ ಕೋಲ್ ಆಗಿದೆ. ವಾತಾವರಣ ಹಿತಕರ ಎನಿಸಿದೆ ಅನ್ನುವಷ್ಟರಲ್ಲಿ ಹವಾಮಾನ ಇಲಾಖೆ ನಿವಾಸಿಗಳಿಗೆ ಮತ್ತೆ ಕಹಿ ಸುದ್ದಿ ನೀಡಿದೆ. ಏಪ್ರೀಲ್ ನಿಂದ ಬಿಸಿಲಿನ ತಾಪಕ್ಕೆ ಬೇಸತ್ತಿದ್ದ ಜನರಿಗೆ ನಾಳೆ, ನಾಡಿದ್ದು ಎರಡು ದಿನ ಮತ್ತೆ ತೀವ್ರ ಬಿಸಿಲಿನ ಅನುಭವ ಆಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಸಿಲಿಕಾನ್ ಸಿಟಿಗೆ ಇಂದು ಬುಧವಾರ ಕೆಲವೆಡೆ ಮಳೆಯ ಮುನ್ಸೂಚನೆ ಇದೆ. ಆದರೆ ಬದಲಾದ ಹವಾಮಾನ ಪರಿಸ್ಥಿತಿಯಿಂದಾಗಿ ಇಂದು ಬೆಳಗ್ಗೆಯಿಂದಲೇ ಉರಿ ಬಿಸಿಲಿನ ದರ್ಶನವಾಗುತ್ತಿದೆ. ನಸುಕಿನ ಜಾವದಿಂದ ಮಂಜಿನ ವಾತಾವರಣ ನಿರ್ಮಾಣವಾಗಿದೆ. ಬಿಸಿಲಿನ ತಾಪಮಾನದಲ್ಲಿ ಏರಿಕೆ ಆಗುತ್ತಿದೆ.

ಸಾಮಾನ್ಯವಾಗಿ ಬೆಳ್ಳಂಬೆಳಗ್ಗೆ ಮಂಜು ಹೆಚ್ಚಾಗಿ ಕಂಡು ಬಂದರೆ, ನಂತರದ ಕೆಲ ಗಂಟೆಗಳಲ್ಲಿ ಬಿಸಿಲಿನ ಆರ್ಭಟ ಜೋರಿರುತ್ತದೆ. ಸಹ ಅದೇ ರೀತಿಯ ವಾತಾವರಣ ಕಂಡು ಬಂದಿದೆ. ಇದರ ಮುಂದುವರಿದ ಭಾಗವೆಂಬಂತೆ ಮೇ 23 ಮತ್ತು 24ರಂದು ಎರಡು ದಿನ ಬೆಂಗಳೂರಿನಲ್ಲಿ ಮತ್ತೆ ಬಿಸಲಿನ ಶಾಖದ ಅಲೆ ಕಂಡು ಬರಲಿದೆ. ಏಕಾಏಕಿ ಹೀಗೆ ವಾತಾವರಣ ಬದಲಾಗಿದ್ದರಿಂದ ಜನರು ಅಚ್ಚರಿ ವ್ಯಕ್ತಪಡಿಸುತ್ತಿದ್ದಾರೆ. ಒಂದು ವೇಳೆ ಇದೇ ರೀತಿಯ ವಾತಾವರಣ ಮುಂದುವರೆದರೆ ಮತ್ತೆ ಏಪ್ರಿಲ್ ಬಿಸಿಲಿನಂತೆ ಮೇ ತಿಂಗಳ ಬಿಸಿಲು ತಮ್ಮನ್ನು ಹೈರಾಣಾಗಿಸಬಹುದು ಎಂಬ ಆತಂಕ ಕೆಲವರಲ್ಲಿ ಮನೆ ಮಾಡಿದೆ.

ಇಂದಿನಿಂದ ಮೂರು ದಿನ (ಮೇ 24ರವರೆಗೆ) ಗರಿಷ್ಠ ತಾಪಮಾನದಲ್ಲಿ ಏರಿಳಿತ ಕಂಡು ಬರಲಿದೆ. ಕನಿಷ್ಠ 23 ಡಿಗ್ರಿ ಸೆಲ್ಸಿಯಸ್ ಹಾಗೂ ಗರಿಷ್ಠ 30-32 ಡಿಗ್ರಿ ಸೆಲ್ಸಿಯಸ್ ತಾಪಮಾನ ಕಂಡು ಬರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮೇ ತಿಂಗಳಲ್ಲಿ ಉತ್ತಮ ಮಳೆ ಆಗಿತ್ತು. ಇದೀಗ ಇದ್ದಕ್ಕಿದ್ದಂತೆ ಬಿಸಲಿನ ಆರ್ಭಟ ಕಂಡು ಬರಲಿದೆ. ಬುಧವಾರ ಬೆಂಗಳೂರಿನ ಒಂದೆರಡು ಕಡೆಗಳಲ್ಲಿ ಸಂಜೆ ಇಲ್ಲವೇ ರಾತ್ರಿ ಹಗುರ ಮಳೆ ಆಗಬಹುದು. ಮೇ 24ರ ನಂತರ ಬೆಂಗಳೂರು ವಾತಾವರಣ ಸಹಜ ಸ್ಥಿತಿಗೆ ಮರಳಿದ್ದು, ಮತ್ತೆ ಮಳೆ ಆರ್ಭಟ ಶುರುವಾಗಲಿದೆ ಎಂದು ಸದ್ಯದ ಹವಾಮಾನ ವರದಿ ಮಾಹಿತಿ ನೀಡಿದೆ. ಇದೀಗ ಮಧ್ಯಾಹ್ನ ಬೆಂಗಳೂರು ನಗರದ ಕೆಲವೆಡೆ ನಿರೀಕ್ಷೆಯಂತೆ ಮಳೆ ಆಗುತ್ತಿದೆ. ಹುಗರದಿಂದ ಸಾಧಾರಣ ಮಳೆ ಸುರಿಯುತ್ತಿದೆ. ಮತ್ತೆ ಒಣಹವೆಯ ನಿರೀಕ್ಷೆ ಇದೆ ಎಂದು ಮುನ್ಸೂಚನಾ ವರದಿ ತಿಳಿಸಿದೆ.





ಉದಯವಾಹಿನಿ ಚಿತ್ರ

**ಕನಿಷ್ಠ 23 ಡಿಗ್ರಿ ಸೆಲ್ಸಿಯಸ್**

**ಬುಧವಾರ ಬೆಳಗ್ಗೆ ವಾತಾವರಣದ ಬದಲಾವಣೆ, ಎಲ್ಲೆಡೆ ಮಂಜು ಕವಿತ ವಾತಾವರಣದ ಫೋಟೋಗಳು ವೈರಲ್ ಆಗುತ್ತಿವೆ. ನೆಟ್ಟಿಗರು ಸಾಮಾಜಿಕ ಜಾಲತಾಣಗಳಲ್ಲಿ ಈ ಕುರಿತು ಪೋಸ್ಟ್ ಶೇರ್ ಮಾಡಿದ್ದು, ಮಳೆ ನಡುವೆ ಬಿಸಲಿನ ತಾಪಮಾನ ಏರಿಕೆ ಆಗಿದೆ. ಇದು ನಿಜವೆಂಬಂತೆ ಬೆಳಗ್ಗೆ ಇಬ್ಬನಿ, ಫಾಗ್ ಕ್ರಿಯೇಟ್ ಆಗಿದೆ. ಮಳೆ ಮರೆಯಾಗಿ ಶಾಖದ ಅಲೆ ಎದುರಾಗಬಹುದು. ಮೇ 30ರ ನಂತರ ಮತ್ತೆ ಮಳೆ ಆವರಿಸಬಹುದು ಎಂದೆಲ್ಲ ಬರೆದುಕೊಂಡಿದ್ದಾರೆ.**

### ತಂಪು ವಾತಾವರಣ ನಿರ್ಮಾಣ

**ಕಳೆದ ಎರಡು ವಾರಗಳಿಂದ ಬೆಂಗಳೂರಿನಲ್ಲಿ ಮಳೆ ಆರ್ಭಟದಿಂದಾಗಿ ಮೋಡ ಕವಿದ, ತಂಪು ವಾತಾವರಣ ನಿರ್ಮಾಣವಾಗಿತ್ತು. ಅರಬ್ಬಿ ಸಮುದ್ರ ಹಾಗೂ ಬಂಗಾಳಕೊಲ್ಲಿಯಲ್ಲಿ ಸ್ಟ್ರಫ್ ಉಂಟಾಗಿತ್ತು. ಅಲ್ಲದೇ ರಾಜ್ಯದ ಒಳನಾಡಿನ ಭಾಗದ ಭೂ ಮೇಲ್ಮೈ ಮೇಲೂ ಸ್ಟ್ರಫ್ ಉಂಟಾಗಿದ್ದರಿಂದ ಬೆಂಗಳೂರು ಸೇರಿದಂತೆ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಭಾರೀ ಮಳೆ ಆಗಿತ್ತು.**

# 1980ರಲ್ಲೇ ಸಿಡಿ ಫ್ಯಾಕ್ಟರಿ ಓಪನ್ ಮಾಡಿದ್ದಾರೆ: ಎಚ್‌ಡಿಕೆ ವಾಗ್ದಾಳಿ

## ವಿಡಿಯೋವನ್ನು ಚುನಾವಣೆಗಾಗಿ ವಿತರಿಸಿದ್ದು ಅಪರಾಧ ಅಲ್ವಾ? ವಿಡಿಯೋ ಮಾಡಿದ್ದಕ್ಕಿಂತ ಅದರ ವಿತರಣೆ ಅಪರಾಧ ಅಲ್ವಾ?

• ಉದಯವಾಹಿನಿ ಮೈಸೂರು

ರಾಜ್ಯದ ಹಲವೆಡೆ ಬೆಳೆ ನಾಶವಾಗಿದೆ. ಸರಕಾರ ಹೇಳಿಕೆಗಳಿಗೆ ಮಾತ್ರ ಸಿಮೀತವಾಗಿದೆ. ರಾಜ್ಯದಲ್ಲಿ ರೈತರ ಆತ್ಮಹತ್ಯೆ ಆಗುತ್ತಿವೆ. ಸರಕಾರದ ಗಮನಕ್ಕೆ ಈ ವಿಷಯ ಇದೆಯೋ ಇಲ್ಲವೋ ಗೊತ್ತಿಲ್ಲ. ಮದ್ದೂರು, ಗದಗನಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಮನೆಗಳಿಗೆ ಹೋಗಿ ಸಾಂತ್ವನ ಹೇಳುವ ಕೆಲಸ ಆಗಿಲ್ಲ.


ಬಿಜೆಪಿಯನ್ನು ದೂರುವುದಷ್ಟೆ ಕಾಂಗ್ರೆಸ್ ಕೆಲಸ ಆಗಿದೆ ಎಂದು ಮಾಜಿ ಸಿಎಂ ಎಚ್ ಡಿ ಕುಮಾರಸ್ವಾಮಿ ಹೇಳಿದರು. ನಗರದಲ್ಲಿ ಮಾತನಾಡಿದ ಅವರು, ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಲುಷಿತ ನೀರು ಕುಡಿದು ಓರ್ವ ಮೃತಪಟ್ಟಿದ್ದಾನೆ. ನಾಲ್ಕು ಬಾರಿ ಈ ಕ್ಷೇತ್ರ ಪ್ರತಿನಿಧಿಸಿದ್ದ ಸಿದ್ದರಾಮಯ್ಯ, ಯಾವ ರೀತಿ ಕೆಲಸ ಮಾಡಿದ್ದಾರೆ ಎಂಬುದು ಇದರಲ್ಲೇ ಗೊತ್ತಾಗುತ್ತಿದೆ. ಮೈಸೂರು ಅಭಿವೃದ್ಧಿಗೆ ಸಿದ್ದರಾಮಯ್ಯ ಕೊಡುಗೆ ಏನಿದೆ ಹೇಳಲಿ. ಸಿಎಂ ರಾಜಕೀಯದ ಕೊನೆ ಹಂತದಲ್ಲಿದ್ದಾರೆ ಈಗಲಾದರೂ ಮೈಸೂರು ಜಿಲ್ಲೆ ಅಭಿವೃದ್ಧಿ ಮಾಡಲಿ. ಅಭಿವೃದ್ಧಿ ವಿಚಾರದಲ್ಲಿ ನಮ್ಮನ್ನು ಟೀಕೆ ಮಾಡುವ ನೈತಿಕತೆ ಸಿಎಂಗೆ ಇಲ್ಲ ಎಂದರು.

ವಿರೋಧಿಗಳಿಗೆ ತೊಂದರೆ ಕೊಡುವುದು. ದ್ವೇಷದ ರಾಜಕಾರಣ ಮಾಡುವುದಷ್ಟೆ ಸರಕಾರದ ಕೆಲಸ ಆಗಿದೆ. ಸರ್ಕಾರದ ಪ್ರಾಯೋಜಕತ್ವದಲ್ಲಿ ಮೇ 30 ತಾರೀಕು ಹಾಸನದಲ್ಲಿ ಪ್ರತಿಭಟನೆ ಆಯೋಜನೆ ಮಾಡಲಾಗಿದೆ. ಅಂಗನವಾಡಿ ಕಾರ್ಯಕರ್ತರನ್ನು ಪ್ರತಿಭಟನೆಗೆ ಕರೆ ತರಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ನನಗೆ ಹೇಳಿ ನಾನೇ ಒಂದಿಷ್ಟು ಮಹಿಳೆಯರನ್ನು ಪ್ರತಿಭಟನೆಗೆ ಕಳಿಸುತ್ತೇನೆ ಎಂದರು.

ನನಗೆ ಡಿಕೆ ಶಿವಕುಮಾರ್ ಕಂಡರೆ ಅಸೂಯೆ ಅಂತಾ ಹೇಳಿದ್ದಾರೆ. ನಾನು ಯಾಕೆ ಅವರನ್ನು ನೋಡಿ ಅಸೂಯೆ ಪಡಲಿ. ವೀಡಿಯೋ ಮಾಡಿರುವುದು ಒಂದು ಭಾಗ. ವಿಡಿಯೋವನ್ನು ಚುನಾವಣೆಗಾಗಿ ವಿತರಿಸಿದ್ದು ಅಪರಾಧ ಅಲ್ವಾ? ವಿಡಿಯೋ ಮಾಡಿದ್ದಕ್ಕಿಂತಾ ಅದರ ವಿತರಣೆ ಅದು ಅಪರಾಧ ಅಲ್ವಾ? ಮಹಾನುಭಾವರು 1980 ರಲ್ಲೇ ಸಿಡಿ ಫ್ಯಾಕ್ಟರಿ ಓಪನ್ ಮಾಡಿದ್ದಾರೆ. ಅಧಿಕಾರ ಯಾರ ಅಪ್ಪನ ಆಸ್ತಿಯಲ್ಲ. ರಾಜಕೀಯದಲ್ಲಿ ಏಳು ಬೀಳು ಅದು ಭಗವಂತ ಇಚ್ಚೆ. ಇದರಲ್ಲಿ ಅಸೂಯೆ ಯಾಕೆ? ಎಂದು ಪ್ರಶ್ನಿಸಿದರು.

ಪ್ರಧಾನಿ ಸ್ಥಾನವನ್ನೇ ಅತ್ಯಂತ ಸುಲಭವಾಗಿ ತೆರವು ಮಾಡಿದ ವಂಶ ನಮ್ಮದು. ಎಲ್ಲಾ ಅಧಿಕಾರವನ್ನು ನಾವು ನೋಡಿ ಹಾಗಿದೆ. ಸಿಡಿ ಡಿಕೆ ಶಿವು ನಮಗೆ ಅಧಿಕಾರ ಬೇಡ ಅಂದರು ಬಂದಿದೆ. ನಾವು ಅಧಿಕಾರ ಹುಡುಕಿಕೊಂಡು ಹೋಗಿಲ್ಲ. ನಿಮಗೆ ಇದು ಗೊತ್ತಿರಲಿ ಎಂದರು.

**ನಾವು ಅಧಿಕಾರ ಹುಡುಕಿಕೊಂಡು ಹೋಗಿಲ್ಲ**



**ಪೆನ್ ಡ್ರೈವ್ ಮೂಲವೇ ಕಾರ್ತಿಕ್**

ಕಾರ್ತಿಕ್ ಹಾಸನದ ಕಾಂಗ್ರೆಸ್ ಅಭ್ಯರ್ಥಿ ಇಟ್ಟುಕೊಂಡು ಡಿಕೆ ಸುರೇಶ್ ಬಳಿಗೆ ಮೊದಲು ಹೋಗಿದ್ದ. ನಂತರ ಅದನ್ನು ಸಿಡಿ ಶಿವಕುಮಾರ್ ಕಾಪಿ ಮಾಡಿಕೊಂಡಿದ್ದಾರೆ. ನಾನು ಪ್ರಜ್ವಲ್ ಪರವಾಗಿ ಇಲ್ಲ. ಆತನ ಅಪರಾಧ ಸಾಬೀತಾದರೆ ಶಿಕ್ಷೆ ಕೊಡಿ. ಸಿಎಂ ಅವರೇ ಅಧಿಕಾರ ಶಾಶ್ವತ ಅಲ್ಲ. ನಿಮ್ಮ ಅಧಿಕಾರ ದುರುಪಯೋಗದ ವಿರುದ್ಧ ಕಾನೂನು ಹೋರಾಟ ಮಾಡಬೇಕಾಗುತ್ತದೆ. ದೇವರಾಜೇಗೌಡ, ಶಿವರಾಮೇಗೌಡ, ಡಿಕೆ ಶಿವಕುಮಾರ್ ಪೆನ್ ಡ್ರೈವ್ ವಿತರಣೆ ಹಿಂದೆ ಇದ್ದಾರೆ. ಅರ್ಧ ನಿಮಿಷದಲ್ಲೆ ಎಲ್ಲವೂ ತೀರ್ಮಾನ ಆಗಿದೆ. ಈಗ ಎಂಟು ಜನ ಪೊಲೀಸ್‌ರ ರಕ್ಷಣೆಯಲ್ಲಿ ಕಾರ್ತಿಕ್ ಇದ್ದಾನೆ? ಯಾವ ಕಾರಣಕ್ಕೆ ಇನ್ನೂ ಕಾರ್ತಿಕ್ ಬಂಧನ ತೋರಿಸಿಲ್ಲ? ಕೋರ್ಟ್‌ಗೆ ಹಾಜರು ಪಡಿಸಿಲ್ಲ ಹೇಳಿ?

ಎಸ್ ಐಟ ಗೆ ಇದುವರೆಗೂ ಕೊಟ್ಟ ಯಾವ ಪ್ರಕರಣ ತಾರ್ಕಿಕ ಅಂತ್ಯ ಕಂಡಿದೆ ಹೇಳಿ? ನನ್ನ ಅವಧಿಯಲ್ಲಿ ಯಾವ ಪ್ರಕರಣವನ್ನು ಎಸ್ ಐಟಿಗೆ ಕೊಟ್ಟಿರಲಿಲ್ಲ. ಅವರೇನೂ ಟೆರರಿಸ್ಟಾ ಫೋನ್ ಟ್ಯಾಪ್ ಮಾಡೋಕೆ ಅಂತಾ ಕೆಲವರು ಕೇಳಿದ್ದಾರೆ. ಅವರ ಬಳಿ ಇರೋರೆಲ್ಲಾ ಟೆರರಿಸ್ಟ್‌ಗಳೇ. ಬಹಳಷ್ಟು ಟೆರರಿಸ್ಟ್‌ಗಳು ಇವರುಗಳ ಸುತ್ತಮುತ್ತವೇ ಇದ್ದಾರೆ. ಈಗ ಸಿಎಂ ಪೆನ್ ಡ್ರೈವ್ ಬಗ್ಗೆ ಯಾರ ಮಾತಾಡಬೇಡಿ ಅಂದಿದ್ದಾರೆ. ಏಕೆಂದರೆ ನಿಮ್ಮ ಬುಡಕ್ಕೆ ಬರ್ತಾ ಇದೆಯಲ್ಲ. ಅದಕ್ಕೆ ಈಗ ಮಾತಾಡಬೇಡಿ ಅಂತಿದ್ದಾರೆ -ಎಚ್ ಡಿ ಕುಮಾರಸ್ವಾಮಿ, ಮಾಜಿ ಸಿಎಂ

# ಮಳೆ ಆರಂಭವಾದರೂ ರಸ್ತೆಗಿಲ್ಲ ದುರಸ್ತಿ ಭಾಗ್ಯ

• ಉದಯವಾಹಿನಿ ಕೋಲಾರ

ಜಿಲ್ಲೆಯಾದ್ಯಂತ ಮುಂಗಾರು ಶುರುವಾಗಿದ್ದು, ಮಳೆ ಹೆಚ್ಚಾಗುವ ಮೊದಲೇ ಜಿಲ್ಲಾಡಳಿತ ಕೋಲಾರ ಒಳಗೊಂಡಂತೆ ಜಿಲ್ಲಾದ್ಯಂತ ಹದಗೆಟ್ಟಿರುವ ರಸ್ತೆಗಳು, ಕೆರೆ-ಕಟ್ಟೆಗಳು, ರಾಜಕಾಲುವೆಗಳನ್ನು ದುರಸ್ತಿಪಡಿಸಿ, ಮುಂದಾಗುವ ಅನಾಹುತ ತಡೆಗೆ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರಿಂದ ಆಗ್ರಹ ಕೇಳಿಬಂದಿದೆ.

ಎರಡು ವರ್ಷಗಳ ಹಿಂದೆ ಜಿಲ್ಲೆಯಲ್ಲಿ ಸುರಿದ ಭಾರಿ ಮಳೆಯಿಂದ ಸಾಕಷ್ಟು ರಸ್ತೆಗಳು ಗುಂಡಿ ಬಿದ್ದು ಕೆಸರುಗದ್ದೆಗಳಾಗಿ ಮಾರ್ಪಟ್ಟು, ಸಂಚಾರಕ್ಕೆ ಯೋಗ್ಯವಿಲ್ಲದಂತಾಗಿದ್ದವು. ಆಗ ಎಚ್ಚೆತ್ತಿದ್ದ ಜಿಲ್ಲಾಡಳಿತ ದುರಸ್ತಿಗೆ ಮುಂದಾಗಿತ್ತಾದರೂ ಮುನ್ನೆಚ್ಚರಿಕೆ ವಹಿಸಿರಲಿಲ್ಲ. ತಾಲ್ಲೂಕಿನಿಂದ ಮತ್ತು ಹೋಬಳಿ ಕೇಂದ್ರಗಳಿಗೆ ಜಿಲ್ಲೆಗೆ ಬರುವ ಸಂಪರ್ಕ ರಸ್ತೆಗಳ ದುರಸ್ತಿ ಸ್ವಲ್ಪಮಟ್ಟಿಗೆ ಆಗಿದೆ. ಇನ್ನು ಅನೇಕ ಕಡೆ ರಸ್ತೆಗಳ ದುರಸ್ತಿಯಾಗಬೇಕಿದ್ದು, ಕೋಲಾರ ನಗರದಲ್ಲಿ ಅರ್ಧದಷ್ಟು ರಸ್ತೆಗಳ ದುರಸ್ತಿ ಆಗಬೇಕಿದೆ. ಕಳೆದ ಬಾರಿ ಮಳೆ ಕೈಕೊಟ್ಟಿದ್ದರಿಂದಾಗಿ ದುರಸ್ತಿ ಕಾಮಗಾರಿ ಆಮಗತಿಯಲ್ಲಿ ಸಾಗಿತ್ತು. ಆದರೆ, ಇನ್ನೂ ಕಾಮಗಾರಿ ಪೂರ್ಣಗೊಂಡಿಲ್ಲ.

ಒಂದು ವಾರದಿಂದ ಮಳೆ ಚುರುಕುಗೊಂಡಿದೆ. ಆದರೆ ರಸ್ತೆಗಳಲ್ಲಿನ ಗುಂಡಿ ಹಾಗೆ ಇದ್ದು, ಸಂಚಾರಕ್ಕೆ ತೊಂದರೆಯಾಗಿದೆ.

ಆರಂಭ ಹಂತದಲ್ಲಿ ಮಳೆ ಆರ್ಭಟಿಸುತ್ತಿರುವುದರಿಂದ ಈ ವರ್ಷ ಉತ್ತಮ ಮಳೆ ಆಗುವ ನಿರೀಕ್ಷೆ ಇದ್ದು, ಹದಗೆಟ್ಟ ರಸ್ತೆಗಳಲ್ಲಿ ಸಂಚರಿಸುವುದು ಹೇಗೆ ಎಂಬುದು ಸಾರ್ವಜನಿಕರ ಪ್ರಶ್ನೆಯಾಗಿದೆ. ಇನ್ನಾದರೂ ಜಿಲ್ಲಾಡಳಿತ ಎಚ್ಚೆತ್ತು ದುರಸ್ತಿಗೆ ಮುಂದಾಗಬೇಕಿದೆ.



☛ ಉದಯವಾಹಿನಿ ಚಿತ್ರ

# ಜೀವ ಪಡೆಯುತ್ತಿದೆ ದುಬಾರೆ: ರ್‍ಯಾಫ್ಟಿಂಗ್ ಆರಂಭಕ್ಕೂ ಕ್ಷಣಗಣನೆ

• ಉದಯವಾಹಿನಿ ಕುಶಾಲನಗರ

ಕೊಡಗು ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಾದ ದುಬಾರೆ ಹಾಗೂ ಕಾವೇರಿ ನಿಸರ್ಗ ಧಾಮದ ಕಾವೇರಿ ನದಿಯಲ್ಲಿ ನೀರಿನ ಪ್ರಮಾಣ ಏರಿಕೆಯಾಗುತ್ತಿದ್ದು, ಇಡೀ ಪರಿಸರ ಜೀವ ತಳೆಯುತ್ತಿದೆ.

ಜನವರಿಯ ನಂತರ ಇಲ್ಲಿನ ಕಾವೇರಿ ನದಿಯಲ್ಲಿ ನೀರು ಕಡಿಮೆಯಾಗುತ್ತಾ ಬಂದು, ಸುಮಾರು ಒಂದು ತಿಂಗಳಿನಿಂದ ಸಂಪೂರ್ಣ ಬರಡಾಗಿತ್ತು. ನದಿಯ ಈ ದಡದಿಂದ ಆಚೆಗಿನ ದಡಕ್ಕೆ ನಡೆದುಕೊಂಡು ಹೋದರೆ ಒಂದು ಹನಿ ನೀರು ಕಾಲಿಗೆ ಅಂಟದಂತಹ ನಿರ್ಜೀವ ಪರಿಸ್ಥಿತಿ ಎದುರಾಗಿತ್ತು.

ಎಲ್ಲಿ ನೋಡಿದರೂ ಕಲ್ಲು ಬಂಡೆಗಳು ಮಾತ್ರ ಗೋಚರಿಸುತ್ತಿದ್ದವು. ರ್‍ಯಾಫ್ಟಿಂಗ್ ಮತ್ತು ದೋಣಿ ವಿಹಾರದ ಕನಸಿನೊಂದಿಗೆ ಬಂದ ಪ್ರವಾಸಿಗರು ನಿರಾಸೆಯಿಂದ ವಾಪಸ್ ತೆರಳುತ್ತಿದ್ದರು. ಆದರೆ, ಈಗ ಬೀಳುತ್ತಿರುವ ಮಳೆಯಿಂದ ನದಿಯಲ್ಲಿ ನೀರು ಹರಿಯಲು ಆರಂಭಿಸಿದೆ. ದೋಣಿ ವಿಹಾರ ಶುರುವಾಗಿದ್ದು, ರ್‍ಯಾಫ್ಟಿಂಗ್ ಆರಂಭಕ್ಕೂ ಕ್ಷಣಗಣನೆ ಆರಂಭವಾಗಿದೆ.

ದುಬಾರೆ ಕಾವೇರಿ ನದಿಯಲ್ಲಿ ಈಗ ಸ್ಟಿಲ್ ವಾಟರ್ ರಿವರ್ ರಾಫ್ಟಿಂಗ್ ಕ್ರೀಡೆಗೆ ಮರು ಚಾಲನೆ ನೀಡಲಾಗಿದೆ. ಅದೇ ರೀತಿ ಗುಡ್ಡೆಹೊಸೂರು ಬಳಿಯ ಕಾವೇರಿ ನಿಸರ್ಗಧಾಮದಲ್ಲಿ ಕೂಡ ದೋಣಿ ವಿಹಾರ ಆರಂಭಗೊಂಡಿದೆ. ಇದರಿಂದ ಪ್ರವಾಸಿಗರಿಗೆ ಸಂತಸ ಉಂಟಾಗಿದೆ. ಮಳೆಯಿಂದಾಗಿ ಒಣಗಿ ನಿಂತಿದ್ದ ಗಿಡ ಮರಗಳು ಚಿಗುರೊಡೆದು ಹಸಿರಿನಿಂದ ಕಂಗೊಳಿಸುತ್ತಿವೆ.



☛ ಉದಯವಾಹಿನಿ ಚಿತ್ರ

**ಕಾವೇರಿ ನದಿಗೆ ಜೀವ**

ಕಳೆದ ಒಂದೂವರೆ ತಿಂಗಳಿನಿಂದ ದುಬಾರೆ ಪ್ರವಾಸಿ ತಾಣದಲ್ಲಿ ಪ್ರವಾಸಿಗರ ಸಂಖ್ಯೆ ಇಳಿಮುಖವಾಗಿತ್ತು. ಪ್ರವಾಸಿ ತಾಣಗಳ ವಾತಾವರಣವೇ ಬದಲಾವಣೆಯಾಗಿತ್ತು. ಇದೀಗ ಕೊಡಗು ಜಿಲ್ಲೆಯಲ್ಲಿ ಕೆಲವು ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಕಾವೇರಿ ನದಿಗೆ ಜೀವ ಕಳೆ ಬಂದಿದೆ. ಸಂಪೂರ್ಣ ಒಣಗಿದ ನದಿಯಲ್ಲಿ ಜೀವಸೆಲೆ ಬಂದಂತೆ ಆಗಿದ್ದು, ನೀರಿನ ಹರಿವಿನ ಪ್ರಮಾಣದಲ್ಲಿ ಏರಿಕೆ ಕಂಡು ಬಂದಿದೆ.

# ನಾಗರೀಕರ ಸಮಸ್ಯೆಗೆ ದೊರೆತ ಪರಿಹಾರ

• ಉದಯವಾಹಿನಿ ಕೆಜಿಎಫ್

ಕಳೆದ 4 ದಿನಗಳಿಂದ ಸುರಿದ ವರುಣನ ಆರ್ಭಟಕ್ಕೆ ನಗರಸಭೆ ವ್ಯಾಪ್ತಿಯ ಗೀತಾ ವಾರ್ಡ್ ಸ್ವರ್ಣಕುಪ್ಪಂ ಬಡಾವಣೆಯಲ್ಲಿನ ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಗೊಂಡಿತ್ತು ಮಾಹಿತಿ ಪಡೆದ ನಗರಸಭೆ ಸದಸ್ಯ ರಾಧವಿಜಿಕುಮಾರ ರಾತ್ರಿ 12 ಗಂಟೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ನಗರಸಭೆ ಸದಸ್ಯ ರಾಧವಿಜಿಕುಮಾರ ತಕ್ಷಣ ಜೆಸಿಬಿಯನ್ನು ಸ್ಥಳಕ್ಕೆ ಕರೆಸಿ ಮನೆಗಳಿಗೆ ನುಗ್ಗಿದ್ದ ನೀರನ್ನು ಹೊರ ಹಾಕಿದ್ದು ಶಾಶ್ವತವಾಗಿ ಯಾವುದೆ ಮಳೆ ಬಂದರು ಮಳೆ ನೀರು ಮನೆಗಳಿಗೆ ನೀರು ನುಗ್ಗದಂತೆ ಶಾಶ್ವತವಾದ ತಡೆಗೊಡೆ ನಿರ್ಮಿಸುವ ಮೂಲಕ ಪರಿಹಾರವನ್ನು ಕೈಗೊಂಡರು ಆದೇ ರೀತಿ ಸ್ವರ್ಣ ಕುಪ್ಪಂ ಬಡಾವಣೆಯ ನಾಗರೀಕರು ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡುವ ನಿಟ್ಟನಲ್ಲಿ ನೂತನ ಕೊಳವೆಬಾವಿ ಕೋರೆಸುವ ಮೂಲಕ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿದರು.

ಈ ವೇಳೆ ಮಾತನಾಡಿದ ನಗರಸಭೆ ಸದಸ್ಯ ರಾಧವಿಜಿಕುಮಾರ ಗೀತಾ ವಾರ್ಡ್ ಸ್ವರ್ಣ ಕುಪ್ಪಂ ಬಡಾವಣೆಯಲ್ಲಿ ನಿರ್ಮಿಸಲಾಗಿರುವ ಮನೆಗಳು ತಗ್ಗು ಪ್ರದೇಶದಲ್ಲಿರುವುದರಿಂದ ಮಳೆ ಬಂದರೆ ಸಾಕು ಮಳೆ ನೀರು ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಠಿ ಮಾಡುತ್ತಿತ್ತು ಈ ಹಿನ್ನಲೆಯಲ್ಲಿ ಮಳೆ ನೀರು ಮನೆಗಳಿಗೆ ನುಗ್ಗದಂತೆ ತಡೆ ಗೋಡೆ ನಿರ್ಮಿಸಿ ಮಳೆ ನೀರು ಇತರೆಡೆ ಹರಿಯುವಂತೆ ಮಾಡಲಾಗಿದ್ದು ಶಾಶ್ವತವಾಗಿ ಸಮಸ್ಯೆ ಬಗೆಹರಿಸಲಾಗಿದೆ ಆದೇ ರೀತಿ ಈ ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿ ಕಾಡುತ್ತಿತ್ತು ಆದ್ದರಿಂದ ನಗರಸಭೆಯ ತುರ್ತು ಪರಿಹಾರ ನಿಧಿಯಡಿ ಬಿಡುಗಡೆಗೊಂಡಿರುವ ಅನುದಾನದಲ್ಲಿ ನೂತನವಾದ ಕೊಳವೆಬಾವಿ ಕೊರೆಸಿ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಲಾಗಿದೆ ಎಂದು ಹೇಳಿದರು.

ಈ ವೇಳೆ ನಗರಸಭೆ ಅಧಿಕಾರಿಗಳಾದ ರಾಮು ಹಾಗೂ ಇತರರು ಹಾಜರಿದ್ದರು.



☛ ಉದಯವಾಹಿನಿ ಚಿತ್ರ


# ಪತ್ನಿಯನ್ನೇ ಹತ್ಯೆಗೈದು ಎಸ್ಕೇಪ್ ಆದ ಪತಿ: ಪೊಲೀಸರಿಂದ ಶೋಧ

• ಉದಯವಾಹಿನಿ ರಾಮನಗರ

ಪತಿಯೊರ್ವ ತನ್ನ ಪತ್ನಿಯನ್ನೇ ಹತ್ಯೆಗೈದು ಪರಾರಿಯಾಗಿರುವ ಘಟನೆ ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ಮಂಗಾಡಹಳ್ಳಿಯಲ್ಲಿ ನಡೆದಿದೆ.ಹತ್ಯೆಯಾದ ಮಹಿಳೆಯನ್ನು ಮಂಗಾಡಹಳ್ಳಿ ಗ್ರಾಮದ ಅಶ್ವಿನಿ (30) ಎನ್ನಲಾಗಿದ್ದು ಆರೋಪಿಯನ್ನು ಮಹಿಳೆಯ ಪತಿ ರಮೇಶ್ ಎನ್ನಲಾಗಿದೆ.

ಆಸ್ತಿ ವಿಚಾರಕ್ಕೆ ಗಲಾಟೆ ನಡೆದು ಪತ್ನಿ ಅಶ್ವಿನಿ ಮೇಲೆ ರಮೇಶ್ ಮಾರಣಾಂತಿಕವಾಗಿ ಹಲ್ಲೆ ನಡೆಸಿ ಬಳಿಕ ಪರಾರಿಯಾಗಿದ್ದಾನೆ ಎನ್ನಲಾಗಿದೆ.

ಘಟನೆ ಸಂಬಂಧ ಅಕ್ಕೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಪೊಲೀಸರು ಘಟನಾ ಸ್ಥಳದಲ್ಲಿ ಪರಿಶೀಲನೆ ನಡೆಸುತ್ತಿದ್ದಾರೆ. ಪರಾರಿಯಾದ ಆರೋಪಿಯ ಶೋಧಕ್ಕಾಗಿ ಪೊಲೀಸರು ಬಲೆ ಬೀಸಿದ್ದಾರೆ.



☛ ಉದಯವಾಹಿನಿ ಚಿತ್ರ

# ಮರಿಯಾಲ ಮಠಕ್ಕೆ ಮರಿ ತಿಬ್ಬೇಗೌಡ ಭೇಟಿ

• ಉದಯವಾಹಿನಿ ಚಾಮರಾಜನಗರ

ದಕ್ಷಿಣ ಶಿಕ್ಷಕರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಮರಿತಿಬ್ಬೇಗೌಡ ಮರಿಯಾಲದ ಮಠಕ್ಕೆ ಭೇಟಿ ನೀಡಿ, ಅಲ್ಲಿನ ಮಠಾಧ್ಯಕ್ಷರಾದ ಶ್ರೀ ಇಮ್ಮಡಿ ಮುರುಘರಾಜೇಂದ್ರಸ್ವಾಮಿಗಳಿಂದ ಆರ್ಶೀವಾದ ಪಡೆದರು.

ದಕ್ಷಿಣ ಶಿಕ್ಷಕರ ಕ್ಷೇತ್ರದ ಅಭ್ಯರ್ಥಿಯಾಗಿರುವ ಮಾಜಿ ಉಪ ಸಭಾಪತಿ ಮರಿತಿಬ್ಬೇಗೌಡ ಅವರು ಚಾಮರಾಜನಗರ ತಾಲ್ಲೂಕಿನಲ್ಲಿ ಚುನಾವಣಾ ಪ್ರಚಾರ ಹಾಗೂ ಶಿಕ್ಷಕರನ್ನು ಭೇಟಿ ಮಾಡಿ ಮತಯಾಚನೆ ಮಾಡಿದರು. ಇದಕ್ಕು ಮುನ್ನಾ ಶ್ರೀಮಠಕ್ಕೆ ಭೇಟಿ ನೀಡಿ, ಹಿರಿಯ ಶ್ರೀಗಳ ಗದ್ದಗೆಗೆ ನಮಸ್ಕಾರ ಮಾಡಿದರು. ಬಳಿಕ ಶ್ರೀಮಠಾಧ್ಯಕ್ಷರಾದ ಇಮ್ಮಡಿ ಮುರುಘರಾಜೇಂದ್ರ ಸ್ವಾಮಿಗಳಿಗೆ ಶಾಲು ಹೊದಿಸಿ, ಹಾರ ಹಾಕಿ ಫಲತಾಂಬಲು ನೀಡಿ ಸನ್ಮಾನಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮರಿ ತಿಬ್ಬೇಗೌಡರು, ಐದನೇ ಬಾರಿಗೆ ಶಿಕ್ಷಕರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ಆಯ್ಕೆ ಸ್ಪರ್ಧೆ ಮಾಡಿದ್ದು, ತಾವು ಆಶೀರ್ವಾದ ಮಾಡಬೇಕು. ತಮ್ಮ ಸಂಸ್ಥೆಯ ಶಿಕ್ಷಕರ ಬಂಧುಗಳು ಮೊ ದಲ ಪ್ರಾಶಸ್ತ್ಯ ಮತವನ್ನು ನನಗೆ ನೀಡುವಂತೆ ಸೂಚನೆ ನೀಡಬೇಕು. ತಮ್ಮೆಲ್ಲರ ಆರ್ಶೀವಾದದಿಂದ ಆಯ್ಕೆಯಾದರೆ, ಮುಂದಿನ ದಿನಗಳಲ್ಲಿ ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಯ ಪ್ರಗತಿಗೆ ಶಕ್ತಿ ಮೀರಿ ಶ್ರಮಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲ ಮಹದೇವಸ್ವಾಮಿ, ಉಪನ್ಯಾಸಕ ಆಶೋಕ, ಮಂಜುನಾಥ್, ಮುಖಂಡರಾದ ಬಳ್ಳಾರಿ ಗೌಡ, ಷಡಕ್ಷರಿ ಇತರರು ಇದ್ದರು.



☛ ಉದಯವಾಹಿನಿ ಚಿತ್ರ

**ಪ್ರಗತಿಗೆ ಶಕ್ತಿ ಮೀರಿ ಶ್ರಮ**

# ಕುಡಿಯುವ ನೀರು ಕಲುಷಿತಗೊಳ್ಳದಂತೆ ಎಚ್ಚರ ವಹಿಸಿ: ಡಿಸಿ ರಾಜೇಂದ್ರ



☛ ಉದಯವಾಹಿನಿ ಚಿತ್ರ

• ಉದಯವಾಹಿನಿ ಮೈಸೂರು

ಜಿಲ್ಲೆಯಲ್ಲಿ ಕುಡಿಯುವ ನೀರಿನ ಮೂಲಗಳು ಕಲುಷಿತಗೊಳ್ಳದಂತೆ ನೋಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಸೂಚಿಸಿದರು.

ಜಿಲ್ಲೆಯ ತಹಶೀಲ್ದಾರ್‌ಗಳು, ಪಿಡಿಒಗಳು, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು, ಮಹಾನಗರ ಪಾಲಿಕೆ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳೊಂದಿಗೆ ಬುಧವಾರ ನಡೆದ ಸಭೆಯಲ್ಲಿ ಅವರು ಮಾತನಾಡಿದರು. ಗ್ರಾಮಗಳಲ್ಲಿ ಸ್ವಚ್ಚತೆ, ಚರಂಡಿಗಳ ನಿರ್ವಹಣೆ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಮೇಲ್ವಿಚಾರಣೆ ನಡೆಸಬೇಕು. ನೀರುಗಂಟಿಗಳು, ಆಶಾ ಕಾರ್ಯಕರ್ತೆಯರನ್ನು ಆ ಗ್ರಾಮದ ಪ್ರತಿ ಮನೆಗೂ ಕಳುಹಿಸಿ ನೀರಿನ ಶೇಖರಣೆ ಹಾಗೂ ಸ್ವಚ್ಚತೆಯ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಹವಾಮಾನ ಬದಲಾವಣೆ ಮತ್ತಿತರ ಕಾರಣಗಳಿಂದ ಕರಳು ಬೇನೆಗೆ ಒಳಗಾದವರಿಗೆ ಪ್ರತಿ ತಾಲ್ಲೂಕು ಆಸ್ಪತ್ರೆಗಳಲ್ಲಿ 5 ಹಾಸಿಗೆಗಳನ್ನು ಕಾಯ್ದಿರಿಸಬೇಕು. ಈ ಸಂಬಂಧ ಖಾಸಗಿ ಆಸ್ಪತ್ರೆಗಳಲ್ಲಿ ರೋಗಿಗಳು ದಾಖಲಾದರೆ ಸಂಬಂಧಪಟ್ಟ ತಾಲ್ಲೂಕು ಆರೋಗ್ಯಾಧಿಕಾರಿಗಳಿಗೆ ಮಾಹಿತಿ ನೀಡಬೇಕು. ಹೋಟೆಲ್, ರಸ್ತೆಯ ಬದಿಯ ಫಾಸ್ಟ್ ಫುಡ್ ಕೇಂದ್ರಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳುವ ಬಗ್ಗೆ ತಿಳಿಸಬೇಕು. ಶುದ್ಧ ಕುಡಿಯುವ ನೀರು ಒದಗಿಸುವಂತೆ ಕಟ್ಟುನಿಟ್ಟಿನ ಸೂಚನೆ ಕೊಡಬೇಕು' ಎಂದು ಹೇಳಿದರು.

ಕುಡಿಯುವ ನೀರಿನ ಮೂಲಗಳಿಗೆ ಕಲುಷಿತ ನೀರು ಸೇರ್ಪಡೆ ಆಗುತ್ತಿರುವ ಬಗ್ಗೆ ದೂರು ಬಂದಲ್ಲಿ ತಕ್ಷಣ ಆಯಾ ತಹಶೀಲ್ದಾರ್, ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಗ್ರಾಮ ಆಡಳಿತ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಬೇಕು. ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು ಶುದ್ಧ ನೀರು ಪೂರೈಕೆಗೆ ಕ್ರಮ ವಹಿಸಬೇಕು - ಡಿಸಿ

# ದೊಣ್ಣೆಯಿಂದ ಹೊಡೆದು ವ್ಯಕ್ತಿಯ ಹತ್ಯೆ

• ಉದಯವಾಹಿನಿ ತುಮಕೂರು

ವ್ಯಕ್ತಿಯೊಬ್ಬರ ಮೇಲೆ ಅಪರಿಚಿತರು ದೊಣ್ಣೆಯಿಂದ ತಲೆಗೆ ಬಲವಾಗಿ ಹೊಡೆದು ಹತ್ಯೆ ಮಾಡಿದ್ದಾರೆ ಎಂಬ ಮಾಹಿತಿ ಪೊಲೀಸರ ಪ್ರಾಥಮಿಕ ತನಿಖೆಯಲ್ಲಿ ಹೊರಬಿದ್ದಿದೆ.

ಪಾವಗಡ ಪಟ್ಟಣದ ಬಾಬಯ್ಯನ ಬೀದಿಯ ನಿವಾಸಿ ನಾರಾಯಣಿ (35) ಹತ್ಯೆಯಾದ ವ್ಯಕ್ತಿ.ಜಿಲ್ಲೆಯ ಪಾವಗಡ ಪಟ್ಟಣದ ಮೀನಾ ನರ್ಸಿಂಗ್ ಹೋಮ್ ಹಿಂಭಾಗದಲ್ಲಿ ಮೇ. 21ರ ಮಂಗಳವಾರ ಮಧ್ಯರಾತ್ರಿ ಈ ಘಟನೆ ನಡೆದಿದ್ದು, ಕುಡಿದ ಮತ್ತಿನಲ್ಲಿ ಈ ಘಟನೆ ನಡೆದಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ.ಘಟನಾ ಸ್ಥಳಕ್ಕೆ ಪಾವಗಡ ಪೊಲೀಸ್ ಠಾಣೆಯ ಪಿಎಸ್‌ಐ ವಿಜಯ್ ಕುಮಾರ್ ಮತ್ತು ಖಾಸಿಂ ಸೇರಿದಂತೆ ಪೊಲೀಸ್ ಸಿಬ್ಬಂದಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೃತ ವ್ಯಕ್ತಿ ಪತ್ನಿ, ಓರ್ವ ಪುತ್ರಿ, ತಂದೆ ತಾಯಿಯನ್ನು ಅಗಲಿದ್ದಾರೆ.



☛ ಉದಯವಾಹಿನಿ ಚಿತ್ರ

# ಚಿಕ್ಕಬಳ್ಳಾಪುರ ಜಿಲ್ಲೆಯ ಅಭಿವೃದ್ಧಿಗೆ ಇಲ್ಲ ವೇಗ

## • ಜಿಲ್ಲೆಯ ಪಾಲಿಗೆ ಈ ಒಂದು ವರ್ಷದಲ್ಲಿ ರಾಜ್ಯ ಸರ್ಕಾರ ಮಹತ್ವದ ಯೋಜನೆ ಮತ್ತು ಕೊಡುಗೆಗಳನ್ನು ನೀಡಿಲ್ಲ

• ಉದಯವಾಹಿನಿ ಚಿಕ್ಕಬಳ್ಳಾಪುರ

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷ ಪೂರ್ಣವಾಗಿದೆ. ಈ ಅವಧಿಯಲ್ಲಿ ಚಿಕ್ಕಬಳ್ಳಾಪುರಕ್ಕೆ ದೊರೆತಿದ್ದೇನೆ ಎಂದು ಅವಲೋಕಿಸಿದರೆ ನಿರಾಶೆ ಎದ್ದು ಕಾಣುತ್ತದೆ. ಗ್ಯಾರಂಟಿ ಯೋಜನೆಗಳೇ ಜಿಲ್ಲೆಯ ಜನರಿಗೆ ವರ ಎನ್ನುವಂತೆ ಆಗಿದೆ.

ಜಿಲ್ಲೆಯಲ್ಲಿ ಮೂರು ಮಂದಿ ಕಾಂಗ್ರೆಸ್ ಶಾಸಕರು ಆಯ್ಕೆ ಆಗಿದ್ದರೆ, ಗೌರಿಬಿದನೂರಿನ ಪಕ್ಷೇತರ ಶಾಸಕ ಕೆ.ಎಚ್.ಪುಟ್ಟಸ್ವಾಮಿ ಗೌಡ ಕಾಂಗ್ರೆಸ್ ಬೆಂಬಲಿಸಿದ್ದಾರೆ. ಚಿಂತಾಮಣಿಯ ಡಾ.ಎಂ.ಸಿ.ಸುಧಾಕರ್ ಸಚಿವರೂ ಆಗಿದ್ದಾರೆ. ಹೀಗಿದ್ದರೂ ಜಿಲ್ಲೆಯ ಪಾಲಿಗೆ ಈ ಒಂದು ವರ್ಷದಲ್ಲಿ ರಾಜ್ಯ ಸರ್ಕಾರ ಮಹತ್ವದ ಯೋಜನೆ ಮತ್ತು ಕೊಡುಗೆಗಳನ್ನು ನೀಡಿಲ್ಲ.

ಕಳೆದ ಒಂದು ವರ್ಷದಲ್ಲಿ ಜಿಲ್ಲೆಗೆ ಐದು ಕ್ಷೇತ್ರಗಳ ಶಾಸಕರ ಪ್ರದೇಶಾಭಿವೃದ್ಧಿ ನಿಧಿಗೆ ತಲಾ 50 ಲಕ್ಷ ನೀಡಲಾಗಿದೆ. ಇದನ್ನು ಹೊರತುಪಡಿಸಿ ಹೆಚ್ಚಿನ ಅನುದಾನ ಬಂದಿಲ್ಲ. ಐದು ಗ್ಯಾರಂಟಿ ಯೋಜನೆಗಳು ಜಿಲ್ಲೆಯ ಮಹಿಳೆಯರು ಮತ್ತು ನಾಗರಿಕರಿಗೆ ಪಾಲಿಗೆ ದಕ್ಕಿದ ಸಂಭ್ರಮ ಎನ್ನುವಂತೆ ಇದೆ. ಶಾಶ್ವತ ನೀರಾವರಿ ಯೋಜನೆ, ಎತ್ತಿನಹೊಳೆ ಯೋಜನೆಯ ಮೂಲಕ ನೀರು ಹರಿಸುವುದು, ನಂದಿ ಗಿರಿಧಾಮಕ್ಕೆ ರೋಪ್ ವೇ, ಎಚ್.ಎನ್.ವ್ಯಾಲಿ ನೀರನ್ನು ಮೂರು ಹಂತದಲ್ಲಿ ಶುದ್ದೀಕರಿಸುವುದು, ಕೈಗಾರಿಕೀಕರಣದ ಯೋಜನೆಗಳು ಈ ಒಂದು ವರ್ಷದ ಅವಧಿಯಲ್ಲಿ ಸ್ವಲ್ಪ ಮಟ್ಟಿಗೂ ಆಶಾದಾಯಕ ಬೆಳವಣಿಗೆಗಳನ್ನು ಕಂಡಿಲ್ಲ.

**ಎತ್ತಿನಹೊಳೆಗೆ ಸಿಗದ ವೇಗ:** 2023ರ ವಿಧಾನಸಭಾ ಚುನಾವಣೆ ಪೂರ್ವದಲ್ಲಿ ಜಿಲ್ಲೆಯ ಶಾಸಕರು 2023ರ ಡಿಸೆಂಬರ್ ಅಂತ್ಯದ ವೇಳೆಗೆ ಜಿಲ್ಲೆಗೆ ಎತ್ತಿನಹೊಳೆ ನೀರು ಹರಿಯಲಿದೆ ಎಂದು ಹೇಳಿದ್ದರು. ಆದರೆ 2024ರಲ್ಲಿಯೂ ಎತ್ತಿನಹೊಳೆ ನೀರು ಜಿಲ್ಲೆಗೆ ಬರುವ ಲಕ್ಷಣಗಳು ಕಾಣುತ್ತಿಲ್ಲ. ಈ ಒಂದು ವರ್ಷದ ಅವಧಿಯಲ್ಲಿ ಜಿಲ್ಲೆಯಲ್ಲಿ ಎತ್ತಿನಹೊಳೆ ಯೋಜನೆ ಪ್ರಗತಿ ಬಗ್ಗೆ ಸರ್ಕಾರ ಪರಿಶೀಲಿಸಿದ್ದು ಕಂಡು ಬರಲಿಲ್ಲ. ಜಿಲ್ಲೆಯ ಜನಪ್ರತಿನಿಧಿಗಳು ಈ ಬಗ್ಗೆ ಗಟ್ಟಿಧ್ವನಿಯಲ್ಲಿ ಕೇಳಿದ್ದು ಸಹ ಇಲ್ಲ. ಎತ್ತಿನಹೊಳೆ ಜೊತೆಗೆ ಶಾಶ್ವತ ನೀರಾವರಿ ಯೋಜನೆಗಳ ಅನುಷ್ಠಾನದ ಬಗ್ಗೆಯು ಸರ್ಕಾರದ ಮೇಲೆ ಒತ್ತಡ ತರುವ ಕೆಲಸವನ್ನು ಜಿಲ್ಲೆಯ ಶಾಸಕರು, ಸಚಿವರು ಮಾಡುತ್ತಿಲ್ಲ.

**ಚಿಮೂಲ್ ರಚನೆಯ ಮಾತಿಲ್ಲ:** ಈ ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಕೋಚಿಮುಲ್ ಪ್ರತ್ಯೇಕಗೊಳಿಸಿ ಚಿಕ್ಕಬಳ್ಳಾಪುರ ಹಾಲು ಒಕ್ಕೂಟ ರಚಿಸಲಾಗಿತ್ತು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆ ಚಿಮುಲ್ ರಚನೆಯನ್ನು ರದ್ದುಗೊಳಿಸಿತು. ಆ ನಂತರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್, ಆಸ್ತಿ ಹಂಚಿಕೆ ಸೇರಿದಂತೆ ಎಲ್ಲ ಸಾಧಕ ಬಾಧಕಗಳನ್ನು ಪರಿಶೀಲಿಸಿ ಕೋಚಿಮುಲ್ ವಿಭಜಿಸಲಾಗುವುದು ಎಂದಿದ್ದರು. ಆದರೆ ಸಚಿವರ ಮಾತು ಭರವಸೆಗೆ ಮಾತ್ರ ಸೀಮಿತವಾಗಿದೆ. ಚಿಮುಲ್ ರಚನೆಯ ವಿಚಾರವು ಈಗ ಗೌಣವಾಗಿದೆ. ನಂದಿಗಿರಿಧಾಮಕ್ಕೆ ರೋಪ್ ವೇ ಅಳವಡಿಸುವ ಕಾಮಗಾರಿ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ರಾಜಕೀಯ ಜಟಾಪಟಿಗೂ ಕಾರಣವಾಗಿತ್ತು. ವಿಧಾನಸಭೆ ಚುನಾವಣೆಯ ಹೊಸ್ತಿಲಿನಲ್ಲಿ ಅಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರೋಪ್ ವೇಗೆ ಭೂಮಿ ಪೂಜೆ ನೆರವೇರಿಸಿದ್ದರು. ನಂತರ ಸರ್ಕಾರ ಬದಲಾಯಿತು.

**ಎತ್ತಿನಹೊಳೆ ನೀರು ಜಿಲ್ಲೆಗೆ ಬರುವ ಲಕ್ಷಣಗಳು ಕಾಣುತ್ತಿಲ್ಲ**



☛ ಉದಯವಾಹಿನಿ ಚಿತ್ರ

ಶಿಡ್ಲಘಟ್ಟದಲ್ಲಿ ಹೈಟೆಕ್ ರೇಷ್ಮೆ ಗೂಡು ಮಾರುಕಟ್ಟೆಗೆ ಸರ್ಕಾರ 100 ಕೋಟಿ ನೀಡಿದೆ. ಆದರೆ ಇಂದಿಗೂ ಕಾಮಗಾರಿ ಆರಂಭವಾಗಿಲ್ಲ. ಚಿಂತಾಮಣಿಯಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಸ್ಥಾಪನೆ ಬಗ್ಗೆಯೂ ಉಸ್ತುವಾರಿ ಸಚಿವರು ಭರವಸೆ ನೀಡಿದ್ದಾರೆ.

**ಅಧಿಕಾರಿಗಳ ಸಭೆ**

ಕಾಂಗ್ರೆಸ್ ಸರ್ಕಾರ ಬಂದ ನಂತರ ಯೋಜನೆಯ ಬಗ್ಗೆ ಖುದ್ದು ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ನಂದಿ ಬೆಟ್ಟದಲ್ಲಿ ಅಧಿಕಾರಿಗಳ ಸಭೆ ನಡೆಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಸಹ ಸಭೆಗಳನ್ನು ನಡೆಸಿದರು. ಆದರೆ ಇಂದಿಗೂ ಈ ಯೋಜನೆಯ ತೊಡಕುಗಳನ್ನು ನಿವಾರಿಸಲು ಸಾಧ್ಯವಾಗಿಲ್ಲ.

**ಭರಪೂರ ಭರವಸೆ**

75 ಕೋಟಿ ವೆಚ್ಚದಲ್ಲಿ ಜಿಲ್ಲಾ ಕ್ರೀಡಾಂಗಣವನ್ನು ಅಭಿವೃದ್ಧಿಗೊಳಿಸುವುದಾಗಿ ಸಚಿವ ಡಾ.ಎಂ.ಸಿ.ಸುಧಾಕರ್ ಭರವಸೆ ನೀಡಿದ್ದಾರೆ. ಕ್ರೀಡಾಂಗಣ ಅಭಿವೃದ್ಧಿಯ ನೀಲನಕ್ಷೆ ಸಹ ರೂಪಿಸಿದ್ದಾರೆ.

# ಮಿನಿ ನ್ಯೂಸ್

## ಮೈಸೂರಿನಲ್ಲಿ ಅನಿಲ ಸೋರಿಕೆಯಿಂದ ಒಂದೇ ಕುಟುಂಬದ ನಾಲ್ವರು ಸಾವು

• ಉದಯವಾಹಿನಿ ಮೈಸೂರು

ಮೈಸೂರಿನಲ್ಲಿ ಘೋರ ದುರಂತವೊಂದು ಸಂಭವಿಸಿದ್ದು, ಅನಿಲ ಸೋರಿಕೆಯಿಂದ ಒಂದೇ ಕುಟುಂಬದ ನಾಲ್ವರು ಸಾವನ್ನಪ್ಪಿರುವ ಘಟನೆ ನಡೆದಿದೆ. ಮೈಸೂರು ಜಿಲ್ಲೆಯ ಯರೆಗನಹಳ್ಳಿಯಲ್ಲಿ ಒಂದೇ ಕುಟುಂಬದ ನಾಲ್ವರು ಅನುಮಾನಸ್ಪದವಾಗಿ ಸಾವನ್ನಪ್ಪಿದ್ದಾರೆ ಎಂದು ವರದಿಯಾಗಿದ್ದು, ಬಟ್ಟೆ ಐರನ್ ಮಾಡುತ್ತಿದ್ದ ಮಂಜುಳ (39), ಕುಮಾರಸ್ವಾಮಿ (45) ಹಾಗೂ ಅರ್ಚನಾ (19), ಸ್ವಾತಿ (17) ಎಂಬುವರ ಶವಗಳು ಪತ್ತೆಯಾಗಿವೆ.

ಘಟನೆ ಕುರಿತು ಸ್ನೇಹಿತರು ಮಾಹಿತಿ ನೀಡಿದ್ದು, ಎರಡು ದಿನದ ಹಿಂದೆಯೇ ಇವರು ಸಾವನ್ನಪ್ಪಿದ್ದಾರೆ. ಮೃತರು ಚಿಕ್ಕಮಗಳೂರು ಜಿಲ್ಲೆಯ ಸಖರಾಯಪಟ್ಟಣದವರು, ಕಳೆದ 30 ವರ್ಷಗಳಿಂದ ಇಲ್ಲೇ ವಾಸವಾಗಿದ್ದಾರೆ. ರಾತ್ರಿಯಿಂದ ಬಾಗಿಲು ತೆರೆಯದೇ ಇದ್ದಾಗ ಅನುಮಾನ ಬಂದು ನೋಡಿದಾಗ ನಾಲ್ವರ ಶವಗಳು ಪತ್ತೆಯಾಗಿವೆ ಎಂದು ತಿಳಿಸಿದ್ದಾರೆ.

## ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

• ಉದಯವಾಹಿನಿ ಮಡಿಕೇರಿ

2024-25 ನೇ ಸಾಲಿನಲ್ಲಿ ಸೋಮವಾರಪೇಟೆ ತಾಲ್ಲೂಕಿನ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ನಡೆಯುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳು ಹಾಗೂ ವಾಲ್ಮೀಕಿ ಆಶ್ರಮ ಶಾಲೆಗಳಲ್ಲಿ ಯಾವುದೇ ಶುಲ್ಕವಿಲ್ಲದೇ ಸರ್ಕಾರದ ವತಿಯಿಂದ ಊಟ, ವಸತಿ, ಸಮವಸ್ತ್ರ, ಶೂ, ಸಾಕ್ಸ್, ಪಠ್ಯ ಪುಸ್ತಕ, ಲೇಖನ ಸಾಮಗ್ರಿಗಳು, ಶುಚಿ ಸಂಭ್ರಮ ಕಿಟ್(ಸೋಪು, ಎಣ್ಣೆ, ಬ್ರಶಸ್, ಪೇಸ್ಟ್, ಪೌಡರ್), ಕಂಪ್ಯೂಟರ್ ಲ್ಯಾಬ್, ಆಟೋಪಕರಣಗಳು ಹಾಗೂ ಇತರೆ ಸೌಲಭ್ಯಗಳು ಮತ್ತು ನುರಿತ ಬೋಧಕರಿಂದ ಬೋಧನಾ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದ್ದು, ವಿದ್ಯಾರ್ಥಿಗಳ ಉಚಿತ ಪ್ರವೇಶಾತಿಗೆ ಅವಕಾಶ ಕಲ್ಪಿಸಲಾಗಿದೆ.

ಸಾರ್ವಜನಿಕರು ತಮ್ಮ ಮಕ್ಕಳ ಉತ್ತಮ ಭವಿಷ್ಯಕ್ಕಾಗಿ ಕುಶಾಲನಗರ ತಾಲ್ಲೂಕು ನಂಜರಾಯಪಟ್ಟಣ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯ, (6362555320), ಕುಶಾಲನಗರದ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿ ನಿಲಯ (9481143491), ಸೋಮವಾರಪೇಟೆ ತಾಲ್ಲೂಕಿನ ಮಾಲಂಬಿ ವಾಲ್ಮೀಕಿ ಆಶ್ರಮ ಶಾಲೆ (6362555320), ಯಡವನಾಡು ವಾಲ್ಮೀಕಿ ಆಶ್ರಮ ಶಾಲೆ (8618546009), ಕುಶಾಲನಗರ ಬಸವನಹಳ್ಳಿ ವಾಲ್ಮೀಕಿ ಆಶ್ರಮ ಶಾಲೆ (8277277650) ಈ ಸಂಸ್ಥೆಗಳಲ್ಲಿ ದಾಖಲು ಮಾಡಿಸುವಂತೆ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ ಕೋರಲಾಗಿದೆ ಎಂದು ಸೋಮವಾರಪೇಟೆ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಕೋರಿದ್ದಾರೆ.

## ಕೆ.ಸಾಲುಂಡಿ ಗ್ರಾಮದಲ್ಲಿ ಕಾಲರಾ ಲಕ್ಷಣಗಳು: ಡಾ.ಮಹದೇವಪ್ಪ ಭೇಟಿ

• ಉದಯವಾಹಿನಿ ಮೈಸೂರು

ಮೈಸೂರು ತಾಲ್ಲೂಕಿನ ಕೆ.ಸಾಲುಂಡಿ ಗ್ರಾಮದಲ್ಲಿ ಕಲುಷಿತ ನೀರು ಸೇವಿಸಿ ಓರ್ವ ವ್ಯಕ್ತಿ ಸಾವನ್ನಪ್ಪಿ, 90 ಕ್ಕೂ ಹೆಚ್ಚು ಮಂದಿ ಅಸ್ವಸ್ಥಗೊಂಡಿರುವ ಹಿನ್ನೆಲೆ ಯಲ್ಲಿ ಗ್ರಾಮಕ್ಕೆ ಬುಧವಾರ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಕೆ. ಸಾಲುಂಡಿ ಗ್ರಾಮದ ಸರಕಾರಿ ಶಾಲೆಯಲ್ಲಿ ತೆರೆದಿರುವ ತಾತ್ಕಾಲಿಕ ವೈದ್ಯಕೀಯ ಕ್ಯಾಂಪ್‌ಗೆ ಭೇಟಿ ನೀಡಿ ಪರಿಶೀಲಿಸಿದರು.ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ. ಕುಮಾರಸ್ವಾಮಿ ಅವರಿಂದ ಮಾಹಿತಿ ಪಡೆದುಕೊಂಡರು.



ಕಲುಷಿತ ನೀರು ಸೇವಿಸಿ ಸಾವನ್ನಪ್ಪಿದ ಯುವಕ ಕನಕರಾಜು ನಿವಾಸಕ್ಕೆ ಭೇಟಿ ನೀಡಿ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು. ಈ ವೇಳೆ ಶಾಸಕ ಕೆ. ಹರೀಶ್ ಗೌಡ, ಮೂಡಾದ ಅಧ್ಯಕ್ಷ ಕೆ ಮರೀಗೌಡ ಸೇರಿದಂತೆ ಸ್ಥಳೀಯ ಮುಖಂಡರು ಉಪಸ್ಥಿತರಿದ್ದರು.

ಸಚಿವ ಡಾ.ಮಹದೇವಪ್ಪ, ಗ್ರಾಮದ ಜನರಲ್ಲಿ ಕಾಲರಾ ಲಕ್ಷಣಗಳು ಕಾಣಿಸಿಕೊಂಡಿವೆ. ಕುಡಿಯುವ ನೀರು ಸರಬರಾಜು ಮಾಡುವ ಪೈಪ್‌ಗೆ ಚರಂಡಿ ನೀರು ಸೇರಿದ ಪರಿಣಾಮ ನೀರು ಕಲುಷಿತಗೊಂಡಿದೆ. ಇದರಿಂದ ಗ್ರಾಮಸ್ಥರಲ್ಲಿ ವಾಂತಿ ಭೇದಿ ಕಾಣಿಸಿಕೊಂಡು ಸುಮಾರು 95 ಮಂದಿ ಅಸ್ವಸ್ಥರಾಗಿದ್ದಾರೆ.ಈ ಪೈಕಿ ಓರ್ವ ಯುವಕ ಸಾವನ್ನಪ್ಪಿದ್ದಾನೆ. ಮೃತ ಯುವಕನ ಕುಟುಂಬಕ್ಕೆ ಸರ್ಕಾರದ ವತಿಯಿಂದ ಎರಡು ಲಕ್ಷ ರೂಪಾಯಿ ಪರಿಹಾರ ನೀಡಲಾಗುವುದು' ಎಂದರು.

ಈ ಪ್ರಕರಣವನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ.ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರದಿ ನೀಡುವಂತೆ ಕೇಳಿದ್ದಾರೆ. ವರದಿ ಬಂದನಂತರ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಶುದ್ಧ ಕುಡಿಯುವ ನೀರು ಪೂರೈಕೆಗಾಗಿ ಪರ್ಯಾಯ ಕ್ರಮಗಳನ್ನು ಕೈಗೊಳ್ಳಲಾಗಿದೆ -ಡಾ.ಮಹದೇವಪ್ಪ

## ಗ್ಯಾಸ್ ಸಿಲಿಂಡರ್ ಸ್ಟವ್ ಸ್ಫೋಟ ಇಬ್ಬರು ಗಾಯಾಳುಗಳು ಸಾವು

• ಉದಯವಾಹಿನಿ ಕುಣಿಗಲ್

ಗ್ಯಾಸ್ ಸಿಲಿಂಡರ್ ಸ್ಟವ್ ಸ್ಫೋಟದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಇಬ್ಬರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವ ಘಟನೆ ಬುಧವಾರ ಬೆಳಗ್ಗೆ ನಡೆದಿದೆ. ಸ್ಫೋಟದಲ್ಲಿ ಕುಣಿಗಲ್ ಪಟ್ಟಣ ಕೋಟೆ ಪ್ರದೇಶದ ಸಂತೆ ಮೈದಾನ ನಿವಾಸಿ ಶಿವಣ್ಣ( 45 ), ಕುಶಾಲ್ (11) ಮೃತ ದುರ್ದೈವಿಗಳು.ರವಿಕುಮಾರ್ ಖಾರಪುರಿ ವ್ಯಾಪಾರಿಯಾಗಿದ್ದು, ಪುರಿಯನ್ನು ಹುರಿಯಲು ಹಾಗೂ ಅಡುಗೆ ಮಾಡಲು ನಾಲ್ಕು ಕೆ.ಜಿ ಗ್ಯಾಸ್ ಸಿಲಿಂಡರ್ ಸ್ಟವ್ ಬಳಸುತ್ತಿದ್ದರು, ರವಿಕುಮಾರ್ ಹೆಂಡತಿ ಶೃತಿ ಆಕೆಯ ಮಗಳು ಹೇಮಲತಾಳನ್ನು ಟ್ಯೂಷನ್ ಗೆ ಬಿಡಲು ಶುಕ್ರವಾರ ಮೇ (17) ಮನೆಯಿಂದ ಹೊರ ಬರುತ್ತಿದಂತೆ ಮನೆಯಲ್ಲಿ ಸ್ಫೋಟದ ಶಬ್ದ ಕೇಳಿ ಬಂದಿತ್ತು. ಮನೆ ಒಳಗೆ ಹೋಗಿ ನೋಡಲಾಗಿ ಸಿಲಿಂಡರ್ ಸ್ಫೋಟಗೊಂಡು ಮನೆಯಲ್ಲಿ ಬೆಂಕಿ ಹತ್ತಿಕೊಂಡು ಉರಿಯುತ್ತಿತ್ತು. ಆ ವೇಳೆ ಮನೆಯಲ್ಲಿ ಇದ್ದ ಕುಶಾಲ್ ಹಾಗೂ ಶೃತಿ, ಹೇಮಲತಾಗೆ ಗಂಭೀರ ಸ್ವರೂಪದ ಗಾಯವಾಗಿತ್ತು. ಸಿಲಿಂಡರ್ ಸ್ಫೋಟದ ಶಬ್ದವನ್ನು ಕೇಳಿದ ಅಕ್ಕ ಪಕ್ಕದ ಮನಯವರಾದ ಶಿವಣ್ಣ, ಮಂಜಮ್ಮ, ಹಾಗೂ ಸಮೀನಾ ಅವರಿಗೂ ತೀವ್ರವಾಗಿ ಗಾಯಗೊಂಡಿದ್ದರು. ಈ ವೇಳೆ ಎರಡು ಮನೆಗೆ ಹಾನಿ ಉಂಟಾಗಿತ್ತು.ತೀವ್ರವಾಗಿ ಗಾಯಗೊಂಡ ಕುಶಾಲ್, ಶಿವಣ್ಣ, ಮಂಜಮ್ಮ, ಹೇಮಲತಾ, ಸಮೀನಾ ಅವರಿಗೆ ಪಟ್ಟಣದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗಿತ್ತು ಚಿಕಿತ್ಸೆ ಫಲಕಾರಿಯಾಗದೇ ಶಿವಣ್ಣ, ಕುಶಾಲ್ ಬುಧವಾರ ಮುಂಜಾನೆ ಮೃತಪಟ್ಟಿದ್ದಾರೆ.

ಅಂತರಾಳದಿಂದ..
EDITORIAL

# ಸಬಲರ ಎದುರು ದುರ್ಬಲ ಕಾನೂನು
## ಅಮಾಯಕರ ಜೀವಕ್ಕೆ ಬೆಲೆಯೇ ಇಲ್ಲ

ಎಲ್ಲಿಯವರೆಗೆ ದುರ್ಬಲರು ನ್ಯಾಯ ಪಡೆಯದೆ, ಸಬಲರು ನ್ಯಾಯಾಂಗದ ಎಲ್ಲ ಲಾಭವನ್ನೂ ಪಡೆಯುತ್ತಾರೋ ಅಲ್ಲಿಯವರೆಗೂ ನ್ಯಾಯಾಂಗಕ್ಕೂ ಪೊಲೀಸ್ ವ್ಯವಸ್ಥೆಗೂ ಅಂಟಿದ ಸಬಲ ಪಕ್ಷಪಾತಿ ಎಂಬ ಕಳಂಕ ತಪ್ಪುವುದಿಲ್ಲ. ಅಪರಾಧದ ಗಂಭೀರತೆ ಪರಿಗಣಿಸಿ ಶೀಘ್ರ, ಶಿಕ್ಷೆ, ತ್ವರಿತ ನ್ಯಾಯದಾನ ಸಾಧ್ಯವಾಗಬೇಕು.

ಪುಣೆಯಲ್ಲಿ ಒಬ್ಬಾತ ಅಪ್ರಾಪ್ತ ವಯಸ್ಕ ಸ್ಪೋರ್ಟ್ಸ್ ಕಾರನ್ನು ಅತಿ ವೇಗದಲ್ಲಿ ಯದ್ವಾತದ್ವಾ ಓಡಿಸಿ ಇಬ್ಬರ ಸಾವಿನ ಕಾರಣನಾಗಿದ್ದಾನೆ. ವಿಶೇಷ ಎಂದರೆ, ಇವನಿಗೆ ಬಂಧನವಾದ 15 ಗಂಟೆಯೊಳಗೇ ಜಾಮೀನು ದೊರೆತಿದೆ. 17 ವರ್ಷದ ಈತ ಶನಿವಾರ ಪುಣೆಯಲ್ಲಿ ಚಲಾಯಿಸುತ್ತಿದ್ದ ಪೋರ್ಷೆ ಕಾರು ಕೋರೆಗಾಂವ್ ಪಾರ್ಕ್ ಸಮೀಪ ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಓರ್ವ ಪುರುಷ ಮತ್ತು ಮಹಿಳೆ ಮೃತಪಟ್ಟಿದ್ದರು. ಇವರಿಬ್ಬರೂ ಐಟಿ ಎಂಜಿನಿಯರ್‌ಗಳಾಗಿದ್ದರು. ಈ ಹಿನ್ನೆಲೆಯಲ್ಲಿ ಆತನನ್ನು ಬಂಧಿಸಲಾಗಿತ್ತು. ಜಾಮೀನು ನಿರಾಕರಿಸುವಷ್ಟು ಅಪರಾಧವು ಗಂಭೀರವಾಗಿಲ್ಲ ಎಂದು ಅಭಿಪ್ರಾಯಪಟ್ಟ ನ್ಯಾಯಾಲಯ, ಆತನಿಗೆ ಜಾಮೀನು ನೀಡಿದ್ದಲ್ಲದೆ, ಕೆಲವು ಸರಳ ಶಿಕ್ಷೆಗಳನ್ನು ಆತನಿಗೆ ವಿಧಿಸಿದೆ. ಯೆರವಾಡದ ಸಂಚಾರ ಪೊಲೀಸರೊಂದಿಗೆ 15 ದಿನಗಳ ಕಾಲ ಕೆಲಸ ಮಾಡಬೇಕು, ಅಪಘಾತಗಳ ಬಗ್ಗೆ 300 ಪದಗಳ ಪ್ರಬಂಧ ಬರೆಯಬೇಕು, ಕುಡಿತದ ಅಭ್ಯಾಸಕ್ಕೆ ಚಿಕಿತ್ಸೆ ಪಡೆಯಬೇಕು ಮತ್ತು ಮನೋವೈದ್ಯಕೀಯ ಮೌಲ್ಯಮಾಪನ ಹಾಗೂ ಚಿಕಿತ್ಸೆಗೆ ಒಳಗಾಗಬೇಕು ಎಂಬುದು ಷರತ್ತು. ಈತ ಪುಣೆಯ ಪ್ರಮುಖ ರಿಯಲ್ ಎಸ್ಟೇಟ್ ಉದ್ಯಮಿಯ ಮಗ ಹಾಗೂ ಪ್ರಭಾವಿ. ಪಬ್‌ನಲ್ಲಿ ಪಾರ್ಟಿ ಮಾಡಿ ಪಾನಮತ್ತನಾಗಿ ಹಿಂದಿರುಗುತ್ತಿದ್ದ. ಸಮಾಧಾನದ ವಿಷಯ ಎಂದರೆ ಪುಣೆ ಪೊಲೀಸರು ಜಾಮೀನು ಆದೇಶದ ವಿರುದ್ಧ ಮೇಲಿನ ನ್ಯಾಯಾಲಯದ ಮೊರೆ ಹೋಗಲಿದ್ದಾರೆ. ಈ ಪ್ರಕರಣದ ಬಗ್ಗೆ ಜನಾಕ್ರೋಶ ಭುಗಿಲೆದ್ದ ಹಿನ್ನೆಲೆಯಲ್ಲಿ ಇದೀಗ ಪೊಲೀಸರು ಬಾಲಕನ ತಂದೆ ಮತ್ತು ಆತನಿಗೆ ಮದ್ಯ ಪೂರೈಸಿದ ಬಾರ್ ಮಾಲೀಕನನ್ನು ಬಂಧಿಸಿದ್ದಾರೆ. ಇವರು ಕೂಡ ಬೇಗನೆ ಜಾಮೀನಿನ ಮೇಲೆ ಬಿಡುಗಡೆಯಾದರೆ ಆಶ್ಚರ್ಯವಿಲ್ಲ.


ಉದಯವಾಹಿನಿ ಚಿತ್ರ

> ನಗರಗಳಲ್ಲಿ ಇತ್ತೀಚೆಗೆ ನಡೆಯುವ ಅಪರಾಧ ಸ್ವರೂಪಗಳನ್ನು ನೋಡುವುದಾದರೆ, ಕುಬೇರರು ಬಡವರ ಮೇಲೆ ಕೈ ಮಾಡುವುದು, ಹಲ್ಲೆ ನಡೆಸಿಯೂ ಪಾರಾಗುವುದು ಸರ್ವೇ ಸಾಮಾನ್ಯ ಎಂಬಂತಾಗಿದೆ. ಯಮಕನಮರಡಿಯಲ್ಲಿ ಇತ್ತೀಚೆಗೆ ನಡೆದ ಒಂದು ಅಪರಾಧ ನೋಡಿದರೆ, ಸಾಲ ಪಾವತಿ ಮಾಡಲಿಲ್ಲ ಎಂದು ರೈತನ ಪತ್ನಿ- ಮಗನನ್ನು ಒಬ್ಬಾಕೆ ಗೃಹಬಂಧನದಲ್ಲಿಟ್ಟಿದ್ದಾಳೆ. ಇದರಿಂದ ನೊಂದ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಸಾಲಿಗ ಮಹಿಳೆಯ ಮೇಲೆ ಪೊಲೀಸ್ ಕ್ರಮ ಕೈಗೊಂಡಂತಿಲ್ಲ. ಶ್ರೀಮಂತರು ಸಾಕಿದ ನಾಯಿಗಳು ಬೀದಿಯಲ್ಲಿ ಬಡವರ ಮಕ್ಕಳನ್ನು ಕಚ್ಚಿ ತಿನ್ನುತ್ತಿವೆ. ನಿರ್ಲಕ್ಷ್ಯದಿಂದ ಮಕ್ಕಳ ಜೀವಕ್ಕೆ ಎರವಾದವರಿಗೂ ಶಿಕ್ಷೆಯಾದ ಹಾಗಿಲ್ಲ.

ಇದು ನಮ್ಮ ಕಾನೂನು ಹಾಗೂ ನ್ಯಾಯಾಂಗ ವ್ಯವಸ್ಥೆಯ ಛಿದ್ರಗಳು ಎಲ್ಲಿವೆ ಎಂಬುದನ್ನು ಬೆಟ್ಟು ಮಾಡಿ ತೋರಿಸುವಂತಿದೆ. ಕರ್ನಾಟಕದಲ್ಲಿಯೂ ಹೀಗೇ ಆಗಿದೆ; ಲೈಂಗಿಕ ದೌರ್ಜನ್ಯ ಹಾಗೂ ಕಿಡ್‌ನ್ಯಾಪ್ ಪ್ರಕರಣದಲ್ಲಿ ಬಂಧಿತರಾದ ಮಾಜಿ ಸಚಿವರು ಆರು ದಿನಗಳಲ್ಲಿ ಜಾಮೀನು ಪಡೆಯುತ್ತಾರೆ. ವಿಶೇಷ ತನಿಖಾ ದಳದ ವಕೀಲರು ಎಷ್ಟು ಪ್ರಯತ್ನಿಸಿದರೂ ಜಾಮೀನು ತಪ್ಪಿಸಲು ಆಗುವುದಿಲ್ಲ. ಪ್ರಕರಣದ ಪ್ರಮುಖ ಆರೋಪಿ ವಿದೇಶದಲ್ಲಿ ತಲೆ ಮರೆಸಿಕೊಂಡಿದ್ದಾರೆ. ಆತನನ್ನು ಕರೆದು ತರುವಲ್ಲಿ ಇಲ್ಲಿನ ಕಾನೂನು ಹಾಗೂ ನ್ಯಾಯಾಂಗ ವ್ಯವಸ್ಥೆಗಳು ಸದ್ಯಕ್ಕೆ ಅಸಹಾಯಕವಾಗಿವೆ. ಇದು ಈ ಪ್ರಕರಣದ ಒಂದು ಮುಖ.

ಪ್ರಭಾವಿಗಳು ಏನು ಮಾಡಿದರೂ ಕಾನೂನಿನ ಕೈಗಳಿಂದ ತಪ್ಪಿಸಿಕೊಳ್ಳುತ್ತಾರೆ ಎಂಬ ಪರಿಸ್ಥಿತಿ ಸೃಷ್ಟಿಯಾಗಿರುವಂತಿದೆ. ಇನ್ನು ಟ್ರಾಫಿಕ್ ಅಪರಾಧಗಳ ಕತೆಯೂ ಇದೇ ಮಾದರಿಯಲ್ಲಿದೆ. ಹಿಟ್ ಆಂಡ್ ರನ್‌ಗಳು ಹೆಚ್ಚುತ್ತಿವೆ. ದೊಡ್ಡ ವಾಹನಗಳನ್ನು ಯದ್ವಾತದ್ವಾ ಓಡಿಸಿ, ದ್ವಿಚಕ್ರ ವಾಹನ ಸವಾರರ ಜೀವ ತೆಗೆಯುವವರ ಸಂಖ್ಯೆ ಹೆಚ್ಚಿದೆ. ರೋಡ್ ರೇಜ್ ಪ್ರಕರಣಗಳಲ್ಲಿ ಸಬಲರು ದುರ್ಬಲರ ಮೇಲೆ ವಿನಾಕಾರಣ ಹಲ್ಲೆ ಮಾಡುತ್ತಿದ್ದಾರೆ. ಇವರ್ಯಾರಿಗೂ ಶೀಘ್ರವಾಗಿ ಶಿಕ್ಷೆಯಾಗುತ್ತಿಲ್ಲ. ಸುಲಭವಾಗಿ ಜಾಮೀನೂ ದೊರೆಯುತ್ತಿದೆ. ದುರ್ಬಲ ಸೆಕ್ಷನ್‌ಗಳು, ದುರ್ಬಲ ಸಾಕ್ಷಿಗಳು, ವಿಲಂಬಿತ ನ್ಯಾಯಾಂಗ ಪ್ರಕ್ರಿಯೆ ಇವುಗಳಿಂದಾಗಿ ಸಂತ್ರಸ್ತರು ಮತ್ತಷ್ಟು ಸಂತ್ರಸ್ತರೇ ಆಗುತ್ತಿದ್ದಾರೆ. ನ್ಯಾಯದಾನ ವಿಳಂಬವಾದಷ್ಟೂ ಸಾಕ್ಷಿಗಳು, ಕಕ್ಷಿದಾರರು ಕೇಸ್‌ನಲ್ಲಿ ಆಸಕ್ತಿ ಕಳೆದುಕೊಳ್ಳುತ್ತಾರೆ. ಕೆಲವು ದಾಖಲೆ ಪತ್ರಗಳು ನಾಶವಾಗಬಹುದು, ಸಾಕ್ಷಿಗಳು ಇಲ್ಲವಾಗಬಹುದು. ಕಾಲದ ಹೊಡೆತಕ್ಕೆ ಸಿಲುಕಿ, ಪ್ರತಿ ತಿಂಗಳೂ ಕೋರ್ಟಿಗೆ ಅಲೆದು ಹೈರಾಣಾಗುವ ಪರಿಸ್ಥಿತಿಯಿಂದ ರೋಸಿಹೋಗಿ ರಾಜಿ ಮಾಡಿಕೊಂಡ ಎಷ್ಟೋ ಪ್ರಕರಣಗಳು ಇವೆ. ಇದು ನ್ಯಾಯ ಬೇಡವೆಂದಲ್ಲ, ಶಿಕ್ಷೆಗಿಂತಲೂ ನಿಷ್ಕರುಣೆಯಾಗಿರುವ ಕಟಕಟೆಯ ಸಹವಾಸ ಬೇಡವೆಂದು. ಎಲ್ಲಿಯವರೆಗೆ ದುರ್ಬಲರು ನ್ಯಾಯ ಪಡೆಯದೆ, ಸಬಲರು ನ್ಯಾಯಾಂಗದ ಎಲ್ಲ ಲಾಭವನ್ನೂ ಪಡೆಯುತ್ತಾರೋ ಅಲ್ಲಿಯವರೆಗೂ ನ್ಯಾಯಾಂಗಕ್ಕೂ ಪೊಲೀಸ್ ವ್ಯವಸ್ಥೆಗೂ ಅಂಟಿದ ಸಬಲ ಪಕ್ಷಪಾತಿ ಎಂಬ ಕಳಂಕ ತಪ್ಪುವುದಿಲ್ಲ. ಅಪರಾಧದ ಗಂಭೀರತೆ ಪರಿಗಣಿಸಿ ಶೀಘ್ರ, ಶಿಕ್ಷೆ, ತ್ವರಿತ ನ್ಯಾಯದಾನ ಸಾಧ್ಯವಾಗಬೇಕು.




• ಹಿಂದಿನ ಸಂಚಿಕೆಯಿಂದ

ಅಲ್ಲಿಂದ ಹೊರಟುಹೋದ ರಾಧೇಯನು ತನ್ನ ಜೀವಮಾನದಲ್ಲಿ ಎಂದೂ ಮಾಡಿರದ ಹೀನ ಕಾರ್ಯವನ್ನು ಮಾಡಿದನು-ಅಭಿಮನ್ಯುವಿನ ಹಿಂದುಗಡೆ ಹೋಗಿ ತನ್ನ ಬಾಣದಿಂದ ಅವನ ಬಿಲ್ಲನ್ನು ಕತ್ತರಿಸಿದನು. ಯುದ್ಧದಲ್ಲಿ ಅತ್ಯಂತ ತುಚ್ಛವಾದ ಇಂತಹ ಕೆಲಸ ಮಾಡಿದವರಾರೆಂದು ನೋಡಲು ಮಗುವು ಹಿಂದಕ್ಕೆ ತಿರುಗಿದ ಕೂಡಲೇ ದ್ರೋಣನು ಅಭಿಮನ್ಯುವಿನ ರಥದ ಕುದುರೆಗಳನ್ನು ಕೊಂದನು; ಕೃಪನು ಅವನ ಸಾರಥಿಯನ್ನು ಕೊಂದನು. ಕೃತವರ್ಮ, ಅಶ್ವತ್ಥಾಮ, ದುಶ್ಶಾಸನನ ಮಗ ಈ ಮೂವರೂ ಅಭಿಮನ್ಯುವನ್ನು ಬಾಣಗಳಿಂದ ಘಾತಿಸತೊಡಗಿದರು. ಆರು ಮಹಾರಥಿಕರು, ರಥರಹಿತನಾದ, ಬಿಲ್ಲೂ ಕೈಯಲ್ಲಿಲ್ಲದ ಮಗುವಿನ ಮೇಲೆ ನಿರ್ದಯರಾಗಿ ಪ್ರಹಾರ ಮಾಡಿದರು. ಕೋಪತಪ್ತನೂ ಅಪಮಾನಿತನೂ ಆದ ಅವನು ದ್ರೋಣನನ್ನು ಕುರಿತು, ''ನೀನು ವಯೋವೃದ್ಧನು, ಮಹಾಗುರುವು, ಮೇಲಾಗಿ ಸೇನಾಪತಿಯು. ನನಗೆ ಇಂಥ ಅನ್ಯಾಯ ಮಾಡಬಹುದೇ? ಎಂದನು. ರಾಧೇಯನ ಕಡೆ ತಿರುಗಿ, ''ನೀನು ಭಾರ್ಗವಶಿಷ್ಯನೆಂದು ಹೇಳಿಕೊಳ್ಳುತ್ತಿಯಲ್ಲವೆ? ಬಿಲ್ವಿದ್ಯೆಯಲ್ಲಿ ನನ್ನ ತಂದೆಯ ಸಮಾನ ಎಂದುಕೊಳ್ಳುವೆ. ನಿನಗಾದರೂ ಇಂಥ ಹೀನ ಬುದ್ಧಿ ಹೇಗೆ ಬಂದಿತು? ನನ್ನ ದೊಡ್ಡಪ್ಪ ನಿನ್ನನ್ನು ಋಜು ಬುದ್ಧಿಯವನೆಂದು ಹೊಗಳಿದರು; ಇದುವೇ ನಿನ್ನ ಋಜುಬುದ್ಧಿ? ನಿಮ್ಮನ್ನೆಲ್ಲ ಲೋಕವೀರರೆಂದು ಜನರು ಗೌರವಪ್ರೀತಿಗಳಿಂದ ಕರೆಯುತ್ತಾರೆ; ನಿಮ್ಮ ಶೌರ್ಯ ಇಷ್ಟೇಯೆ? ಹೇಗತಾನೆ ಈ ಭೂಮಿ ತಾಯಿಯು ನಿಮ್ಮನ್ನು ಬಾಯ್ದೆರೆದು ನುಂಗಿಬಿಡದೆ ನಾಚಿಕೆಗೆಟ್ಟ ನಿಮ್ಮನ್ನು ಸಹಿಸಿಕೊಂಡಿದ್ದಾಳೆಯೋ! ಎಂದು ಛೇಡಿಸಿದನು. ಯೋಚಿಸಲು ಅವಕಾಶವೇ ಇಲ್ಲದ ಅಭಿಮನ್ಯುವು, ಕತ್ತಿಯನ್ನು ಹಿರಿದು, ಗುರಾಣಿಯನ್ನು ತೆಗೆದುಕೊಂಡು, ರಥದಿಂದ ಕೆಳಕ್ಕೆ ಧುಮುಕಿದನು. ಕೊಲ್ಲುವ ಉದ್ದೇಶದಿಂದಲೇ ಅವರುಗಳ ಮೇಲೆ ಹಾರಿ ಬಂದನು. ದ್ರೋಣನು ಅವನ ಸಿಟ್ಟನು ನೋಡಿ ನೋಡಿ ಹೆದರಿ ತನ್ನ ಬಾಣದಿಂದ ಅವನ ಕತ್ತಿಯ ಹಿಡಿಯನ್ನು ಮುರಿದುಹಾಕಿದನು. ರಾಧೇಯನು ತನ್ನ ಬಾಣಗಳಿಂದ ಅವನ ಗುರಾಣಿಯನ್ನು ಚೂರುಚೂರು ಮಾಡಿದನು. ಈಗ ಅಭಿಮನ್ಯುವು ನಿರಾಯುಧನಾಗಿ ಆ ಆರು ಮಂದಿ ಮಹಾಕ್ರೂರ ಕೊಲೆಪಾತಕಿಗಳ ಮುಂದೆ ನಿಲ್ಲುವಂತಾಯಿತು.ಒಂದು ಕ್ಷಣ ಅಭಿಮನ್ಯುವಿಗೆ ಅಪ್ಪನ ನೆನಪಾಯಿತು. ತನ್ನ ಸಾಹಸವನ್ನು ಕೇಳಿ ತಿಳಿದ ಅಪ್ಪನ ಮುಖದಲ್ಲಿ ಮೂಡುವ ಹೆಮ್ಮೆಯನ್ನು ನೋಡುವ ಭಾಗ್ಯ ತನಗಿಲ್ಲವಲ್ಲ ಎಂದು ವ್ಯಥೆಯಾಯಿತು. ಸುದ್ದಿ ತಿಳಿದ ತಾಯಿ ಸುಭದ್ರೆಯು ಎದೆಯೊಡೆದುಕೊಳ್ಳುವಳೋ ಏನೋ! ಅಯ್ಯೋ ದೌರ್ಭಾಗ್ಯವೇ ಸಾಯುವ ಮುನ್ನ ಅಪ್ಪನನ್ನೂ ಮಾವ ಕೃಷ್ಣನನ್ನೂ ನೋಡಲಾಗುವುದಿಲ್ಲವಲ್ಲ! ಇನ್ನು ದೊಡ್ಡಪ್ಪಂದಿರು ಯುಧಿಷ್ಠಿರ, ಭೀಮ-ಪಾಪ, ಅವರು ತನ್ನ ಹಿಂದೆಯೇ ಬರಲೆತ್ನಿಸಿದರು, ಆದರೆ ಈ ಜಯದ್ರಥ ತಡೆದ. ಹೌದು, ವಿಷಯ ತಿಳಿದ ಅಪ್ಪ ಅವನನ್ನು ಕೊಲ್ಲುವುದು ಖಂಡಿತ. ಬೀಭತ್ಸವೆನಿಸುವ ತನ್ನ ಸಾವಿನ ಸೇಡನ್ನು ಪಾಂಡವರು ತೀರಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ,

ಮುಂದುವರಿಯುವುದು...

# "ಪಂಚ ಮುಕ್ತಕ ಮಾಲೆ" ಎಂಬ ಮುಕ್ತಕ ಸಂಕಲನದ ಕೃತಿಯ ಅವಲೋಕನ

ಸಾಮಾಜಿಕ ಕಳಕಳಿ
ಹೆಚ್.ಎಸ್. ಪ್ರತಿಮಾ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ



• ಉದಯವಾಹಿನಿ, ವಿಶೇಷ

ಕವಿಗಳದು ರಚಿಸುತಿರೆ ಮುಕ್ತಕವು ಚಂದವದು
ಗವಿಯೊಳಗೆ ಇರುವಂತೆ ಶಿಲೆಯಂತೆಯೆ
ಸವಿಯಾದ ಪದಗಳನು ಜೋಡಿಸುತ
ಬರೆಯುತಿರೆ
ನವಿರಾದ ಭಾವನೆಯು ಲಕ್ಷ್ಮಿ ದೇವಿ........

ಕಾವ್ಯ ಕಟ್ಟುವುದು ಒಂದು ಕಲೆ . ಆ ಕಲೆಯೊಳಗೆ ಮುಕ್ತಕ ಒಂದು ಪ್ರಕಾರ. ಆ ಮುಕ್ತಕಗಳನ್ನು ಕವಿಗಳು ರಚಿಸುತ್ತಿದ್ದರೆ ಬಹಳ ಚೆಂದವಾಗಿರುತ್ತದೆ. ಹಾಗೆಯೇ ಗವಿ ಒಳಗೆ ಇರುವ ಶಿಲೆಯು ಬಹಳ ಸುಂದರವಾಗಿರುವಂತೆ ಓದುಗರ ಮನಸ್ಸನ್ನು ಮುಕ್ತಕಗಳು ಆಕರ್ಷಿಸುತ್ತವೆ. ಸವಿಯಾದ ಪದಗಳನ್ನು ಜೋಡಿಸುತ್ತಾ ಬರೆಯುವ ಮುಕ್ತಕಗಳು ನವಿರಾದ ಭಾವನೆಯನ್ನು ಮುಕ್ತಕಗಳನ್ನು ಓದುವಾಗ ಓದುಗರ ಮನಸ್ಸಿಗೆ ನೀಡುತ್ತವೆ. ನಂತರ ಇವರ ಪರಿಚಯವನ್ನು ಶ್ರೀಮತಿ ಎನ್ ಶುಭ ಮಂಗಳ ಮುಕ್ತಕ ಕವಯತ್ರಿ, ಕೊಳ್ಳೇಗಾಲ ಇವರು ಸರಳವಾಗಿ ಎಲ್ಲರಿಗೂ ಅರ್ಥವಾಗುವಂತೆ ಅವರ ಪರಿಚಯ ತಿಳಿಸಿದ್ದಾರೆ. ಬೆನ್ನುಡಿಯನ್ನು ಸಂಗಪ್ಪ ಹಿರಣ್ಮಯಿ ಪ್ರತಿಷ್ಠಾನದ, ಅಧ್ಯಕ್ಷರು ಮೈಸೂರು. ಬಹಳ ಸೊಗಸಾಗಿ ಬೆನ್ನು ತಟ್ಟುವ ಕೆಲಸವನ್ನು ಮಾಡಿದ್ದಾರೆ. ನಂತರ ಕವಯತ್ರಿಯಾದ ಶ್ರೀಮತಿ ಕಮಲಾ ರಾಜೇಶ್ ರವರ ಪ್ರಸಂಗಗಳನ್ನು ವಿಭಿನ್ನವಾಗಿ ಕಾಣಬಹುದು. ಇಲ್ಲಿ ನಾವು ರಾಮಾಯಣ ಮಹಾಭಾರತ, ಚಂಡಿ ಉದ್ದಲಕರ ಕಥೆ ಉಪ ಕಥೆಗಳನ್ನು, ಸಮಸ್ಯೆಯನ್ನು ಸುಲಲಿತವಾಗಿ ಬಿಡಿಸಿರುವುದು ಶ್ಲಾಘನೀಯ. ಕವಯತ್ರಿಯು ಪ್ರತಿಯೊಬ್ಬರಿಗೂ ಅರ್ಥವಾಗುವಂತೆ ಪ್ರಸಂಗಗಳನ್ನು ರಚಿಸಿದ್ದಾರೆ. ಅದರಲ್ಲಿ ಕೆಲವು ಉದಾಹರಣೆಯಾಗಿ ಹೇಳುವುದಾದರೆ

ಭರತನ ಬ್ರಾತೃ ವಾತ್ಸಲ್ಯ
ನೆನೆಯುತ ನಿಂತರೆ ಭಾಗ್ಯವ ನೀಡುವ ತಮ್ಮನು
ಕರೆದರೆ ಬರದಿಹನೆ ವಿನಯವು ತುಂಬಿದ ಅಣ್ಣನ
ನೋಡುತ ಭರತನೋ ಮೋದಲಿ ನರ್ತಿಸಿದ
ಇದೇ ರೀತಿ ಮತ್ತೊಂದು ಪ್ರಸಂಗವನ್ನು ನಾವು
ಇಲ್ಲಿ ನೋಡಬಹುದು.
ಹಂಸ ನುಂಗಿತು ಕಂಠಿಹಾರ ಕೆಲವು ಸಾಲುಗಳು
ಹೀಗಿವೆ. ತಂದೆಗೆ ತಿಳಿಸಿದ ಕಳ್ಳ ಖದೀಮನ
ಬಂಧಿಸಿ ಎಂದಳು ಕೋಪದಲಿ ಅಂದಣದರಸನು
ಎಂಬುದನರಿಯದೆ ಬೇಡಿಯ ತೊಡಿಸಿದ ಕರಗಳಿಗೆ

ಇಲ್ಲೂ ಸಹ ಬಹಳ ಅರ್ಥಪೂರ್ಣವಾದಂತಹ ಪ್ರಸಂಗದ ವಿವರಣೆಯನ್ನು ನೀಡಿರುವುದನ್ನು ಕಾಣಬಹುದು. ಒಟ್ಟಾರೆ ಕವಿಯತ್ರಿ ಹಲವಾರು ಪ್ರಸಂಗಗಳನ್ನು ವಿವರವಾಗಿ ಓದುಗರ ಮನ ಮುಟ್ಟುವಂತೆ ಬರೆದು ಯಶಸ್ವಿಯಾಗಿದ್ದಾರೆ. ನಂತರ ನೋಡುವ ಮುಕ್ತಕ ಕವಿಯತ್ರಿ ಎಂದರೆ ಶ್ರೀಮತಿ ಮಾಲತಿ ಕೃಷ್ಣ ಪ್ರಸಾದ್ ರವರು ಇಲ್ಲಿ ನಾವು ಹಲವಾರು ಮುಕ್ತಕಗಳನ್ನು ಭಾವಾರ್ಥ ಸಹಿತವಾಗಿ ಓದಬಹುದು. ಪ್ರತಿಯೊಂದು ಮುಕ್ತಕವು ಅದರದೇ ಆದಂತಹ ವಿಶೇಷ ಗುಣಗಳನ್ನು ಒಳಗೊಂಡಿದೆ. ಇವರ ಮುಕ್ತಕದ ಅಂಕಿತನಾಮ ಕೃಷ್ಣ ಕಾಂತೆ. ಇವರು ರಚಿಸಿರುವ ಮುಕ್ತಗಳಲ್ಲಿ ವಿಭಿನ್ನತೆ ಜೊತೆಗೆ

ಮುಕ್ತಕಗಳು ಬಹಳಷ್ಟು ಸಾರವನ್ನು ಒಳಗೊಂಡಿದೆ. ಅದರಲ್ಲಿ ಉದಾಹರಣೆ ಸಹಿತವಾಗಿ ತಿಳಿಸುವುದಾದರೆ

ಸೂತ್ರವದು ದೇವನಾ ಕೈಯಲ್ಲಿ ಇರುತಿರಲು
ಪಾತ್ರವನು ನಟಿಸದೇ ಇರಲು ಬಹುದೇ
ಗಾತ್ರವನು ನೋಡನವ ಸಿರಿಯದುವ ರಾಶಿಯನು
ಮಾತ್ರವಿಡು ಭಕುತಿಯನು ಕೃಷ್ಣಕಾಂತೆ...... .

ಪ್ರತಿಯೊಬ್ಬರ ಜೀವನದ ಪಾತ್ರವು ಸೂತ್ರದಾರನ ಕೈಯಲ್ಲಿ ಇರುತ್ತದೆ. ಆ ಸೂತ್ರದಾರನೇ ದೇವನು. ಆ ದೇವನ ಅಣತಿಯಂತೆ ಎಲ್ಲಾ ನಡೆಯಬೇಕು. ದೇವನೆಂಬ ಸೂತ್ರಧಾರನು ನಡೆಸಿದಂತೆ ನಡೆಯಬೇಕು. ಆತ ಹೇಳಿದರೆ ನಾವು ಪಾತ್ರಧಾರಿ ಆಗಿ ನಟಿಸುತ್ತಿರುತ್ತೇವೆ. ಯಾವುದೇ ಗಾತ್ರವನ್ನು ಆತ ಗಮನಿಸುವುದಿಲ್ಲ. ಹಣೆಬರಹದ ಮುಂದೆ ವಿಧಿಯು ಸಹ ಏನು ಮಾಡಲು ಸಾಧ್ಯವಿಲ್ಲ. ಏಕೆಂದರೆ ವಿಧಿಯ ಬರಹದಂತೆಯೇ ಜೀವನವು ನಡೆಯುತ್ತಿರುತ್ತದೆ. ಅಂತಹ ಜೀವನದಲ್ಲಿ ನಾವು ದೇವರ ಮೇಲೆ ಭಕುತಿಯನಿಟ್ಟು ಸಾಗಬೇಕಿದೆ. ಕವಿಯತ್ರಿಯು ಸಹ ಅದನ್ನೇ ತಿಳಿಸುತ್ತಿದ್ದಾರೆ. ಜಗವೆಂಬ ರಂಗ ಮಂಚದಲ್ಲಿ ಆ ದೇವನೇ ಸೂತ್ರದಾರನು . ಆಡಿಸಿದಂತೆ ಪಾತ್ರಗಳನ್ನು ನಾವು ಆಡಲೇಬೇಕು. ಹುಂಡಿಗೆ ಎಷ್ಟು ಹಣ ಹಾಕಿದರೂ ಹರಕೆ ತೀರಿಸಿದರು ಉಪಯೋಗವಿಲ್ಲ. ನಿಮ್ಮ ನಿರ್ಮಲ ಭಕ್ತಿಯೊಂದೇ ಅವನಿಗೆ ಸಾಕು ಎಂಬುದನ್ನು ಸ್ಪಷ್ಟವಾಗಿ ತಮ್ಮ ಭಾವನೆಗಳನ್ನು ಮುಕ್ತಕದ ರೂಪದಲ್ಲಿ ವ್ಯಕ್ತಪಡಿಸಿದ್ದಾರೆ. ಹೀಗೆ ಮುಂದುವರೆಯುತ್ತಾ ಇನ್ನೊಂದು ಮುಕ್ತಕದ ಉದಾಹರಣೆಯನ್ನು ನೀಡಬಹುದು

ಗೆಲುವಿನ ವಿಶ್ವಾಸ ಮನದಲ್ಲಿ ಇರಲೆಂದು
ಸೋಲಿನಾ ಭಯವನ್ನು ಅಟ್ಟಿಸಿಕೊಂಡು ಹೊರಗೆ
ಬಲದಿಂದ ಗೆಲುವದುವು ಸಾಧ್ಯವಾಗದು ಎಂದು
ಒಲವಿನಲ್ಲಿ ಗೆಲುವಿಹುದು ಕೃಷ್ಣ ಕಾಂತೆ......

ಇಲ್ಲೂ ಸಹ ಕವಿಯತ್ರಿ ಬಹಳಷ್ಟು ಅರ್ಥಪೂರ್ಣವಾದಂತಹ ವಿಚಾರವನ್ನು ತಿಳಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಏನೇ ಆದರೂ ನಮ್ಮ ಕಾರ್ಯದಲ್ಲಿ ಗೆಲ್ಲುತ್ತೇವೆ ಎಂಬ ವಿಶ್ವಾಸ ಮನದಲ್ಲಿ ಮೂಡಬೇಕು. ಸೋತು ಸೊರಗಿದೆ ಎಂದು ಸಂಶಯ ಭಯವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬಾರದು. ಶಕ್ತಿಯಿಂದ ಸಾಧ್ಯವಾಗದ ಗೆಲುವು ಪ್ರೀತಿಯಿಂದ ಸಾಧ್ಯವಾಗುವುದು. ಆದ್ದರಿಂದ ಅನ್ಯರೊಡನೆ ಪ್ರೀತಿಯಿಂದ ವಿಶ್ವಾಸದಿಂದ ನಡೆದುಕೊಂಡರೆ ನಮ್ಮ ಕಾರ್ಯ ಸಫಲವಾಗುವುದು ಎಂಬುದನ್ನು ಸ್ಪಷ್ಟವಾಗಿ ಮುಕ್ತಕದಲ್ಲಿ ಬಹಳ ಭಾವನಾತ್ಮಕವಾಗಿ ಓದುಗರಿಗೆ ತಿಳಿಸಿದ್ದಾರೆ. ಇವರ ಈ ಸಂಪಾದನ ಮುಕ್ತಕ ಕೃತಿಯಲ್ಲಿ ನೂರಾರು ಮುಕ್ತಕಗಳು ಸೇರಿದ್ದು. ಬಹಳಷ್ಟು ಒಳ್ಳೆಯ ಮಾಹಿತಿಯನ್ನು ನೀಡುವ ಮುಕ್ತಕಗಳು ಭಾವಾರ್ಥ ಸಹಿತವಾಗಿ ಇದೆ. ಓದುಗರಿಗೆ ಸುಲಭ ವಾಗಿ ಅರ್ಥವಾಗುತ್ತದೆ ನಾವು ನಂತರದಲ್ಲಿ ನೋಡುವಂತಹ ಪ್ರಬುದ್ಧ ಹಿರಿಯ ಸಾಹಿತಿ ಎಂದರೆ ಲಲಿತ ಎಸ್. ರವರು ಹಲವಾರು ಪ್ರಕಾರಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡು ಬಹಳಷ್ಟು ಕೃತಿಗಳನ್ನು ಲೋಕಾರ್ಪಣೆಗೊಳಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಮುಂದುವರೆಯುತ್ತದೆ....

> ಅಂತೆ ಇಲ್ಲಿ ನಾವು ನೋಡುವುದಾದರೆ ಪಂಚಮುಕ್ತಕಮಾಲೆ ಎಂಬ ಸಂಪಾದನ ಕೃತಿಯಲ್ಲಿ ನೂರಾರು ಮುಕ್ತಕಗಳನ್ನು ಕಾಣಬಹುದು. ಐದು ಪ್ರಸಿದ್ಧ ಮುಕ್ತಕ ಕವಿಗಳಿಂದ ಕೂಡಿದ ಈ ಸಂಪಾದನಾ ಕೃತಿಯನ್ನು ಓದುಗರ ಮಡಿಲಿಗೆ ಹಾಕಿದ್ದಾರೆ ಐದು ಪ್ರಸಿದ್ಧ ಮುಕ್ತಕ ಕವಿಗಳಲ್ಲಿ ಮುಕ್ತಕಗಳನ್ನು ಕಲಿಸಿಕೊಟ್ಟ ಗುರುಗಳಾದ ಶ್ರೀ ಮುತ್ತುಸ್ವಾಮಿ ರವರ ಮುಕ್ತಕಗಳನ್ನು ಒಳಗೊಂಡಂತೆ ಈ ಕೃತಿಯು ರಚನೆಗೊಂಡಿದೆ. ಈ ಕೃತಿಯು 2022 ರಲ್ಲಿ ಆವೃತ್ತಿಗೊಂಡಿದ್ದು. ಒಟ್ಟು ಪುಟಗಳು 296 ಇದೆ. ಇದರ ಬೆಲೆಯೂ 450 ಆಗಿದೆ. ಮುನ್ನುಡಿಯನ್ನು ಶ್ರೀ ವೇಣುಗೋಪಾಲ್ ಹಾಸನ ಇವರು ಬರೆದಿದ್ದಾರೆ. ಮನದಾಳದ ಮಾತಿನಲ್ಲಿ ಶ್ರೀಮತಿ ಕಮಲಾ ರಾಜೇಶ್ ರವರು ತಮ್ಮ ಅಂತರಾಳದ ಅನುಭವವನ್ನು ಹೇಳಿದ್ದಾರೆ.



ಉದಯವಾಹಿನಿ ಚಿತ್ರ

## ಕಾಸಾರ

• ಉದಯವಾಹಿನಿ, ವಿಶೇಷ



ಹಿಮದ
ತಪ್ಪಲಲಿ
ಜುಳು ಜುಳು
ಜೋಗುಳ ಹಾಡುತ
ಕಣಿವೆಗಳ
ಸಂದಿಯಲಿ
ಸ್ಪಟಿಕದ
ಬೆಳಕು ಚಲ್ಲುತ
ಸೂರ್ಯನ ಕಿರಣಗಳ
ಪ್ರತಿಫಲಿಸಿ
ಅರಿವಿಲ್ಲದೆ
ಸಾಗಿ
ದಾರಿಯುದ್ದಕ್ಕೂ
ಜಲಚರಗಳಿಗೆ
ಜೀವವಾಗಿ
ಜೀವಾದಿಗಳಿಗೆ
ಉಸಿರಾಗಿ
ತಳುಕಿ ಬಳುಕಿ
ಸಾಗಿ, ಶಾಂತಳಾಗಿ
ವಿಶ್ರಮಿಸುವ
ತಿಳಿ ಕೊಳದ
ಸರೋವರ ನಾನು
ಕಾಸಾರ
ಗುರಾನೀ
(ಕಾಸಾರ ಹಿಮ ಕರಗಿ
ನೀರಾಗಿ ಹರಿದು ಒಂದೆಡೆ
ಸೇರಿ ಸರೋವರದ ರೂಪ
ತಾಳುವುದು - ಅದೇ
ಕಾಸಾರ)
[22/05, 10:53 am] Gujjar:
ವಾಕಾಗ್ನಿ
ಹೊತ್ತುವ ಮುನ್ನ
ಹೊಗೆಯಾಗಿ
ಗಾಸಿಪ್ ಆಗಿ
ಕರ್ಣ ಪಟಲಕೆ
ಹಿತಕೊಟ್ಟು
ಮನೆ ಮನೆಯಿಂದ
ಹರಡಿ,ಪಸರಿಸಿ
ದೇಶ ವಿದೇಶ
ಸಂಚರಿಸಿ
ವೈಮನಸಿನಿಂದ
ಯುದ್ಧ ಸಾರಿ
ಮನುಕುಲದ ನಾಶಕ್ಕೆ
ನಾಂದಿಯಾಗುವ
ವಾಕ್ ಅಗ್ನಿ
ವಾಕಾಗ್ನಿ
ಗುರಾನಿ
(ವಾಕಾಗ್ನಿ -
ಮಾತು .ಅಗ್ನಿ ಗೆ
ಸಮ ಮಾತಿನಿಂದಲೇ
ದೇಶ ವಿದೇಶ ಗಳ
ಸಂಬಂಧಗಳು
ಹಾಳಾಗಿ ಯುದ್ಧಗಳಿಗೆ
ನಾಂದಿ ಯಾಗುತ್ತವೆ)

# ಎಂ.ಎಸ್.ಸುಬ್ಬಲಕ್ಷ್ಮಿ ಪಾತ್ರಕ್ಕೆ ಬಣ್ಣ ಹಚ್ಚುತ್ತಾರಾ ಈ ಸೌತ್ ಬೆಡಗಿಯರು?

• ಉದಯವಾಹಿನಿ, ಬೆಂಗಳೂರು

ಒಬ್ಬ ಶ್ರೇಷ್ಠ ವ್ಯಕ್ತಿಯ ಜೀವನಗಾಥೆಯ ಕುರಿತು ಕೃತಿ ಅಥವಾ ಸಿನಿಮಾಗಳು ಬರುವುದು ಹೊಸದೇನಲ್ಲ. ಚಿತ್ರರಂಗದಲ್ಲಿ ಕೆಲ ಬಯೋಪಿಕ್ ಸೂಪರ್ ಹಿಟ್ ಆಗಿದೆ. ಶ್ರೇಷ್ಠ ವ್ಯಕ್ತಿಯ ಜೀವನದ ಸವಾಲು, ಸಾಧನೆ ಹಾಗೂ ಸಂಕಷ್ಟವನ್ನು ದೊಡ್ಡ ಪರದೆಯಲ್ಲಿ ದೃಶ್ಯ ರೂಪದಲ್ಲಿ ತರುವ ಪ್ರಯತ್ನ ಚಿತ್ರರಂಗ ಆಗುತ್ತಿರುತ್ತದೆ.

ಇತ್ತೀಚೆಗಷ್ಟೇ ಸಂಗೀತ ದಿಗ್ಗಜ ಇಳಯರಾಜ ಬಯೋಪಿಕ್ ಅನೌನ್ಸ್ ಆಗಿದೆ. ಇದರಲ್ಲಿ ನಟ ಧನುಷ್ ಕಾಣಿಸಿಕೊಳ್ಳಲಿದ್ದಾರೆ. ಇದಲ್ಲದೆ ಪ್ರಧಾನಿ ಮೋದಿ ಅವರ ಬಯೋಪಿಕ್ ಸೆಟ್ಟೇರಲಿದೆ ಎನ್ನುವ ಸುದ್ದಿಯೊಂದು ದಕ್ಷಿಣ ಸಿನಿರಂಗದಲ್ಲಿ ಹರಿದಾಡಿದೆ. ನರೇಂದ್ರ ಮೋದಿಯವರ ಜೀವನಾಧಾರಿತ ಚಿತ್ರದಲ್ಲಿ ಸತ್ಯರಾಜ್ ಕಾಣಿಸಿಕೊಳ್ಳಲಿದ್ದಾರೆ ಎನ್ನಲಾಗಿದೆ.ಇದೀಗ ಮತ್ತೊಂದು ಬಯೋಪಿಕ್ ಬಗ್ಗೆ ಸುದ್ದಿ ಹರಿದಾಡಿದೆ. ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ ಎಂ.ಎಸ್. ಸುಬ್ಬುಲಕ್ಷ್ಮಿ ಅವರ ಜೀವನಗಾಥೆಯ ಕಥೆ ಸಿನಿಮಾವಾಗಿ ಬರಲಿದೆ. ಬೆಂಗಳೂರು ಮೂಲದ ಪ್ರೊಡಕ್ಷನ್ ಹೌಸ್ ಪ್ರಸಿದ್ಧ ನಿರ್ದೇಶಕರ ತಂಡವು ಈಗಾಗಲೇ ಚಿತ್ರದ ಪ್ರಿ-ಪ್ರೊಡಕ್ಷನ್ ಕೆಲಸವನ್ನು ಪ್ರಾರಂಭಿಸಿದೆ ಎಂದು ಪಿಂಕ್ ವಿಲ್ಲಾ ವರದಿ ಮಾಡಿದೆ. ಈ ಹಿಂದೆಯೇ ಎಂ.ಎಸ್. ಸುಬ್ಬುಲಕ್ಷ್ಮಿ ಅವರ ಕುರಿತಾದ ಸಿನಿಮಾ ಬರಲಿದೆ ಎನ್ನುವ ಮಾತುಗಳು ಹರಿದಾಡಿತ್ತು. ಆದರೆ ಅದರ ಬಗ್ಗೆ ಮತ್ಯಾವ ಅಪ್ಡೇಟ್ಸ್ ಹೊರಬಿದ್ದಿರಲಿಲ್ಲ. ಇದೀಗ ಚಿತ್ರತಂಡ ಸುಬ್ಬುಲಕ್ಷ್ಮಿ ಅವರ ಪಾತ್ರವನ್ನು ಮಾಡುವ ಕಲಾವಿದರ ಹುಡುಕಾಟದಲ್ಲಿ ನಿರತರಾಗಿದೆ. ದಕ್ಷಿಣ ಭಾರತದಲ್ಲಿ ಸದ್ಯ ಯಶಸ್ಸಿನ ಹಾದಿಯಲ್ಲಿರುವ ನಟಿ ನಯನತಾರಾ, ತ್ರಿಶಾ ಕೃಷ್ಣನ್ ಮತ್ತು ರಶ್ಮಿಕಾ ಮಂದಣ್ಣ ಅವರ ಹೆಸರು ಮುಂಚೂಣಿಯಲ್ಲಿದೆ. ಇದಲ್ಲದೆ ಮಹಾನಟಿ ಪಾತ್ರವನ್ನು ಮಾಡಿರುವ ಕೀರ್ತಿ ಸುರೇಶ್ ಕೂಡ ಸುಬ್ಬುಲಕ್ಷ್ಮಿ ಅವರ ಪಾತ್ರವನ್ನು ಮಾಡುವ ಲಿಸ್ಟ್ ನಲ್ಲಿದ್ದಾರೆ ಎಂದು ವರದಿ ತಿಳಿಸಿದೆ. ಸ್ಕ್ರಿಪ್ಟ್ ಕೆಲಸ ಅಂತಿಮ ಹಂತದಲ್ಲಿದೆ. ಸುಬ್ಬುಲಕ್ಷ್ಮಿ ಪಾತ್ರವನ್ನು ಯಾರು ಮಾಡಲಿದ್ದಾರೆ ಎನ್ನುವುದನ್ನು ಚಿತ್ರತಂಡ ನಿರ್ಧರಿಸಲಿದೆ.


ಉದಯವಾಹಿನಿ ಚಿತ್ರ

> 1938 ರಲ್ಲಿ ಸೇವಾಸದನ್ ಮೂಲಕ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ್ದ ಸಾವಿತ್ರಿ ಮತ್ತು ಮೀರಾ ಸಿನಿಮಾದಲ್ಲಿ ನಟಿಸಿದ್ದರು.ಸುಪ್ರಭಾತಂ, ಕುರೈ ಒನ್ರುಮ್ ಇಲ್ಲೈ, ಭಜಗೋವಿಂದಂ, ವಿಷ್ಣು ಸಹಸ್ರನಾಮ, ಹನುಮಾನ್ ಚಾಲೀಸಾ, ಹಾಗೂ ಇತರೆ ಪ್ರಮುಖ ಭಕ್ತಿಗೀತೆಗಳನ್ನು ಹಾಡಿದ್ದರು. ಭಾರತರತ್ನ'ವನ್ನು ಶಾಸ್ತ್ರೀಯ ಸಂಗೀತಕ್ಕೆ ಮೊದಲಾಗಿ ಪಡೆದವರು ಸುಬ್ಬುಲಕ್ಷ್ಮಿ. 2004 ರಲ್ಲಿ ತನ್ನ 88ನೇ ವಯಸ್ಸಿನಲ್ಲಿ ಅವರು ನಿಧನರಾದರು.

# ಶ್ರೀ ಗುರು ಸಾರ್ವಭೌಮ ವಿದ್ಯಾಪೀಠದಲ್ಲಿ ವಿದ್ಯಾರ್ಥಿಗಳಿಗೆ ಶಾಸ್ತ್ರೀಯ ಪರೀಕ್ಷೆ

• ಉದಯವಾಹಿನಿ, ಬೆಂಗಳೂರು

ಮಂತ್ರಾಲಯ ಶ್ರೀಗಳ ಅಧ್ಯಕ್ಷತೆ ಯಲ್ಲಿ ಶ್ರೀ ಗುರು ಸಾರ್ವಭೌಮ ವಿದ್ಯಾಪೀಠದ ವಿದ್ಯಾರ್ಥಿಗಳಿಗೆಶಾಸ್ತ್ರೀಯ ಪರೀಕ್ಷೆ ಬೆಂಗಳೂರು ನಗರದ ಪವಮಾನಪುರ ಬಡಾ ವಣೆಯಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮ ಪೂಜ್ಯ ಶ್ರೀ108 ಶ್ರೀ ಸುಬುಧೇಂದ್ರ ತೀರ್ಥ ಶ್ರೀಪಾದಂಗಳವರ ಘನ ಅಧ್ಯಕ್ಷತೆಯಲ್ಲಿ ವೇದ ಘೋಷ ದೀಪ ಪ್ರಜ್ವಲನೆ ಮೂಲಕ ವಿದ್ವತ್ ಸಭಾ ಮತ್ತು ಶಾಸ್ತ್ರೀಯ ಪರೀಕ್ಷೆ ಕಾರ್ಯಕ್ರಮದ ಉದ್ಘಾಟನೆ ಶ್ರೀ ಗುರು ಸಾರ್ವಭೌಮ ವಿದ್ಯಾಪೀಠದ ವಿದ್ಯಾರ್ಥಿಗಳಿಂದ ಶ್ರೀಗಳವರ ಸಮ್ಮುಖದಲ್ಲಿ ಪರೀಕ್ಷಾ ಕಾರ್ಯಕ್ರಮ , ಈ ಸಂದರ್ಭದಲ್ಲಿ ಶ್ರೀಮಠದ ಪಂಡಿತ ಕೇಸರಿ ರಾಜಾ ಎಸ್ ಗಿರಿ ಆಚಾರ್ಯರ ಉಪಸ್ಥಿತಿ, -ಮಂತ್ರಾಲಯ ಮಠದ ವಿದ್ಯಾರ್ಥಿಗಳಿಂದ, ಶ್ರೇಷ್ಠ ಪಂಡಿತರಿಂದ ಇವತ್ತು ಮತ್ತು ನಾಳೆ ಪವಮಾನಪುರದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ನಡೆಯಲಿದೆ ಡಾಕ್ಟರ್ ಎನ್ ವಾದಿರಾಜ ಆಚಾರ್ಯ, ಸತ್ತಿಗೇರಿ ಧೀರೇಂದ್ರ ಆಚಾರ್ಯ, ತಿರುಮಲ ಕುಲಕರಣಿ ಆಚಾರ್ಯ ಬಂಡಿ ಶಾಮಾಚಾರ್ಯ, ಡಿ ಧನಂಜಯಾಚಾರ್ಯ, ವೇಣುಗೋಪಾಲಾಚಾರ್ಯ, ಪವನ್‌ಆಚಾರ್ಯ ಮತ್ತು ಹಲವಾರು ಪಂಡಿತರು ಉಪಸ್ಥಿತಿ ಮಠದ ವಿದ್ಯಾರ್ಥಿಗಳು ಸಹಿತ ವಿದ್ವಾನ್ ಬಂಡ್ಯಾಚಾರ್ಯ, ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಆರ್ ಕೆ ವಾದಿಂದ್ರ, ಆಚಾರ್ ಶ್ರೀಗಿರಿರಾಜ ಆಚಾರ್ ಹಾಗೂ ಕೃಷ್ಣಾಚಾರ್, ನಂದಕಿಶೋರ್ ಆಚಾರ್ ಇದ್ದರು,ನಾಳೆ ದಿನ ಶ್ರೀಪಾದರ ಪಟ್ಟಾಭಿಷೇಕೋತ್ಸವದ ಅಂಗವಾಗಿ ಸಂಜೆ 4-30ಕ್ಕೆ ಶ್ರೀಪಾದರ ಮೆರವಣಿಗೆ ಕಾರ್ಯಕ್ರಮ. ಡಾಕ್ಟರ್ ಎನ್ ವಾದಿರಾಜ ಆಚಾರ್ಯ, ಮತ್ತು ಹಲವಾರು ಪಂಡಿತರ ಉಪಸ್ಥಿತಿ.


ಉದಯವಾಹಿನಿ ಚಿತ್ರ

# ಬುದ್ಧ ಪೂರ್ಣಿಮೆ, ವಿಶ್ವ ಮಾನ್ಯತೆ ಗಳಿಸಿರುವ ಬೌದ್ಧಧರ್ಮ

ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು



• ಉದಯವಾಹಿನಿ, ವಿಶೇಷ

ಆರನೇ ಶತಮಾನದಲ್ಲಿ ನೇಪಾಳದ ಬಳಿ ಕಪಿಲವಸ್ತು ಈ ರಾಜ್ಯದ ದೊರೆ ಶುದ್ಧೋದನ, ರಾಣಿ ಮಾಯಾದೇವಿ ಈ ರಾಜ ದಂಪತಿಗಳ ಮಗನೇ ಸಿದ್ಧಾರ್ಥ. ಮಗನಿಗೆ ಸಾಕಷ್ಟು ವಿದ್ಯೆ-ಬುದ್ಧಿ, ರಾಜ ಗೌರವ,ಸಕಲ ಭೋಗ ಭಾಗ್ಯಗಳು ದೊರೆಯುವಂತೆ ವ್ಯವಸ್ಥೆ ಮಾಡಿದನು. ಯಶೋಧರೆ ಎಂಬ ರಾಜ ಕನ್ಯೆಯೊಂದಿಗೆ ವಿವಾಹವಾಗಿ ದಂಪತಿಗಳಿಗೆ ರಾಹುಲ್ ಎಂಬ ಗಂಡು ಮಗು ಜನಿಸಿದನು.

ಕಾಲಕ್ರಮೇಣ ಹೊರಗಿನ ಪ್ರಪಂಚ ನೋಡಲು ಅನುಮತಿ ಪಡೆದು ಹೊರಗಡೆ ಹೋಗಿ ನೋಡಿ ಪ್ರಪಂಚ ದುಃಖದಿಂದ ತುಂಬಿದೆ ಎಂದು ಅರಿತು ಎಲ್ಲಾ ಸಕಲ ಭೋಗ ವಿಲಾಸ ಜೀವನವನ್ನು ಮರೆತು ಅರಮನೆ ತ್ಯಜಿಸಿ ತಪಸ್ಸಿಗೆ ಹೊರಟನು. ಸಿದ್ಧಾರ್ಥ ಅರಮನೆ ಬಿಟ್ಟನಂತರ ಬುದ್ಧನಾಗಿದ್ದು, ಬುದ್ಧ ಎಂದರೆ ಜ್ಞಾನಿ ಎಂದರ್ಥ. ಕಠಿಣ ತಪಸ್ಸಿನಿಂದ ಪರಿಪೂರ್ಣ ಜ್ಞಾನವನ್ನು ಗಳಿಸಿಕೊಂಡು ವಿಶ್ವಮಾನವನಾಗಿ ಜಗತ್ತಿಗೆ ಬೆಳಕು ಮಾಡಿರುವ ಆರಾಧ್ಯ ದೈವ. ಬೌದ್ಧ ಧರ್ಮದ ಮಹತ್ವವನ್ನು ಅರಿಯದ ನಾವು ಬೌದ್ಧಧರ್ಮದ ತತ್ವಗಳನ್ನು ಹೊರದೇಶಕ್ಕೆ ಬಳುವಳಿಯಾಗಿ ಕೊಟ್ಟು ತಪ್ಪು ಮಾಡಿ ಆಯಾಯ ನಮ್ಮ ನಮ್ಮ ಧರ್ಮಗಳನ್ನು ಮೈಮೇಲೆ ಎಳೆದು ಕೊಂಡೆವು. ಇಂತಹ ಧರ್ಮದ ಮಹತ್ವವನ್ನು ಕಂಡು ಹಿಡಿದುಕೊಂಡ ಅನ್ಯ ರಾಷ್ಟ್ರಗಳು ಅದರ ತತ್ವ ಸಾರಗಳನ್ನು ಜೀವನದ ಬದುಕಿನಲ್ಲಿ ಅಳವಡಿಸಿಕೊಂಡು ಬಾಳುವ ರಾಷ್ಟ್ರಗಳನ್ನು ನಾವು ನೋಡಿ ಕಲಿಯಬೇಕಾಗಿದೆ.

ದುರಾದೃಷ್ಟ ಬುದ್ಧ ಹುಟ್ಟಿದ್ದು ಈ ಪುಣ್ಯ ಭೂಮಿಯಲ್ಲಿ ಆದರೆ ಬೆಳಕಾಗಿದ್ದು ವಿದೇಶದಲ್ಲಿ ಎಂತಹ ವಿಪರ್ಯಾಸ.


ಉದಯವಾಹಿನಿ ಚಿತ್ರ

ಬೌದ್ಧಧರ್ಮದ ತತ್ವಗಳನ್ನು ಅರ್ಥಮಾಡಿಕೊಂಡು ಕಳಿಂಗ ರಾಜ್ಯದ ಮೇಲೆ ಯುದ್ಧ ಮಾಡಿದ ಅಶೋಕ ಚಕ್ರವರ್ತಿ ತನ್ನ ಹಿಂಸಾರೂಪ ಬದುಕನ್ನ ತ್ಯಜಿಸಿ ವಿದೇಶಗಳಾದ ಬರ್ಮಾ, ಮಾಲ್ಡಿವ್ಸ್, ಮಲೇಷ್ಯಾ, ಇಂಡೋನೇಷಿಯಾ, ಶ್ರೀಲಂಕಾ, ಟಿಬೆಟ್, ಚೈನಾ, ಜಪಾನ್, ಥೈಲ್ಯಾಂಡ್, ಸಿಂಗಪುರ್, ಹಾಂಕಾಂಗ್, ಬ್ಯಾಂಕಾಕ್ ಇನ್ನು ಇತರೆ ದೇಶಗಳಲ್ಲಿ ಬೌದ್ಧ ಧರ್ಮದ ತತ್ವಗಳು ಹರಡುವಂತೆ ಪ್ರಚಾರ ಮಾಡಿದರು. ಇಂದು ಆ ದೇಶಗಳು ಬುದ್ಧನೇ ನಿಜವಾದ ಆರಾಧ್ಯ ದೈವನೆಂದು ಪೂಜಿಸುತ್ತಾರೆ.

ಮಾನವ ಜಗತ್ತಿನಲ್ಲಿ ದುಃಖವಿದೆ,ಆಸೆ ಇದೆ ಆದರೆ ಆಸೆಯೇ ದುಃಖಕ್ಕೆ ಕಾರಣ ಇದು ಬುದ್ಧನ ತತ್ವದಲ್ಲಿ ಪ್ರಮುಖ ತತ್ವವಾಗಿದೆ. 6ನೇ ಶತಮಾನದಿಂದ ಇಲ್ಲಿಯವರೆವಿಗೂ ಅಂದರೆ 14 ಶತಮಾನಗಳು ಕಳೆದು ಹೋದರೂ ಸಹ ಇನ್ನೂ ನಾವು ಬುದ್ಧನ ತತ್ವಗಳನ್ನು ಜೀವನದ ಬದುಕಿನಲ್ಲಿ ಶಾಶ್ವತವಾಗಿ ಅಳವಡಿಸಿಕೊಳ್ಳಲು ಮೀನಾಮೇಷ ಎಣಿಸುತ್ತಿದ್ದೇವೆ ಎಂತಹ ವಿಪರ್ಯಾಸ.

### ಈ ದುಃಖದಿಂದ ಪಾರಾಗಲು ಬುದ್ಧನ ಅಷ್ಟ ಮಾರ್ಗಗಳನ್ನು ಅನುಸರಿಸುವುದು ಸೂಕ್ತ

- ಒಳ್ಳೆಯ ಆಲೋಚನೆಗಳು
- ಒಳ್ಳೆಯ ಉದ್ದೇಶದಿಂದ ಕೆಲಸ ಮಾಡುವುದು
- ಸದಾ ಸತ್ಯವನ್ನು ನುಡಿಯುವುದು
- ಸತ್ಕಾರ್ಯವನ್ನು ಆಚರಿಸುವುದು
- ಶುದ್ಧ ಜೀವನವನ್ನು ನಡೆಸುವುದು
- ನಮ್ಮ ಎಲ್ಲಾ ಪ್ರಯತ್ನಗಳಲ್ಲಿ ಪ್ರಮಾಣಿಕ ರಾಗಿರುವುದು
- ಅನ್ಯರ ಬಗ್ಗೆ ಒಳ್ಳೆಯದನ್ನ ಆಲೋಚಿಸುವುದು
- ಒಳ್ಳೆಯ ವಿಷಯಗಳಲ್ಲಿ ಮನಸ್ಸನ್ನು ತೊಡಗಿಸಿಕೊಳ್ಳುವುದು
- ವೈಚಾರಿಕ ಪ್ರಜ್ಞೆಗಳನ್ನ ಜೀವನದಲ್ಲಿ ಅಳವಡಿಸಿಕೊಳ್ಳುವುದು ಇಂದು ಬೌದ್ಧ ಧರ್ಮ ವಿಶ್ವದ ಪ್ರಮುಖ ಧರ್ಮವಾಗಿ ಬುದ್ಧನ ತತ್ವಗಳು ವಿಶ್ವಮಾನ್ಯತೆ ಗಳಿಸಿವೆ.

ಭೋಗ ವಿಲಾಸ ಜೀವನವನ್ನು ತ್ಯಾಗ ಮಾಡಿದ ತ್ಯಾಗಮೂರ್ತಿ ತ್ಯಾಗಮಯಿ. ಮಾನವನಾಗಿ ಹುಟ್ಟಿ, ಮಾನವನಾಗಿ ಬೆಳೆದು, ಮಾನವೀಯತೆಯ ಆಗರವಾಗಿ,ವೈರಾಗ್ಯ ದೀಕ್ಷೆಪಡೆದು,ತಪಸ್ವಿಯಾಗಿ ಜಗತ್ತಿಗೆ ಬೆಳಕು ಮಾಡಿ ದೈವತ್ವ ಗುಣಗಳನ್ನು ಕಲಿತು ದೇವರಾದರು ಅವರೇ ಅಮರ ಅಜರಾಮರ. ಬುದ್ಧನ ಜನನ, ಜ್ಞಾನೋದಯ ಮತ್ತು ನಿರ್ವಾಣ ಈ ಮೂರು ಮಹತ್ವದ ಘಟನೆಗಳು ವೈಶಾಖ ಪೂರ್ಣಿಮೆಯ ದಿನವೇ ನಡೆದವು. ಆದ್ದರಿಂದ ಬೌದ್ಧಧರ್ಮದಲ್ಲಿ ವೈಶಾಖ ಪೂರ್ಣಿಮೆಯನ್ನು ಮಹತ್ವ ದಿನವೆಂದು ಆಚರಿಸಿ ಆ ದಿನವನ್ನು ಬುದ್ಧಪೂರ್ಣಿಮೆ ಎಂದು ಕರೆಯುವರು. ಇಡೀ ಜಗತ್ತಿನ ಕರಾಳ ಇತಿಹಾಸವನ್ನು ಶಾಂತಿ ಮತ್ತು ಕರುಣೆಯಿಂದ ಪ್ರಕಾಶಮಾನವಾಗಿ ಜಗತ್ತಿಗೆ ಬೆಳಕಾಗಿಸಿದವು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಮಧ್ಯಾಹ್ನ | 01:30 ರಿಂದ 03:00 |
| ಗುಳಿಕ ಕಾಲ | ಬೆಳಿಗ್ಗೆ | 09:00 ರಿಂದ 10:30 |
| ಯಮಗಂಡ ಕಾಲ | ಬೆಳಿಗ್ಗೆ | 06:00 ರಿಂದ 07:30 |

**ಮೇಷ** ನಿಮ್ಮ ಚಿಂತನೆ ಮತ್ತು ಶಕ್ತಿಯನ್ನು ನೀವು ವಾಸ್ತವವಾಗಿ ಏನನ್ನು ನೋಡ ಬಯಸುತ್ತೀರೋ ಅದನ್ನು ಸಾಧಿಸುವಲ್ಲಿ ನಿರ್ದೇಶಿಸಿ. ಇದುವರೆಗೆ ನಿಮ್ಮ ಸಮಸ್ಯೆಯೆಂದರೆ ನೀವು ಪ್ರಯತ್ನಿಸದೇ ಕೇವಲ ಆಸೆಪಡುತ್ತೀರಿ.

**ವೃಷಭ** ನಿಮ್ಮ ಕಚೇರಿಯನ್ನು ಬೇಗನೆ ಬಿಡಲು, ನೀವು ನಿಜವಾಗಿಯೂ ಆನಂದಿಸುವದನ್ನು ಮಾಡಲು ಪ್ರಯತ್ನಿಸಿ. ವ್ಯಾಪರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು.

**ಮಿಥುನ** ನೀವು ಕಳೆದುಹೋದದ್ದರ ಬಗ್ಗೆ ಯೋಚಿಸುತ್ತಿದ್ದರೆ ನಿಮ್ಮ ಹತಾಶೆ ನಿಮ್ಮ ಆರೋಗ್ಯವನ್ನು ನಾಶಮಾಡಬಹುದು. ಸಾಧ್ಯವಾದಷ್ಟೂ ವಿಶ್ರಾಂತಿ ತಗೆದುಕೊಳ್ಳಲು ಪ್ರಯತ್ನಿಸಿ.

**ಕರ್ಕಾಟಕ** ಮೋಜಿನ ಒಂದು ದಿನ. ಇಂದು ಹೂಡಿಕೆಗಳನ್ನು ಮಾಡಬಾರದು. ಹಳೆಯ ಸ್ನೇಹಿತರು ಬೆಂಬಲ ನೀಡುತ್ತಾರ, ಉಪಯುಕ್ತವಾಗಿರುತ್ತಾರೆ. ಇಂದು ನೀವು ಸುತ್ತಲೂ ನಿಮ್ಮ ಪ್ರಿಯತಮೆಯ ಪ್ರೀತಿಯನ್ನು ಅನುಭವಿಸುತ್ತೀರಿ.

**ಸಿಂಹ** ಒತ್ತಡದ ದಿನದ ಹೊರತಾಗಿಯೂ ಆರೋಗ್ಯ ಪರಿಪೂರ್ಣವಾಗಿರುತ್ತದೆ. ನಿಮ್ಮ ತಾಯಿ ಅಥವಾ ತಂದೆಯ ಆರೋಗ್ಯಕ್ಕಾಗಿ ನೀವು ಇಂದು ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗಬಹುದು.

**ಕನ್ಯಾ** ನಿಮ್ಮ ಹಠಮಾರಿ ವರ್ತನೆ ನಿಮ್ಮ ಹತ್ತಿರದ ಸ್ನೇಹಿತರು ಹಾಗೂ ಮನೆಯಲ್ಲಿರುವವರಿಗೂ ನೋವುಂಟುಮಾಡುತ್ತದೆ. ನಿಮ್ಮ ಪ್ರೇಮ ಜೀವನವಾಗಿ ಮದುವೆಯ ಪ್ರಸ್ತಾಪ ಜೀವನಪೂರ್ಣದ ಬಂಧದಲ್ಲಿ ಬದಲಾಗಬಹುದು.

**ತುಲಾ** ನಿಮ್ಮನ್ನು ಫಿಟ್ ಆಗಿ ಮತ್ತು ಚೆನ್ನಾಗಿರಿಸಿಕೊಳ್ಳಲು ಹೆಚ್ಚಿನ ಕ್ಯಾಲೊರಿಯ ಆಹಾರವನ್ನು ತಪ್ಪಿಸಿ ನಿಮ್ಮ ಖರ್ಚುಗಳನ್ನು ನಿಯಂತ್ರಿಸಲು ಮತ್ತು ಕೇವಲ ಅಗತ್ಯವಾದ ವಸ್ತುಗಳ ಮಾತ್ರ ಇಂದು ಖರೀದಿಸಲು ಪ್ರಯತ್ನಿಸಿ.

**ವೃಶ್ಚಿಕ** ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ಈ ರಾಶಿ ಚಕ್ರದ ದೊಡ್ಡ ಉದ್ಯಮಿಗಳು ಇಂದು ತುಂಬಾ ಯೋಚಿಸಿ ಅರ್ಥ ಮಾಡಿಕೊಂಡು ಹಣದ ಹೂಡಿಕೆ ಮಾಡುವ ಅಗತ್ಯವಿದೆ.

**ಧನಸ್ಸು** ನಿಮ್ಮ ಜೊತೆಗಿರುವ ಯಾರಾದರೂ ನಿಮ್ಮ ಇತ್ತೀಚಿನ ಕ್ರಮಗಳಿಂದ ಕಿರಿಕಿರಿಗಳ್ಳಬಹುದು. ಇಂದು ನೀವು ಎಂತಹ ಒಳ್ಳೆಯ ಕೆಲಸ ಮಾಡಿದ್ದೀರೆಂದು ತೋರಿಸಲು ನಿಮ್ಮ ಪ್ರೀತಿ ಅರಳುತ್ತದೆ.

**ಮಕರ** ಸ್ವಲ್ಪ ವ್ಯಾಯಾಮದೊಂದಿಗೆ ನಿಮ್ಮ ದಿನವನ್ನು ಪ್ರಾರಂಭಿಸಿ, ನಿಮ್ಮ ಬಗ್ಗೆ ನೀವೇ ಒಳ್ಳೆಯ ಅಭಿಪ್ರಾಯ ಇಟ್ಟುಕೊಳ್ಳುವುದು ಮುಖ್ಯ ಇದನ್ನು ದಿನವೂ ಮಾಡುವುದನ್ನು ರೂಢಿ ಮಾಡಿಕೊಳ್ಳಿ.

**ಕುಂಭ** ಸುತ್ತಲಿರುವವರು ನಿಮಗೆ ಬೆಂಬಲ ನೀಡುವುದರಿಂದ ನೀವು ಸಂತೋಷವಾಗಿರುವಿರಿ. ನೀವು ತ್ವರಿತ ಹಣ ಪಡೆಯುವ ಬಯಕೆ ಹೊಂದಿರುತ್ತೀರಿ. ನಿಮ್ಮ ಜೀವನ ಸಂಗಾತಿಯ ನಿರ್ಲಕ್ಷತೆ ಸಂಬಂಧವನ್ನು ಹಾಳು ಮಾಡಬಹುದು.

**ಮೀನ** ಧ್ಯಾನ ಪರಿಹಾರ ತರುತ್ತದೆ. ಗಡಿಬಿಡಯ ನಿರ್ಧಾರಗಳನ್ನು ಕೈಗೊಳ್ಳಬೇಡಿ. ವಿಶೇಷವಾಗಿ ಪ್ರಮುಖ ಹಣಕಾಸಿನ ವ್ಯವಹಾರಗಳ ಬಗ್ಗೆ ಮಾತನಾಡುವಾಗ. ನಿಮ್ಮ ಮಕ್ಕಳ ಚಿಂತೆಗಳನ್ನು ಬೆಂಬಲಿಸುವುದು ಅಗತ್ಯ.

# ಪರಿಷತ್ ಚುನಾವಣೆ: ಬಂಡಾಯ ನಾಯಕನಿಗೆ ಈಶ್ವರಪ್ಪ ಬೆಂಬಲ

### • ನೈಋತ್ಯ ಪದವೀಧರರ ಕ್ಷೇತ್ರದಲ್ಲಿ ಬಿಜೆಪಿ ಬಂಡಾಯ ಎದುರಿಸುತ್ತಿದ್ದು, ಚುನಾವಣೆ ಕುತೂಹಲಕ್ಕೆ ಕಾರಣವಾಗಿದೆ

• **ಉದಯವಾಹಿನಿ ಶಿವಮೊಗ್ಗ**

ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿಗೆ ಬಂಡಾಯದ ಬಿಸಿ ತಟ್ಟಿದೆ. ಜೂನ್ 3ರಂದು ಒಟ್ಟು 6 ಕ್ಷೇತ್ರಗಳಿಗೆ ಮತದಾನ ನಡೆಯಲಿದೆ. ನೈರುತ್ಯ ಪದವೀಧರರ ಕ್ಷೇತ್ರದಲ್ಲಿ ಬಿಜೆಪಿ ಬಂಡಾಯ ಎದುರಿಸುತ್ತಿದ್ದು, ಚುನಾವಣೆ ಕುತೂಹಲಕ್ಕೆ ಕಾರಣವಾಗಿದೆ. ನೈಋತ್ಯ ಪದವೀಧರ ಕ್ಷೇತ್ರದ ವ್ಯಾಪ್ತಿಗೆ ಶಿವಮೊಗ್ಗ, ದಾವಣಗೆರೆ (ಹೊನ್ನಾಳಿ, ಚನ್ನಗಿರಿ) ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳು ಸೇರುತ್ತವೆ.

ಕ್ಷೇತ್ರದಲ್ಲಿ 108 ಮತಗಟ್ಟೆಗಳಿದ್ದು, ಒಟ್ಟು 85,089 ಮತದಾರರು ಇದ್ದಾರೆ. ಇವರಲ್ಲಿ 43,720 ಪುರುಷ ಮತದಾರರು, 41,368 ಮಹಿಳಾ ಮತದಾರರು ಹಾಗೂ ಒಬ್ಬರು ಇತರೆ ಮತದಾರರು. ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿ ಆಯನೂರು ಮಂಜನಾಥ. ಬಿಜೆಪಿ ಅಭ್ಯರ್ಥಿ ಶಿವಮೊಗ್ಗದ ಖ್ಯಾತ ವೈದ್ಯರಾದ ಧನಂಜಯ ಸರ್ಜಿ. ಬಿಜೆಪಿ ನಾಯಕ, ಉಡುಪಿಯ ಮಾಜಿ ಶಾಸಕ ರಘುಪತಿ ಭಟ್ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದರು. ಆದರೆ ಟಿಕೆಟ್ ಸಿಕ್ಕಿಲ್ಲ ಎಂದು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ.

> **ಲೋಕಸಭೆ, ವಿಧಾನ ಪರಿಷತ್ ಚುನಾವಣೆ ಫಲಿತಾಂಶ ಬಂದ ಬಳಿಕ ನಮ್ಮ ಸ್ಪರ್ಧೆಯಿಂದ ಪಕ್ಷ ಎಷ್ಟರ ಮಟ್ಟಿಗೆ ಶುದ್ಧೀಕರಣ ಆಗುತ್ತದೆ ಎಂಬುದು ತಿಳಿಯುತ್ತದೆ. ಚುನಾವಣೆ ಮುಗಿಯುತ್ತಿದ್ದಂತೆ ರಘುಪತಿ ಭಟ್ ಅವರಿಗೆ ನೋಟಿಸ್ ಬರಬಹುದು –ಈಶ್ವರಪ್ಪ**

**ಈಶ್ವರಪ್ಪ ಬೆಂಬಲ:** ಲೋಕಸಭೆ ಚುನಾವಣೆಯಲ್ಲಿ ಪುತ್ರನಿಗೆ ಹಾವೇರಿ ಬಿಜೆಪಿ ಟಿಕೆಟ್ ಸಿಕ್ಕಿಲ್ಲ ಎಂದು ಶಿವಮೊಗ್ಗ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣೆಗೆ ಸ್ಪರ್ಧಿಸಿರುವ ಮಾಜಿ ಸಚಿವ ಕೆ. ಎಸ್. ಈಶ್ವರಪ್ಪ ನೈಋತ್ಯ ಪದವೀಧರ ಕ್ಷೇತ್ರದ ಬಂಡಾಯ ಅಭ್ಯರ್ಥಿ ರಘುಪತಿ ಭಟ್‌ಗೆ ಬೆಂಬಲ ಘೋಷಣೆ ಮಾಡಿದ್ದಾರೆ. ಬಿಜೆಪಿಯಿಂದ 6 ವರ್ಷಗಳ ಕಾಲ ಉಚ್ಚಾಟನೆಗೊಂಡಿರುವ ಈಶ್ವರಪ್ಪ 'ರಾಷ್ಟ್ರ ಭಕ್ತರ ಬಳಗ ಎಂದು ಸ್ಥಾಪಿಸಿಕೊಂಡು ಚುನಾವಣೆಗೆ ಸ್ಪರ್ಧಿಸಿದ್ದಾರೆ. ಈಗ ಈ ಬಳಗದ ವತಿಯಿಂದಲೇ ಪರಿಷತ್ ಚುನಾವಣೆಯಲ್ಲಿ ರಘುಪತಿ ಭಟ್‌ಗೆ ಬೆಂಬಲ ನೀಡಲಾಗಿದೆ. ಶಿವಮೊಗ್ಗದಲ್ಲಿ ಕೆ. ಎಸ್. ಈಶ್ವರಪ್ಪ ಮತ್ತು 'ರಾಷ್ಟ್ರಭಕ್ತರ ಬಳಗದ ಜೊತೆ ರಘುಪತಿ ಭಟ್ ಪತ್ರಿಕಾಗೋಷ್ಠಿ ನಡೆಸಿದರು. ವಿಧಾ ನಪರಿಷತ್ ಚುನಾವಣೆಯಲ್ಲಿ ನೈಋತ್ಯ ಪದವೀಧ ರರ ಕ್ಷೇತ್ರದಲ್ಲಿ ತಮ್ಮನ್ನು ಬೆಂಬಲಿಸಿ ಎಂದು ಮನವಿ ಮಾಡಿದರು. ಕೆ. ಎಸ್. ಈಶ್ವರಪ್ಪ ಮಾತನಾಡಿ, ಬಿಜೆಪಿ ಎಂದರೆ ಈಶ್ವರಪ್ಪ, ಈಶ್ವರಪ್ಪ ಎಂದರೆ ಬಿಜೆಪಿ ಎನ್ನುತ್ತಿದ್ದ ನನಗೆ ಪಕ್ಷೇತರನಾಗಿ ಸ್ಪರ್ಧಿ ಸುವ ಸಂದರ್ಭ ಎದುರಾಯಿತು.

ಅದೇ ರೀತಿ ನಾನು ಸತ್ತರೆ ನನ್ನ ಎದೆ ಮೇಲೆ ಬಿಜೆಪಿ ಬಾವುಟ ಇರಬೇಕು ಎಂದು ಹೇಳುವ ರಘುಪತಿ ಭಟ್ ಅವರಿಗೂ ಪಕ್ಷದಲ್ಲಿ ಮೋಸ ವಾಯಿತು ಎಂದರು.

ನೈರುತ್ಯ ಪದವೀಧರರ ಕ್ಷೇತ್ರದ ಚುನಾವಣೆಗೆ ಮೇ 16ರಂದು ರಘುಪತಿ ಭಟ್ ನಾಮಪತ್ರ ಸಲ್ಲಿಸಿದ್ದರು. ಪಕ್ಷೇತರ ಅಭ್ಯರ್ಥಿಯಾದ ಅವರು ನಾಮಪತ್ರ ವಾಪಸ್ ಪಡೆಯಲಿದ್ದಾರೆ ಎಂದು ನಿರೀಕ್ಷೆ ಮಾಡಲಾಗಿತ್ತು. ಆದರೆ ನಾಮಪತ್ರ ವಾಪಸ್ ಪಡೆಯದೇ ಅವರು ಕಣದಲ್ಲಿ ಉಳಿದಿದ್ದಾರೆ.



ಉದಯವಾಹಿನಿ ಚಿತ್ರ

#### ಜೂನ್ 6ಕ್ಕೆ ಫಲಿತಾಂಶ

**ನೈರುತ್ಯ ಪದವೀಧರರ ಕ್ಷೇತ್ರದಲ್ಲಿ ಒಬ್ಬ ಅಭ್ಯರ್ಥಿ ಮಾತ್ರ ನಾಮಪತ್ರ ಹಿಂಪಡೆದಿದ್ದು, ಒಟ್ಟು 10 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಚುನಾವಣೆಗೆ ಮತದಾನ ಜೂನ್ 3 ರಂದು ಬೆಳಗ್ಗೆ 8 ಗಂಟೆಯಿಂದ ಸಂಜೆ 4 ಗಂಟೆಯವರೆಗೆ ನಡೆಯಲಿದೆ. ಜೂನ್ 6ಕ್ಕೆ ಫಲಿತಾಂಶ ಘೋಷಣೆಯಾಗಲಿದೆ.**

#### ಕೊನೆಗಳಿಗೆಯಲ್ಲಿ ಮೋಸ

**ವಿಧಾನಸಸಭೆ ಚುನಾವಣೆ ಸಂದರ್ಭದಲ್ಲಿ ನನಗೆ ಟಿಕೆಟ್ ನಿರಾಕರಣೆ ಮಾಡಿದಾಗ ರಾಷ್ಟ್ರೀಯ ನಾಯಕರಿಂದ ಕರೆ ಬಂದಿತ್ತು. ಆದರೆ ಉಡುಪಿಯಲ್ಲಿ ರಘುಪತಿ ಭಟ್ ಅವರಿಗೆ ಕರೆ ಬರಲಿಲ್ಲ. ಟಿಕೆಟ್ ಘೋಷಣೆಗೆ ಎರಡು ದಿನ ಇರುವಾಗ ನಿಮಗೇ ಟಿಕೆಟ್ ಎಂದು ರಘುಪತಿ ಭಟ್ ಅವರಿಗೆ ಹೇಳಿದವರು ಕೊನೆ ಗಳಿಗೆಯಲ್ಲಿ ಮೋಸ ಮಾಡಿದರು ಎಂದು ಈಶ್ವರಪ್ಪ ಹೇಳಿದರು.**

**ಚುನಾವಣೆ ಕುತೂಹಲಕ್ಕೆ ಕಾರಣ**

## ಪಿಯು ವಿಜ್ಞಾನ ಕನ್ನಡದಲ್ಲಿ ಬೋಧನೆ: ಪ್ರಾಯೋಗಿಕವಾಗಿ ಪ್ರತ್ಯೇಕ ವಿಭಾಗ ಪ್ರಾರಂಭ

• **ಉದಯವಾಹಿನಿ ಚಿತ್ರದುರ್ಗ**

ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಪಿಯು ವಿಜ್ಞಾನ ಕನ್ನಡದಲ್ಲಿ ಬೋಧನೆ ಮಾಡುವ ನಿಟ್ಟಿನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ದಾಖಲಾಗುವ ಜಿಲ್ಲೆಯ ಕೆಲವು ಪಿಯು ಕಾಲೇಜುಗಳಲ್ಲಿ ಪ್ರಾಯೋಗಿಕವಾಗಿ ಪಿಯು ವಿಜ್ಞಾನ ಕನ್ನಡ ಬೋಧನೆಗೆ ಪ್ರತ್ಯೇಕವಾಗಿ ವಿಭಾಗ ಪ್ರಾರಂಭ ಮಾಡುವಂತೆ ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಪಿಯು ವಿಜ್ಞಾನ ಕನ್ನಡದಲ್ಲಿ ಬೋಧನೆ ಕುರಿತ ಸಭೆ ಹಾಗೂ ಪಿಯುಸಿ ಫಲಿತಾಂಶ ಸುಧಾರಣೆ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. 1 ರಿಂದ 10ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ತಕ್ಷಣ ಇಂಗ್ಲಿಷ್ ಮಾಧ್ಯಮ ಅಳವಡಿಸಿಕೊಳ್ಳುವುದು ಕಷ್ಟಸಾಧ್ಯವಾಗಲಿದೆ. ಹಾಗಾಗಿ ಜಿಲ್ಲೆಯ ಪಿಯು ಕಾಲೇಜುಗಳಲ್ಲಿ ಪ್ರಾಯೋಗಿಕವಾಗಿ ಪಿಯು ವಿಜ್ಞಾನ ಕನ್ನಡ ಬೋಧನೆಗೆ ಪ್ರತ್ಯೇಕವಾಗಿ ವಿಭಾಗ ಪ್ರಾರಂಭ ಮಾಡಿದರೆ ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದರು.





ಉದಯವಾಹಿನಿ ಚಿತ್ರ

ಪಿಯು ವಿಜ್ಞಾನ ಸಿಇಟಿ, ನೀಟ್ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯುವ ಅವಕಾಶ ಕಲ್ಪಿಸಲಾಗಿದೆ. ರಾಜ್ಯ ಸರ್ಕಾರವೇ ಪಿಯು ವಿಜ್ಞಾನ ಪಠ್ಯಪುಸ್ತಕಗಳನ್ನು ಕನ್ನಡದಲ್ಲಿ ಮುದ್ರಿಸಿ ಎಲ್ಲಾ ಪಿಯು ಕಾಲೇಜುಗಳಿಗೆ ಪೂರೈಕೆ ಮಾಡಲಾಗಿದೆ. ಪಿಯು ವಿಜ್ಞಾನ ಕನ್ನಡ ಮಾಧ್ಯಮಕ್ಕೆ ಪ್ರವೇಶಾತಿ, ಪೋಷಕರ ಪ್ರತಿಕ್ರಿಯೆ, ಉಪನ್ಯಾಸಕರ ಅಭಿಪ್ರಾಯ ಆಧಾರದ ಮೇಲೆ ಮುಂದಿನ ತೀರ್ಮಾನಕ್ಕೆಗೊಳ್ಳಲಾಗುವುದು ಎಂದು ತಿಳಿಸಿದರು.

**ಭಾಷಾ ವಿಷಯ ಪರಿಣಾಮಕಾರಿಯಾಗಿ ಕಲಿಸಿ:** ಭಾಷಾ ವಿಷಯಗಳನ್ನು ಬೋಧನೆ ಮಾಡುವ ಶಿಕ್ಷಕರು, ಉಪನ್ಯಾಸಕರು ವಿದ್ಯಾರ್ಥಿಗಳಿಗೆ ಭಾಷಾ ವಿಷಯಗಳ್ನು ಪರಿಣಾಮಕಾರಿಯಾಗಿ ಕಲಿಸಬೇಕು. ಭಾಷೆಯ ಮೇಲೆ ಹಿಡಿತ ಸಾಧಿಸಿದರೆ ವಿದ್ಯಾರ್ಥಿಗಳು ಸುಲಭವಾಗಿ ಐಚ್ಚಿಕ ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗಲಿದೆ. ಹಾಗಾಗಿ ಭಾಷಾ ವಿಷಯಗಳನ್ನು ಕಡ್ಡಾಯವಾಗಿ, ಪರಿಣಾಮಕಾರಿಯಾಗಿ ಕಲಿಸಬೇಕು ಎಂದು ತಾಕೀತು ಮಾಡಿದರು. ಪಿಯು ವಿಜ್ಞಾನ ಕನ್ನಡದಲ್ಲಿ ಬೋಧನೆ ಕುರಿತಂತೆ ಜಿಲ್ಲೆಯ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು ಸಾಧಕ-ಬಾಧಕಗಳ ಕುರಿತು ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅವರಿಗೆ ಮಾಹಿತಿ ನೀಡಿದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಪುಟ್ಟಸ್ವಾಮಿ, ಅನ್ನದ ಭಾಷೆಯಾಗಿ ಕನ್ನಡ ವೇದಿಕೆಯ ಚಿಕ್ಕಪ್ಪನಹಳ್ಳಿ ಷಣ್ಮುಖ ಸೇರಿದಂತೆ ಜಿಲ್ಲೆಯ ಪದವಿಪೂರ್ವ ಕಾಲೇಜುಗಳ ಪ್ರಾಂಶುಪಾಲರು ಇದ್ದರು.

> **ಭಾಷಾ ವಿಷಯಗಳನ್ನು ಸರಳವಾಗಿ, ಪರಿಣಾಮಕಾರಿಯಾಗಿ ಕಲಿಸಬೇಕು. ಪಿಯು ಫಲಿತಾಂಶದಲ್ಲಿ ಅಗ್ರಸ್ಥಾನ ಪಡೆಯುವುದಕ್ಕಿಂತ ಮುಖ್ಯವಾಗಿ ಗುಣಮಟ್ಟದ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಜಿಲ್ಲೆಯಲ್ಲಿ ಪಿಯು ಪಾಸಾದ ವಿದ್ಯಾರ್ಥಿಗಳು ವೈದ್ಯಕೀಯ ಶಿಕ್ಷಣ, ಕೆಎಎಸ್, ಐಎಎಸ್ ಸೇರಿದಂತೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸುವುದು ಮುಖ್ಯವಾಗಬೇಕು –ಜಿಲ್ಲಾಧಿಕಾರಿ**

## ಅಕ್ರಮವಾಗಿ ಪಡಿತರ ಅಕ್ಕಿ ಸಾಗಿಸುತ್ತಿದ್ದ ವಾಹನ ಅಧಿಕಾರಿಗಳ ವಶಕ್ಕೆ, ಪ್ರಕರಣ ದಾಖಲು

• **ಉದಯವಾಹಿನಿ ಸಿರುಗುಪ್ಪ**

ಖಚಿತ ಮಾಹಿತಿಯ ಮೇರೆಗೆ ತಾಲ್ಲೂಕಿನ ಕೆಂಚನಗುಡ್ಡ ಗ್ರಾಮದಿಂದ ಸಿರುಗುಪ್ಪ ನಗರ ಮಾರ್ಗವಾಗಿ ಇಬ್ರಾಂಪುರ ಗ್ರಾಮದ ಕಡೆಗೆ ಅಕ್ರಮವಾಗಿ ಪಡಿತರ ಅಕ್ಕಿಯನ್ನು ಸಾಗಿಸುತ್ತಿದ್ದ ವಾಹನವನ್ನು ಜಪ್ತಿ ಮಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಲಾಗಿದೆ ಎಂದು ಆಹಾರ ನಿರೀಕ್ಷಕ ಟಿ ಮಹೇಶ್ ತಿಳಿಸಿದ್ದಾರೆ.





ಉದಯವಾಹಿನಿ ಚಿತ್ರ

ಮಂಗಳವಾರ ಬೆಳಗಿನ ಜಾವ ಬಾತ್ಮಿದಾರರಿಂದ ಖಚಿತ ಮಾಹಿತಿ ಬಂದಿದ್ದು ಹಳೇ ಕೆಂಚನಗುಡ್ಡ ರಸ್ತೆಯಿಂದ ಸಿರುಗುಪ್ಪ ನಗರದ ಮುಖಾಂತರ ಇಬ್ರಾಂಪುರ ಗ್ರಾಮದ ಕಡೆಗೆ ಕೆ ಎ 34 ಸಿ 1964 ಆಶೋಕ ಲೈಲ್ಯಾಂಡ್ ಲಗೇಜ್ ಆಟೋದಲ್ಲಿ ಇಬ್ರಾಂಪುರ ಗ್ರಾಮವಾಸಿ 33ವರ್ಷದ ಮಲ್ಲಿಕಾರ್ಜುನ ಅಕ್ರಮವಾಗಿ ನಲವತ್ತು ಕ್ವಿಂಟಲ್ ತೂಕದ, ಒಂದು ಲಕ್ಷ ಹದಿನಾರು ಸಾವಿರ ಮೌಲ್ಯದ ಪಡಿತರ ಅಕ್ಕಿಯನ್ನು ಸಾಗಾಣಿಕೆ ಮಾಡುತ್ತಿದ್ದಾಗ ಖಚಿತ ಮಾಹಿತಿ ಮೇರೆಗೆ ಜಪ್ತಿ ಮಾಡಲಾಗಿದೆ.

ಸದರಿ ಅಕ್ಕಿಯು ಸರ್ಕಾರದ ವಿವಿಧ ಯೋಜನೆಗಳ ಅಡಿಯಲ್ಲಿ ಬಡ ಕುಟುಂಬಗಳಿಗೆ ಉಚಿತವಾಗಿ ವಿತರಣೆಯಾಗುವ ಪಡಿತರ ಅಕ್ಕಿಯಾಗಿದ್ದು ಇವುಗಳನ್ನು ಅಕ್ರಮ ಸಾಗಾಣಿಕೆ ಮಾಡುತ್ತಿದ್ದು ಸದರಿ ಕೃತ್ಯದ ವಿರುದ್ಧ ಕರ್ನಾಟಕ ಅಗತ್ಯ ವಸ್ತುಗಳ (ಸಾರ್ವಜನಿಕ ವಿತರಣಾ ಪದ್ಧತಿ) ನಿಯಂತ್ರಣ ಆದೇಶ ದಡಿಯಲ್ಲಿ ಕಾನೂನು ಕ್ರಮ ಕೈಗೊಳ್ಳುವಂತೆದೂರು ನೀಡಿದ್ದು ಠಾಣೆಯಲ್ಲಿ ಪ್ರಕರಣ ದಾಖಲುಗೊಂಡಿದೆ.

## ತೆರೆ ಬಂಡಿ ಸ್ಪರ್ಧೆಯಲ್ಲಿ ಬೈಕ್ ಗೆದ್ದ ರೂಡಗಿ ಬುಲ್ಸ್

• **ಉದಯವಾಹಿನಿ ಮುದ್ದೇಬಿಹಾಳ**

ಮುದ್ದೇಬಿಹಾಳ ತಾಲ್ಲೂಕಿನ ರೂಡಗಿ ಗ್ರಾಮದ ರೈತ ರಾಜಕೀಯ ಮುಖಂಡ ಗಣ್ಯ ವ್ಯಾಪಾರಿ ಶ್ರೀಶೈಲ್ ದೂಡಮನಿ ಅವರ ಜರ್ಸಿ ತಳಿಯ ಎತ್ತುಗಳು ತೆರೆಬಂಡಿ ಸ್ಪರ್ಧೆಯಲ್ಲಿ ಸತತವಾಗಿ ವಿಜಯಪಾತಾಕೆ ಹಾರಿಸುತ್ತಾ ಬಂದಿವೆ ಇದೀಗ ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕಿನ ಸೂನ್ನ ಗ್ರಾಮದ ಶ್ರೀ ಸಿದ್ದೇಶ್ವರ ಮಹಾಸ್ವಾಮಿಗಳ ಜಾತ್ರಾ ಮಹೋತ್ಸವದ ಅಂಗವಾಗಿ ಏರ್ಪಾಡಿಸಿಲಾಗಿದ್ದ ರಾಜ್ಯ ಮಟ್ಟದ ತರೆಬಂಡಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಹೆಚ್ ಎಫ್ ಡಿಲಕ್ಸ್ ಬೈಕ್ ಗೆದ್ದಿವೆ ಜಾತ್ರಾ ಕಮಿಟಿಯವರು ವಿಜೇತ ಬೈಕ್ ಶ್ರೀಶೈಲ್ ದೂಡಮನಿ ಅವರ ಸಹೋದರ ಶ್ರೀನಾಥ್ ದೂಡಮನಿ ಅವರಿಗೆ ಹಸ್ತಾಂತರ ಮಾಡಿದರು , ಮೂರು ನಿಮಿಷಗಳ ಅವಧಿಯಲ್ಲಿ ನಿಗದಿತ 1054 ಅಡಿ ದೂರ 2 ನಿಮಿಷಗಳಲ್ಲಿ ಕ್ರಮಿಸಿ ರೂಡಗಿ ಬುಲ್ಸ್ ಗೆಲುವು ಸಾಧಿಸಿವೆ. ಕಳೆದ ಆರು ವರ್ಷಗಳಿಂದ ರಾಜ್ಯ ಹೊರ ರಾಜ್ಯದಲ್ಲಿ ನಡೆಯುವ ತೆರೆಬಂಡಿ ಸ್ಪರ್ಧೆಯಲ್ಲಿ ಶ್ರೀಶೈಲ್ ದೂಡಮನಿ ಅವರ ಎತ್ತುಗಳು ಗೆಲುವಿನ ಕೇಕೆ ಹಾಕುತ್ತಾ ಚಿನ್ನ, ನಗದು , ಬೈಕ್ ಗಳನ್ನು ಗೆಲ್ಲುತ್ತಾ ಬಂದಿವೆ



ಉದಯವಾಹಿನಿ ಚಿತ್ರ

## 60ಕ್ಕೂ ಕುರಿಗಳ ಸಾವು, ಅಧಿಕಾರಿಗಳಿಂದ ಪರಿಹಾರದ ಭರವಸೆ

• **ಉದಯವಾಹಿನಿ ಸಿರುಗುಪ್ಪ**

ತಾಲ್ಲೂಕಿನ ಹೆರಕಲ್ ಗ್ರಾಮದ ರೈತರಿಗೆ ಸೇರಿದ 60ಕ್ಕೂ ಅಧಿಕ ಕುರಿಗಳು ಸಾವನ್ನಪ್ಪಿದ್ದು ಪಶು ಸಂಗೋಪನಾ ಇಲಾಖೆಯ ಉಪನಿರ್ದೇಶಕ ಡಾ.ವಿನೋದ್ ಅವರು ಸ್ಥಳಕ್ಕೆ ಬೇಟಿ ನೀಡಿ ಪರಿಶೀಲನೆ ನಡೆಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ ರೈತರಾದ ಜಿ.ರಾಜಶೇಖರ ಅವರಿಗೆ ಸೇರಿದ 200 ಕುರಿಗಳು ಮತ್ತು ಕಲ್ಮನೆ ಗಾದೆಪ್ಪ ತಂದೆ ಕಲ್ಮನೆ ಮಾರೆಪ್ಪ ಎಂಬುವವರಿಗೆ ಸೇರಿದ 100 ಕುರಿಗಳು ಒಟ್ಟು 300 ಕುರಿಗಳನ್ನು ಒಂದೇ ಕಡೆ ಮೇಯಿಸಲಾಗಿದೆಂದು ತಿಳಿದುಬಂದಿದೆ. 60ಕ್ಕೂ ಅಧಿಕ ಕುರಿಗಳು ಸತ್ತಿರುವ ಬಗ್ಗೆ ಮಾಹಿತಿಯಿದೆ. ನಮ್ಮ ಇಲಾಖೆ ಸಿಬ್ಬಂದಿಗಳಿಂದ ಇನ್ನುಳಿದ ಕುರಿಗಳ ಆರೋಗ್ಯ ತಪಾಸಣೆ ಮಾಡಲಾಗುತ್ತಿದೆ. ಈ ಬಗ್ಗೆ ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಸರ್ಕಾರದಿಂದ ಕುರಿಗಾಹಿಗಳಿಗೆ ಸೂಕ್ತ ಪರಿಹಾರವನ್ನು ದೊರೆಕಿಸುವ ಭರವಸೆ ನೀಡಿದರು.

ಪ್ರಯೋಗಾಲಯ ತಜ್ಞರಾದ ಡಾ.ರಾಜಶೇಖರ ಅವರು ಮಾತನಾಡಿ ಭತ್ತದ ಕಟಾವಿನಿಂದ ದೊರೆಯುವ ಹೊಟ್ಟಿನಂತಹ ತ್ಯಾಜವನ್ನು ಹೆಚ್ಚಾಗಿ ತಿಂದಿರುವ ಪರಿಣಾಮ ಜೀರ್ಣ ಕ್ರಿಯೆಯ ತೊಂದರೆಯೆಂದು ರೈತರು ತಿಳಿಸಿರುತ್ತಾರೆ. ಒಟ್ಟಿನಲ್ಲಿ ಕೀಟನಾಶಕದ ವಿಷಪೂರಿತ ಆಹಾರ ಸೇವನೆಯ ಲಕ್ಷಣ ಕಂಡು ಬರುತ್ತಿಲ್ಲ ದೈಹಿಕ ಪರೀಕ್ಷೆ ಮಾಡಲಾಗುವುದೆಂದರು.



ಉದಯವಾಹಿನಿ ಚಿತ್ರ

ಸಹಾಯಕ ನಿರ್ದೇಶಕ ವೈ.ಗಂಗಾಧರ ಅವರು ಮಾತನಾಡಿ ಘಟನೆ ಬಗ್ಗೆ ಮಾಹಿತಿ ಬಂದಾಗಿನಿಂದ ತಾಲೂಕಿನಲ್ಲಿರುವ ಎಲ್ಲಾ ಸಿಬ್ಬಂದಿಗಳ ನೆರವಿನಿಂದ ಸೂಕ್ತ ಚಿಕಿತ್ಸೆ ನಡೆಸಲಾಗುತ್ತಿದೆಂದರು.

ತೆಕ್ಕಲಕೋಟೆ ಪೊಲೀಸ್ ಠಾಣೆಯ ಪಿ.ಎಸ್.ಐ ತಾರಾ ಬಾಯಿ ಅವರು ಸ್ಥಳಕ್ಕೆ ಬೇಟಿ ನೀಡಿ ಮಾಹಿತಿ ಪಡೆದರು.

ಇದೇ ವೇಳೆ ಮುಖ್ಯ ಪಶು ವೈದ್ಯಾಧಿಕಾರಿ ಡಾ.ಖಾಜಾ ಹುಸೇನ್, ಹಿರಿಯ ವೈದ್ಯಕೀಯ ಪರಿವೀಕ್ಷಕರಾದ ಟಿ.ಹು ಚ್ಚೀರಪ್ಪ, ಸಿಬ್ಬಂದಿಗಳಾದ ಕೆ.ದೇವೆಂದ್ರಪ್ಪ, ವಿಜಯ್, ಶಿವಪ್ರಸಾದ್, ರಾಜ, ಸುಬಾನ್‌ಅಲ್ಲಾ, ಮಲ್ಲಯ್ಯ, ಶಿವರಾಜ, ಹಾಗೂ ಗ್ರಾಮಸ್ಥರಾದ ಯು.ನಾಗರಾಜ, ನರಸಿಂಹರಾಜ, ಇನ್ನಿತರರಿದ್ದರು.

## ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟ ಪ್ರಕರಣ : ಹುಬ್ಬಳ್ಳಿಯಲ್ಲಿ ಇಬ್ಬರು ಸಹೋದರರು ಸೇರಿ 11 ಜನರು ಎನ್‌ಐಎ ವಶಕ್ಕೆ

• **ಉದಯವಾಹಿನಿ ಹುಬ್ಬಳ್ಳಿ**

ರಾಮೇಶ್ವರಂ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಎನ್‌ಐಎ ಅಧಿಕಾರಿಗಳು ಹುಬ್ಬಳ್ಳಿಯಲ್ಲಿ ಇಬ್ಬರು ಸಹೋದರರು ಸೇರಿದಂತೆ 11 ಜನರನ್ನು ವಶಕ್ಕೆ ಪಡೆದು ವಿಚಾರಣ ನಡೆಸಿದೆ.

ಸಾಫ್ಟ್‌ವೇರ್ ಇಂಜಿನಿಯರ್ ಆಗಿದ್ದಂತ ಶೋಯೆಬ್ ಅಬ್ದುಲ್ ಮಿರ್ಜಾ ಎಂಬಾತನ ನಿವಾಸದ ಮೇಲೆ ಎನ್‌ಐಎ ಅಧಿಕಾರಿಗಳು ದಾಳಿ ನಡೆಸಿದ್ದಾರೆ.

ಬಳಿಕ ಎನ್‌ಐಎ ಅಧಿಕಾರಿಗಳು ಶೋಯೇಬ್ ಮಿರ್ಜಾ ಹಾಗೂ ಆತನ ಸಹೋದರ ಅಜೀದ್‌ನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದೆ.

ಹುಬ್ಬಳ್ಳಿಯ ಇಂದಿರಾನಗರದ ಎನ್‌ಐಎ ಕಚೇರಿಯಲ್ಲಿ ಇಬ್ಬರು ಸಹೋದರರನ್ನು ತೀವ್ರ ವಿಚಾರಣೆ ನಡೆಸಿರುವ ಎನ್‌ಐಎ ಅಧಿಕಾರಿಗಳು, ವಿದೇಶಿ ಹ್ಯಾಂಡ್ಲರ್‌ಗಳ ಜೊತೆಗೆ ಲಿಂಕ್ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ. ಅಬ್ದುಲ್ ಮತೀನ್ ಹಾಗೂ ಮುಸಾವೀರ್ ಹುಸೇನ್ ಗೆ ಹಣ ಸಂದಾಯ ಮಾಡಿದ್ದಾರೆ ಎನ್ನುವ ಆರೋಪದ ಮೇಲೆ ವಿಚಾರಣೆ ನಡೆಸಲಾಗುತ್ತಿದೆ. ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟದ ಬಳಿಕ ಮುಸಾವೀರ್ ಹುಬ್ಬಳ್ಳಿಗೆ ಭೇಟಿ ನೀಡಿರುವ ಶಂಕೆ ವ್ಯಕ್ತವಾಗಿದ್ದು, ಹಣ ಪಡೆದು ಬಾಂಬರ್ ಪಶ್ಚಿಮ ಬಂಗಾಳಕ್ಕೆ ತೆರಳಿರುವ ಸಾಧ್ಯತೆ ಇದೆ.





ಉದಯವಾಹಿನಿ ಚಿತ್ರ

**ತನಿಖೆ ಚುರುಕು** **ರಾಮೇಶ್ವರಂ ಕೆಫೆ ಬಾಂಬ್ ಬ್ಲಾಸ್ಟ್ ಪ್ರಕರಣಕ್ಕೆ ಸಂಬಂಧಿಸಿ ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ತನಿಖೆ ಚುರುಕುಗೊಳಿಸಿದ್ದು, ಮಂಗಳವಾರ ಕರ್ನಾಟಕ ಸೇರಿ 4 ರಾಜ್ಯಗಳ 11 ಸ್ಥಳಗಳಲ್ಲಿ ದಾಳಿ ನಡೆಸಿ, 11 ಶಂಕಿತ ಉಗ್ರರನ್ನು ವಶಕ್ಕೆ ಪಡೆದಿದೆ. ಕರ್ನಾಟಕ, ತಮಿಳುನಾಡು, ತೆಲಂಗಾಣ ಮತ್ತು ಆಂಧ್ರಪ್ರದೇಶದ 11 ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ. ಇಂದು ಪತ್ತೆಯಾದ 11 ಮಂದಿ ಶಂಕಿತರಲ್ಲಿ ಬೆಂಗಳೂರು ಮತ್ತು ಹುಬ್ಬಳ್ಳಿ ಜಿಲ್ಲೆಗಳಲ್ಲಿ 2012ರ ಲಷ್ಕರ್-ಎ-ತಯ್ಬಾ (ಎಲ್‌ಇಟಿ) ಪಿತೂರಿ ಪ್ರಕರಣದಲ್ಲಿ ಶಿಕ್ಷೆಗೊಳಗಾದ ವ್ಯಕ್ತಿಗಳೂ ಸೇರಿದ್ದಾರೆ ಎನ್ನಲಾಗಿದೆ.**

## 'ಡಿವೈಎಸ್ಪಿ' ಬ್ಯಾಂಕ್ ಖಾತೆ ಹ್ಯಾಕ್

• **ಉದಯವಾಹಿನಿ ಹಾಸನ**

ಹಾಸನ ಉಪವಿಭಾಗದ ಡಿವೈಎಸ್ಪಿ ಪಿ.ಕೆ.ಮುರಳೀಧರ್ ಅವರ ಬ್ಯಾಂಕ್ ಖಾತೆಗಳನ್ನು ಹ್ಯಾಕ್ ಮಾಡಿದ ದುಷ್ಕರ್ಮಿಗಳು 15.98 ಲಕ್ಷ ರೂ.ಗಳನ್ನು ವಿವಿಧ ಖಾತೆಗಳಿಗೆ ವರ್ಗಾಯಿಸಿದ್ದಾರೆ. ಅವರು ಕೆನರಾ ಬ್ಯಾಂಕ್ ಮಡಿಕೇರಿ ಶಾಖೆ (ಮುಖ್ಯರಸ್ತೆ) ಮತ್ತು ಭಾಗಮಂಡಲ ಶಾಖೆಯಲ್ಲಿ ಖಾತೆಗಳನ್ನು ಹೊಂದಿದ್ದಾರೆ. ಮೇ 20 ರಂದು ಅವರು ತಮ್ಮ ಫೋನ್ನಲ್ಲಿ ಸಂದೇಶಗಳನ್ನು ಪರಿಶೀಲಿಸುತ್ತಿದ್ದಾಗ ವಂಚನೆಯ ಬಗ್ಗೆ ತಿಳಿದುಕೊಂಡರು. ಮಡಿಕೇರಿ ಶಾಖೆಯ ಖಾತೆಯಲ್ಲಿ 25 ವಹಿವಾಟುಗಳ ಮೂಲಕ 12,10,711 ರೂ., ಭಾಗಮಂಡಲ ಶಾಖೆಯ ಖಾತೆ ಯಿಂದ 3.88 ಲಕ್ಷ ರೂ ವರ್ಗಾವಣೆ ಆಗಿದೆ. ಅವರು ಸಿಇಎನ್ ಪೊಲೀಸರಿಗೆ ದೂರು ನೀಡಿದ್ದಾರೆ.

## ಪೊಲೀಸರಿಗೆ ನಿಂದನೆ: ಶಾಸಕ ಹರೀಶ್ ಪೂಂಜ ಬಂಧನಕ್ಕೆ ಸಿದ್ಧತೆ

• **ಉದಯವಾಹಿನಿ ಬೆಳ್ತಂಗಡಿ**

ಕಳೆದ ಮೇ.18 ರಂದು ಅಕ್ರಮ ಕಲ್ಲು ಕೋರೆ ಗಣಿಗಾರಿಕೆಗೆ ಸಂಬಂಧಿಸಿದಂತೆ ಬಿಜೆಪಿ ಮುಖಂಡನನ್ನು ವಿನಾಕಾರಣ ಬಂಧಿಸಲಾಗಿರುವುದನ್ನು ಖಂಡಿಸಿ ಶಾಸಕ ಹರೀಶ್ ಪೂಂಜ ಕಾರ್ಯಕರ್ತರೊಂದಿಗೆ ಬೆಳ್ತಂಗಡಿ ಪೊಲೀಸ್ ಠಾಣೆಯಲ್ಲಿ ಮಧ್ಯರಾತ್ರಿ ಪ್ರತಿಭಟಿಸಿ ಪೊಲೀಸರಿಗೆ ನಿಂದಿಸಿದ್ದರು.

ಈ ವಿಚಾರವಾಗಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಮುಂದುವರಿದ ಭಾಗವಾಗಿ ಮೇ.20 ರಂದು ತಾಲ್ಲೂಕು ಆಡಳಿತದ ಮುಂದೆ ಪ್ರತಿಭಟನೆ ನಡೆಸಿ ಮತ್ತೆ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆಂದು ಎರಡನೇ ಪ್ರಕರಣ ದಾಖಲಿಸಲಾಗಿತ್ತು.

ಈ ಹಿನ್ನೆಲೆ ಮೇ.22 ರಂದು ಶಾಸಕ ಹರೀಶ್ ಪೂಂಜ ಬಂಧನಕ್ಕೆ ಮುಂದಾಗಿದ್ದು, ಅವರ ಗರ್ಡಾಡಿ ನಿವಾಸದ ಮುಂದೆ ಪೊಲೀಸ್ ತಂಡ ಸಜ್ಜಾಗಿದೆ. ಯಾವುದೇ ಸಮಯದಲ್ಲೂ ಹರೀಶ್ ಪೂಂಜ ಬಂಧನದ ಸಾಧ್ಯತೆ ಎದುರಾಗಿದೆ. ಈ ಹಿನ್ನೆಲೆ ಅವರ ಮನೆಗೆ ಸಾರ್ವಜನಿಕ ಭೇಟಿಗೆ ಪೊಲೀಸರು ನಿರಾಕರಿಸಿದ್ದು, ಮನೆಗೆ ಹೋಗುವ ರಸ್ತೆಗೆ ಪೊಲೀಸ್ ಸರ್ಪಗಾವಲು ಇರಿಸಲಾಗಿದೆ. ವಿಚಾರ ತಿಳಿದು ಅವರ ಮನೆ ಮುಂದೆ ಕಾರ್ಯಕರ್ತರು ಜಮಾಯಿಸಲಾರಂಭಿಸಿದ್ದಾರೆ.



ಉದಯವಾಹಿನಿ ಚಿತ್ರ

## ಪುಟಾಣಿಗಳ ಮೇಲೆ ವೃಕ್ಷರಾಜನ ಕರಿನೆರಳು

• **ಉದಯವಾಹಿನಿ ಬೆಳ್ತಂಗಡಿ**

ಇನ್ನೇನು ಮಳೆಗಾಲ ಸಮೀಪಿಸುತ್ತಿದೆ. ಅ, ಆ, ಇ, ಈ ಕಲಿಕೆಗೆ ಪುಟಾಣಿ ಮಕ್ಕಳು ಅಂಗನವಾಡಿ ಕೇಂದ್ರ ದತ್ತ ಹೆಜ್ಜೆ ಇಡುವ ಸಮಯವೂ ಬಂದಿದೆ. ಆದರೆ ವರುಣ ಆರ್ಭಟಿಸಿದರೆ ಮಕ್ಕಳ ತಲೆ ಮೇಲಿರುವ ಸೂರು ಎಷ್ಟು ಸದೃಢ ಎಂಬುದರೆಡೆಗೆ ನಮ್ಮ ಕಾಳಜಿಯಾಗಿದೆ. ಇಲಾಖೆ ಸುತ್ತೋಲೆಯಂತೆ 100ರಿಂದ 150 ಕುಟುಂಬಗಳಿದ್ದಲ್ಲಿ ಒಂದು ಅಂಗನವಾಡಿ ತೆರೆಯಲು ಅರ್ಹವಾಗಿದೆ.

ತಾಲ್ಲೂಕಿನ 81 ಗ್ರಾಮಗಳಿಗೆ ಸಂಬಂಧಿಸಿದಂತೆ 325 ಅಂಗನವಾಡಿ ಕೇಂದ್ರಗಳಿವೆ. ಅವುಗಳಲ್ಲಿ 6 ತಿಂಗಳಿಂದ 3 ವರ್ಷದವರೆಗೆ 7723 ಪುಟಾಣಿಗಳಿದ್ದರೆ, 3 ವರ್ಷದಿಂದ 6 ವರ್ಷದವರೆಗೆ 6682 ಪುಟಾಣಿಗಳ ದಾಖಲಾತಿಯಿದೆ. 325 ರಲ್ಲಿ 122 ಕಟ್ಟಡ ಇಂದಿಗೂ ಹಂಚಿನ ಮೇಲ್ಛಾವಣಿಯಾಗಿದ್ದು, 200 ಕೇಂದ್ರ ಆರ್‌ಸಿಸಿ ಕಟ್ಟಡ ಹೊಂದಿದೆ.



ಉದಯವಾಹಿನಿ ಚಿತ್ರ


ದುರಸ್ತಿ ಅಗತ್ಯವಾಗಿದ್ದ ತಾಲ್ಲೂಕಿನ 25 ಅಂಗನವಾಡಿಗಳಿಗೆ 2023-24ರ ಸಾಲಿನಲ್ಲಿ 22.49 ಲಕ್ಷ ರೂ. ಮೊತ್ತದ ಇಲಾಖೆ ಅನುದಾನದಲ್ಲಿ ದುರಸ್ತಿ ಕಾರ್ಯ ನಡೆಸಲಾಗಿದೆ. ಮಾತ್ರವಲ್ಲದೆ ಮಳೆಗಾಲ ಪೂರ್ವವಾಗಿ 2023-24ನೇ ಸಾಲಿನ ಮಳೆಹಾನಿ ಅನುದಾನದಡಿ ತಲಾ 2 ಲಕ್ಷ ರೂ. ನಂತೆ 37 ಅಂಗನವಾಡಿಗಳಿಗೆ 74 ಲಕ್ಷ ರೂ. ಮೊತ್ತದಲ್ಲಿ ಹೆಂಚು, ರಿಪೇರಿ, ಗೋಡೆ, ಪಕ್ಕಾಸು ಇತರ ಅಗತ್ಯ ನೆರವು ಒದಗಿಸಲಾಗಿದೆ ಎಂದು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಪ್ರಿಯಾ ಅಗ್ನೆಸ್ ತಿಳಿಸಿದ್ದಾರೆ.

## ಬೆಳ್ಳಂಬೆಳಗ್ಗೆ ಆತಂಕ ಹುಟ್ಟಿಸಿದ ಒಂಟಿ ಸಲಗ

• **ಉದಯವಾಹಿನಿ ಕೊಟ್ಟಿಗೆಹಾರ**

ಇಲ್ಲಿನ ಆಜಾದ್ ನಗರ ಹಾಗೂ ತರುವೆಯಲ್ಲಿ ಬೆಳ್ಳಂಬೆಳಗ್ಗೆ ಒಂಟಿ ಸಲಗವೊಂದು ಕಾಣಿಸಿಕೊಂಡು ಆತಂಕಕ್ಕೆ ಕಾರಣವಾಗಿದೆ. ಬಾಳೂರು ಮೀಸಲು ಅರಣ್ಯ ವ್ಯಾಪ್ತಿಯ ಸಮೀಪವಿರುವ ಗ್ರಾಮಗಳಲ್ಲಿ ಆಕ್ರಮಣಕಾರಿಯಾಗಿ ಕಂಡು ಬಂದಿರುವ ಕಾಡಾನೆಯ ಓಡಾಟ ಸ್ಥಳೀಯರಲ್ಲಿ ಆತಂಕಕ್ಕೆ ಕಾರಣವಾಗಿದ್ದು ದೂರಕ್ಕೆ ಓಡಿಸುವಂತೆ ಸಾರವಜನಿಕರು ಅರಣ್ಯ ಇಲಾಖೆಗೆ ಮನವಿ ಮಾಡಿದ್ದಾರೆ.

ಚಾರ್ಮಾಡಿ ಘಾಟ್ ಅಥವಾ ಬೇರೆಡೆಯಿಂದ ಕಾಡಾನೆ ಆಗಮಿಸಿರುವ ಸಾಧ್ಯತೆ ಇದೆ ಎಂದು ಹೇಳಲಾಗಿದೆ. ತರುವೆಯಲ್ಲಿ ಮನೆ ಸಮೀಪವೇ ಕಾಡಾನೆ ಸಂಚಾರ ಮಾಡಿರುವುದು ಸಿಸಿಟಿವಿಯಲ್ಲಿ ಸೆರೆಯಾಗಿದೆ.



ಉದಯವಾಹಿನಿ ಚಿತ್ರ


## ಆಕಸ್ಮಿಕ ಬೆಂಕಿ ತಗುಲಿ ಹೊತ್ತಿ ಉರಿದ ಕಾರು

• **ಉದಯವಾಹಿನಿ ಚಿಕ್ಕಮಗಳೂರು**

ಅಪಘಾತವಾಗಿ ಎಳೆದೊಯ್ಯುತ್ತಿದ್ದ ಕಾರು ಹೊತ್ತಿ ಉರಿದ ಘಟನೆ ಕಳಸ ತಾಲ್ಲೂಕಿನ ಸಂಸೆಯ ಬಾಲ್ಗಲ್ ಬಳಿ ನಡೆದಿದೆ.

ಅಪಘಾತವಾಗಿದ್ದ ಕಾರನ್ನ ಮಂಗಳೂರಿನತ್ತ ಎಳೆದೊಯ್ಯುವಾಗ ರಸ್ತೆ ಮಧ್ಯೆ ಆಕಸ್ಮಿಕವಾಗಿ ತಗುಲಿದ ಬೆಂಕಿ ಹೊತ್ತಿಕೊಂಡಿದೆ. ಕಾರು ಸಂಪೂರ್ಣವಾಗಿ ಭಸ್ಮವಾಗಿದೆ.

ಬಾಲ್ಗಲ್ ತಿರುವಿನಲ್ಲಿ ರಸ್ತೆ ಬದಿ ಇದ್ದ ಟಿಂಬರ್ ಮರಕ್ಕೆ ಢಿಕ್ಕಿ ಹೊಡೆದು ನಡೆದಿದ್ದ ಅಪಘಾತದಲ್ಲಿ ನಾಲ್ವರು ಪ್ರಾಣಾಪಾಯದಿಂದ ಪಾರಾಗಿದ್ದರು. ಕಳಸ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಾಗಿದೆ.



ಉದಯವಾಹಿನಿ ಚಿತ್ರ

# ಕಾಂಗ್ರೆಸ್ ಗ್ಯಾರಂಟಿಗಳಲ್ಲಿಯೇ ಕಾಲಹರಣ ಮಾಡುತ್ತಿದೆ

### • ಅಭಿವೃದ್ಧಿ ಕೆಲಸಕ್ಕೆ ಅನುದಾನ ಕೊಡುತ್ತಿಲ್ಲ, ಗ್ಯಾರಂಟಿ ಬಿಟ್ಟು ರಾಜ್ಯದಲ್ಲಿ ಏನೂ ಇಲ್ಲ: ಎನ್. ರವಿಕುಮಾರ್

• **ಉದಯವಾಹಿನಿ ಕೊಪ್ಪಳ**

ರಾಜ್ಯ ಸರ್ಕಾರ ಗ್ಯಾರಂಟಿಗಳ ಅಮಲಿನಲ್ಲಿದೆ. ಕಾಂಗ್ರೆಸ್ ಗ್ಯಾರಂಟಿಗಳಲ್ಲಿಯೇ ಕಾಲಹರಣ ಮಾಡುತ್ತಿದೆ. ಅಭಿವೃದ್ಧಿ ಕೆಲಸಕ್ಕೆ ಅನುದಾನ ಕೊಡುತ್ತಿಲ್ಲ. ಗ್ಯಾರಂಟಿ ಬಿಟ್ಟು ರಾಜ್ಯದಲ್ಲಿ ಏನೂ ಇಲ್ಲ ಎಂದು ವಿಧಾನ ಪರಿಷತ್ ಮುಖ್ಯ ಸಚೇತಕ ಎನ್ ರವಿಕುಮಾರ್ ವಾಗ್ದಾಳಿ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಧಿಕಾರದ ದಾಹಕ್ಕಾಗಿ ಗ್ಯಾರಂಟಿ ಯೋಜನೆ ಜಾರಿ ತಂದರು. ರಾಜ್ಯದಲ್ಲಿ ನೀರಾವರಿ, ಕೈಗಾರಿಕೆ, ಕಂದಾಯ, ಶಿಕ್ಷಣ ಹಳ್ಳಹತ್ತಿ ಹೋಗಿವೆ. ಪೋಷಕರೂ ಸಹ ಆತಂಕದಲ್ಲಿದ್ದಾರೆ. ಸರ್ಕಾರಿ ಕೆಲಸ ಶಿಕ್ಷಕರಿಗೆ ಕೊಡಬೇಡಿ. ಶಿಕ್ಷಣದ ಕೆಲಸ ಮಾತ್ರ ಶಿಕ್ಷಕರಿಗೆ ಕೊಡಿ.ರಾಜ್ಯದ ಯುವ ನಿಧಿ ಒಬ್ಬರಿಗೂ ಕೊಟ್ಟಿಲ್ಲ. 5, 8, 9, ಪಬ್ಲಿಕ್ ಪರೀಕ್ಷೆ ಬೇಡ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ರಾಜ್ಯ ಸರ್ಕಾರಕ್ಕೆ ಶಿಕ್ಷಣದ ಬಗ್ಗೆ ಮುನ್ನೋಟವೇ ಇಲ್ಲ. ಶಿಕ್ಷಣ ಸಚಿವರು ಸಿನಿಮಾಲೋಕದಲ್ಲಿ ಹೀರೋ ಆಗಿದ್ದವರು ಇಲ್ಲಿ ಬಂದು ಜೀರೋ ಆಗಿದ್ದಾರೆ ಸಿನಿಮಾ ಹೀರೋ ಇಲ್ಲಿ ಜೀರೋ ಆದರಲ್ಲ ಯಾಕೆ ? ಎಂದು ಸಿಎಂ ಹೇಳಲಿ. ಶಿಕ್ಷಣ ಸಚಿವರಿಗೆ ಶಿಕ್ಷಣದ ಗಂಧ ಗಾಳಿಯು ಗೊತ್ತಿಲ್ಲ ಅವರನ್ನು ಶಿಕ್ಷಣ ಕ್ಷೇತ್ರದಿಂದ ಮುಕ್ತಿ ಮಾಡಲಿ ಎಂದರು.

ಸರ್ಕಾರ ಮಕ್ಕಳ ಶಿಕ್ಷಣದ ಜೊತೆ ಆಟ ಆಡುತ್ತಿದೆ.ವಿವಿಗಳು ಮುಚ್ಚುವ ಪರಿಸ್ಥಿತಿಯಲ್ಲಿ ಇವೆ. 45 ಸಾವಿರ ತರಗತಿಗಳು ಶಿಥಿಲಾವಸ್ಥೆಯಲ್ಲಿವೆ. ಕನ್ನಡ ಮಾತನಾಡಲು ಬರದ ಶಿಕ್ಷಣ ಸಚಿವರ ಬಗ್ಗೆ ಸಿಎಂ ಕ್ರಮ ಕೈಗೊಳ್ಳಬೇಕು ಎಂದರು.

ಫೋನ್ ಟ್ಯಾಪಿಂಗ್ ವಿಚಾರದ ಬಗ್ಗೆ ಮಾತನಾಡಿದ ಅವರು, ಟ್ಯಾಪಿಂಗ್ ವಿಚಾರ ಸಿಬಿಐಗೆ ಕೊಡಲಿ. ಚೀನಾ ಯಂತ್ರ ಬಳಸಿ ಫೋನ್ ಟ್ಯಾಪಿಂಗ್ ಮಾಡುವ ವಿಚಾರದ ಬಗ್ಗೆ ಬಿಜೆಪಿ ದೂರು ಕೊಡುವ ಕುರಿತು ಪಕ್ಷದ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದರು.

ಬಿಜೆಪಿಗೆ ಎಕನಾಮಿಕ್ಸ್ ಗೊತ್ತಿಲ್ಲ ಎಂಬ ಸಿಎಂ ಹೇಳಿಕೆ ವಿಚಾರದ ಬಗ್ಗೆ ಮಾತನಾಡಿದ ಅವರು, ಸಿಎಂ ಅವರು ಭದ್ರತಾ ವೆಚ್ಚಕ್ಕೆ ಶೇ.103 ರಷ್ಟು ವೆಚ್ಚ ಮಾಡಿದ್ದಾರೆ. ನಾವು ಎಕನಾಮಿಕ್ಸ್ ತಿಳಿದಿದ್ದೇವೆ, ಸಮಾಜವೂ ಎಕನಾಮಿಕ್ಸ್ ತಿಳಿದಿದೆ ಎಂದರು.

ಜೂ. 03 ರಂದು ಈಶಾನ್ಯ ಪದವೀಧರ ಕ್ಷೇತ್ರದ ಚುನಾವಣೆ ನಡೆಯಲಿದೆ. ಈಶಾನ್ಯ ಭಾಗದಲ್ಲಿ 1.60 ಲಕ್ಷ ಮತದಾರರು ಇರಬಹುದು. ನಮ್ಮಲ್ಲಿ ಅನೇಕ ಆಕಾಂಕ್ಷಿಗಳಿದ್ದರು. ಈಶಾನ್ಯ ಪದವೀಧರ ಕ್ಷೇತ್ರಕ್ಕೆ ಅಮರನಾಥ ಪಾಟೀಲ್ ಅಭ್ಯರ್ಥಿಯಾಗಿದ್ದಾರೆ. ನಮ್ಮ ಬಿಜೆಪಿ ಹಾಗೂ ಜೆಡಿಎಸ್ ನೆಟವರ್ಕ್ ಚೆನ್ನಾಗಿದೆ. ನಾವು ಮೊದಲ ಪ್ರಾಶಸ್ತ್ಯ ಮತಗಳಲ್ಲೇ ಗೆಲ್ಲುತ್ತೇವೆ. ಪದವೀಧರ, ಶಿಕ್ಷಕರ ಕ್ಷೇತ್ರಗಳಲ್ಲಿ ಸಾಕಷ್ಟು ಸಮಸ್ಯೆ ಇವೆ ಎಂದರು.

**ಶಿಕ್ಷಣದ ಕೆಲಸ ಮಾತ್ರ ಶಿಕ್ಷಕರಿಗೆ ಕೊಡಿ**



> **ಕಲ್ಯಾಣ ಭಾಗದಲ್ಲಿ ಶಿಕ್ಷಕರ ಕೊರತೆ 17796 ರಷ್ಟಿದೆ. ಈಗಾಗಲೇ 6 ಸಾವಿರ ಶಿಕ್ಷಕರು ವರ್ಗಾವಣೆ ತೆಗೆದುಕೊಂಡಿದ್ದಾರೆ. ಇದಕ್ಕೆ ಮಧು ಬಂಗಾರಪ್ಪ ಕಾರಣ. ಶಿಕ್ಷಕರ ನೇಮಕ ತಕ್ಷಣ ಆಗಬೇಕು. ದೇವದುರ್ಗ ತಾಲ್ಲೂಕಿನಲ್ಲಿ ಒಬ್ಬ ಶಿಕ್ಷಕ ಇಲ್ಲದ ನೂರು ಶಾಲೆ ಇವೆ. ಈ ಎಲ್ಲಾ ಸಮಸ್ಯೆಗಳ ಕುರಿತು ಪರಿಷತ್ ಹಾಗೂ ಸದನದಲ್ಲಿ ಪ್ರಸ್ತಾಪ ಮಾಡುತ್ತೇವೆ –ಎನ್ ರವಿಕುಮಾರ್**

#### ಶಿಕ್ಷಕರಿಗೆ ರಜೆ ಸಿಗುತ್ತಿಲ್ಲ

**ಈ ಬಾರಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಶೇ. 53 ಇತ್ತು. ರಾಜ್ಯ ಸರ್ಕಾರ 20 % ಗ್ರೇಸ್ ಅಂಕ ಕೊಟ್ಟಿದೆ ಗ್ರೇಸ್ ಮಾರ್ಕ್ಸ್‌ನಿಂದ ಶಿಕ್ಷಣ ಸುಧಾರಣೆ ಅಸಾಧ್ಯ. ಕಕ ಭಾಗದ ಫಲಿತಾಂಶ ಶೇ.53 ರಷ್ಟು ಬಂದಿದೆ ಶಿಕ್ಷಣ ಸಚಿವರು ಈ ಬಗ್ಗೆ ಸಭೆ ಕರೆದು ಮಾತನಾಡಿದ್ದಾರಾ ಗ್ರೇಸ್ ಅಂಕ ಅತಿ ಹೆಚ್ಚು ಕೊಡಲಾಗಿದೆ. ಪ್ರೌಢ ಶಾಲೆ ಶಿಕ್ಷಕರು ಬರಿ ಪರೀಕ್ಷೆ ನಡೆಸಲಿದ್ದಾರೆ. ಪ್ರೌಢ ಶಾಲಾ ಶಿಕ್ಷಕರಿಗೆ ರಜೆ ಸಿಗುತ್ತಿಲ್ಲ. ಶಿಕ್ಷಕರು ಬಿಸಿಯೂಟ, ಸರ್ಕಾರದ ಸರ್ವೆ, ಚುನಾವಣಾ ಕೆಲಸ ಮಾಡಬೇಕು. ಮಕ್ಕಳ ಕಲಿಕೆಗೆ ಶಿಕ್ಷಕರನ್ನು ಬಿಡುತ್ತಿಲ್ಲ. ಸರ್ಕಾರಿ ಶಾಲೆ ಶಿಕ್ಷಕರಿಗೆ ಸಾಕಷ್ಟು ಕೆಲಸ ಕೊಡಲಾಗುತ್ತಿದೆ ಎಂದರು.**

# ಅಮೆರಿಕದ ಅಯೋವಾ ಪಟ್ಟಣದಲ್ಲಿ ಟೋರ್ನಡೋ ಆರ್ಭಟ

## ಹಲವರು ಸಾವನ್ನಪ್ಪಿರುವ ಶಂಕೆ, 12ಕ್ಕೂ ಹೆಚ್ಚು ಮಂದಿಗೆ ಗಾಯ, ಮನೆಗಳು, ಮಳಿಗೆಗಳು ಟೋರ್ನಡೋ ಆರ್ಭಟಕ್ಕೆ ನೆಲಸಮ

**ಅಮೆರಿಕ:** ಟೋರ್ನಡೋ ಆರ್ಭಟಕ್ಕೆ ಅಮೆರಿಕ ದೇಶದ ಗ್ರೀನ್ ಫೀಲ್ಡ್‌ನಲ್ಲಿ ಭಾರೀ ಹಾನಿ ಸಂಭವಿಸಿದೆ. ಗ್ರೀನ್ ಫೀಲ್ಡ್‌ನ ಪುಟ್ಟ ಪಟ್ಟಣ ಅಯೋವಾದಲ್ಲಿ ಈ ಅನಾಹುತ ಸಂಭವಿಸಿದೆ. ಈ ಘಟನೆಯಲ್ಲಿ ಹಲವರು ಸಾವನ್ನಪ್ಪಿರುವ ಶಂಕೆ ವ್ಯಕ್ತವಾಗಿದ್ದು, 12ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎನ್ನಲಾಗಿದೆ.



**ಕ್ಷಣಾರ್ಧದಲ್ಲೇ ಎಲ್ಲವೂ ಧ್ವಂಸ**

ಹಲವು ಮನೆಗಳು, ಮಳಿಗೆಗಳು ಏಕಾಏಕಿ ಬೀಸಿ ದ ಟೋರ್ನಡೋ ಆರ್ಭಟಕ್ಕೆ ನೆಲ ಸಮ ಆ ಗಿವೆ. ಹ ಲವು ಮರಗಳು ಬುಡ ಸಮೇತ ಉರುಳಿ ಬಿದ್ದಿದ್ದು, ಕಾರುಗಳು ಜಖಂಗೊಂಡಿವೆ. ಅಯೋವಾ ಪಟ್ಟ ಣ ದಲ್ಲಿ ಇದೀಗ ಎಲ್ಲಿ ನೋಡಿದರೂ ಅವಶೇಷಗಳೇ ಕ ಣ್ಣಿಗೆ ರಾಚುತ್ತಿವೆ. ಇದಲ್ಲದೆ ಗ್ರೀನ್ ಫೀಲ್ಡ್ ನಗರ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಭಾರೀ ಮಳೆ ಸಂಭವಿಸಿದೆ. ಹಲವೆಡೆ ಟೋರ್ನಡೋ ಆರ್ಭಟಿಸಿದ ವರದಿಗಳೂ ಇವೆ. ಟೋರ್ನಡೋ ಹಾವಳಿಯಿಂದ ಅಯೋವಾ ಪಟ್ಟಣದಲ್ಲಿ ಎದುರಾಗಿರುವ ಸಂಕಷ್ಟ ಸ್ಥಿತಿಯನ್ನು ನಿರ್ವಹಿಸಲು ಸ್ಥಳೀಯ ಆಡಳಿತ ಹಾಗೂ ಪೊಲೀಸ್ ಇಲಾಖೆ ಅಗತ್ಯ ಕ್ರಮ ಕೈಗೊಂಡಿದೆ. ಈ ಕುರಿತಾಗಿ ಪ್ರತಿಕ್ರಿಯೆ ನೀಡಿರುವ ಅಯೋವಾ ಸ್ಟೇಟ್ ಪ್ಯಾಟ್ರೋಲ್ ಸಾರ್ಜೆಂಟ್ ಅಲೆಕ್ಸ್ ಡಿಂಕ್ಲಾ, ಈ ವರೆಗೆ ಒಟ್ಟು ಎಷ್ಟು ಮಂದಿ ಮೃತಪಟ್ಟಿದ್ದಾರೆ ಅನ್ನೋದ್ರ ಕುರಿತಾಗಿ ಸ್ಥಳೀಯ ಆಡಳಿತ ತನಿಖೆ ನಡೆಸುತ್ತಿದೆ ಎಂದು ಹೇಳಿದ್ದಾರೆ. ಈ ಘಟನೆಯಲ್ಲಿ 12ಕ್ಕೂ ಹೆಚ್ಚು ಮಂದಿ ಗಾಯಗೊಂಡಿರೋದು ದೃಢಪಟ್ಟಿದೆ. ಗ್ರೀನ್ ಫೀಲ್ಡ್ ನಗರದ ಸುತ್ತಲೂ ಭಾರೀ ಪ್ರಮಾಣದ ಹಾನಿ ಸಂಭವಿಸಿದೆ. ಇಲ್ಲಿನ ಸಣ್ಣ ಮಟ್ಟದ ಸಮುದಾಯ ಆರೋಗ್ಯ ಕೇಂದ್ರ ಕೂಡಾ ಹಾನಿಗೀಡಾಗಿದೆ. ಹೀಗಾಗಿ ಅಲ್ಲಿ ಚಿಕಿತ್ಸೆ

**ಅಮೆರಿಕದ ಗ್ರೀನ್ ಫೀಲ್ಡ್ ನಗರದ ಸಮೀಪದ ಅಯೋವಾ ಪಟ್ಟಣದಲ್ಲಿ ಇದೀಗ ಅವಶೇಷಗಳದ್ದೇ ಕಾರುಬಾರು. ಎಲ್ಲೆಂದರಲ್ಲಿ ಧರೆಗುರುಳಿದ ಮನೆ, ಬುಡ ಸಮೇತ ಕಿತ್ತು ಬಿದ್ದ ಮರ, ಜಖಂಗೊಂಡ ಕಾರುಗಳೇ ತುಂಬಿವೆ. ಇದಕ್ಕೆ ಕಾರಣ ಏಕಾಏಕಿ ಆರ್ಭ ಟಿಸಿದ ಟೋರ್ನಡೋ ನೂರಾರು ಕಿ. ಮೀ ವೇಗದಲ್ಲಿ ಲೋವಾ ಪಟ್ಟಣಕ್ಕೆ ಧಾವಿ ಸಿದ ಟೋರ್ನಡೋ, ಕ್ಷಣಾರ್ಧದಲ್ಲಿ ಇಡೀ ಪಟ್ಟಣದ ಚಹರೆಯನ್ನೇ ಬದಲಿಸಿ ಹೋ ಗಿದೆ. ಹಲವರು ಗಾಯಗೊಂಡಿದ್ದು, ಸಾವನ್ನಪ್ಪಿದ್ದವರ ಬಗ್ಗೆ ಖಚಿತ ಮಾಹಿತಿ ಸಿಕ್ಕಿಲ್ಲ.**

ಪಡೆಯುತ್ತಿದ್ದ ರೋಗಿಗಳನ್ನು ಬೇರೆಡೆಗೆ ವರ್ಗಾವಣೆ ಮಾಡಲಾಗಿದೆ. ಇದೀಗ ಗ್ರೀನ್ ಫೀಲ್ಡ್ ನಗರದ ಹೈಸ್ಕೂಲ್ ಆವರಣದಲ್ಲೇ ಬಯಲು ಆಸ್ಪತ್ರೆ ವ್ಯವಸ್ಥೆ ಮಾಡಲಾಗಿದ್ದು, ಈ ಕುರಿತಾಗಿ ಆರೋಗ್ಯ ವ್ಯವಸ್ಥೆ ನಿರ್ವಹಣೆ ಮಾಡುತ್ತಿರುವ ಅಧಿಕಾರಿಗಳು ಫೇಸ್‌ಬುಕ್ ಮೂಲಕ ಮಾಹಿತಿ ರವಾನಿಸಿದ್ದಾರೆ.

**ಏನಿದು ಟೋರ್ನಡೋ?** **ಭಾರತದಲ್ಲಿ ಕಂಡು ಬರುವ ಸುಂಟರಗಾಳಿಯ ಅತಿ ದೊಡ್ಡ ರೂಪವನ್ನೇ ಟೋರ್ನಡೋ ಎನ್ನಬಹುದು. ಸಾಮಾನ್ಯವಾಗಿ ಭಾರತ, ಅಕ್ಕಪಕ್ಕದ ದೇಶಗಳ ವ್ಯಾಪ್ತಿಯ ಸಮುದ್ರದಲ್ಲಿ ವಾಯು ಭಾರ ಕುಸಿತವಾದರೆ ಚಂಡ ಮಾರುತ ಸೃಷ್ಟಿಯಾಗುತ್ತದೆ. ಇದರಿಂದ ಭಾರೀ ಗಾಳಿ, ಮಳೆ ಆಗುತ್ತೆ. ಆದರೆ, ಅಮೆರಿಕ ಸೇರಿದಂತೆ ಉತ್ತರ ಪೆಸಿಫಿಕ್ ವ್ಯಾಪ್ತಿಯಲ್ಲಿ ಭೂ ಪ್ರದೇಶದಲ್ಲೇ ಟೋರ್ನಡೋ ಸೃಷ್ಟಿಯಾಗುತ್ತದೆ. ಮೊದಲಿಗೆ ಸುಂಟರಗಾಳಿಯಂತೆಯೇ ಆರಂಭವಾಗುವ ಟೋರ್ನಡೋ ನಂತರ ಮುಗಿಲೆತ್ತರಕ್ಕೆ ಕೊಳವೆ ರೀತಿ ವ್ಯಾಪಿಸುತ್ತದೆ. ಟೋರ್ನಡೋ ವೇಗ ಗಂಟೆಗೆ ಗರಿಷ್ಟ 300 ಕಿ. ಮೀ.ವರೆಗೂ ತಲುಪಬಲ್ಲದು! ಇದು ಸಾಗುವ ಹಾದಿಯಲ್ಲಿ ಸಿಗುವ ಮನೆ, ಮರ, ಗಿಡ, ವಾಹನ ಸೇರಿದಂತೆ ಎಲ್ಲವೂ ಛಿದ್ರಗೊಳ್ಳುತ್ತದೆ.**

ಸದ್ಯದ ಮಟ್ಟಿಗೆ ಗ್ರೀನ್ ಫೀಲ್ಡ್ ನಗರಕ್ಕೆ ಸ್ಥಳೀಯರು ಹಾಗೂ ನಿವಾಸಿಗಳಿಗೆ ಮಾತ್ರ ಪ್ರವೇಶಕ್ಕೆ ಅವಕಾಶ ಕಲ್ಪಿಸಲಾಗಿದೆ. ಮಾಧ್ಯಮ ಪ್ರತಿನಿಧಿಗಳಿಗೆ ನಗರದಿಂದ ಹೊರಗೆ ಹೋಗುವಂತೆ ಸೂಚನೆ ನೀಡಲಾಗಿದೆ.

ದಿಢೀರ್ ಟೋರ್ನಡೋ ಹಾವಳಿಗೆ ಗ್ರೀನ್ ಫೀಲ್ಡ್ ನಗರದ ಬಹುಪಾಲು ಪ್ರದೇಶಗಳು ಅವಶೇಷಗಳಿಂದ ತುಂಬಿ ತುಳುಕುತ್ತಿವೆ. ಮುರಿದು ಬಿದ್ದ ಮನೆಗಳು, ನೆಲಕ್ಕೊರಗಿದ ಮರಗಳು, ಜಖಂಗೊಂಡಿರುವ ಕಾರುಗಳು ಎಲ್ಲೆಂದರಲ್ಲಿ ಕಾಣಸಿಗುತ್ತಿವೆ. ಇಲ್ಲಿನ ನಿವಾಸಿಗಳು ತಮ್ಮ ಮನೆ, ಪೀಠೋಪಕರಣ ಹಾಗೂ ಅಗತ್ಯ ಸಾಮಗ್ರಿಗಳನ್ನು ಮತ್ತೆ ಹೊಂದಿಸಿಕೊಳ್ಳಲು ಪರಸ್ಪರ ನೆರವಾಗುತ್ತಿದ್ದಾರೆ. ಬಹುತೇಕ ಮನೆಗಳು ನೆಲಸಮ ಆಗಿದ್ದು, ಮತ್ತೆ ಕಟ್ಟಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಎಷ್ಟೋ ಮಂದಿ ತಮ್ಮ ಮನೆ, ಕಾರು ಹಾಗೂ ಅಗತ್ಯ ವಸ್ತುಗಳು ಕ್ಷಣಾರ್ಧದಲ್ಲಿ ನಿರ್ನಾಮವಾದರೂ ಕೂಡಾ ತಮ್ಮ ಹಾಗೂ ತಮ್ಮ ಕುಟುಂಬಸ್ಥರ ಜೀವ ಉಳಿಯಿತು ಎಂದು ನಿಟ್ಟುಸಿರು ಬಿಡುತ್ತಿದ್ದಾರೆ.

## ನ್ಯೂ ಕ್ಯಾಲೆಡೋನಿಯಾದಲ್ಲಿ ಹಿಂಸಾಚಾರ: ನಾಗರಿಕರ ಸ್ಥಳಾಂತರ

**ಮೆಲ್ಬೋರ್ನ್:** ಪ್ರಕ್ಷುಬ್ಧ ಫ್ರೆಂಚ್ ಪೆಸಿಫಿಕ್ ಪ್ರದೇಶವಾದ ನ್ಯೂ ಕ್ಯಾಲೆಡೋನಿಯಾದಿಂದ ಆಸ್ಟ್ರೇಲಿಯಾದ ಮಿಲಿಟರಿ ಎರಡು ವಿಮಾನಗಳಲ್ಲಿ 115 ತಮ್ಮ ದೇಶದ ಪ್ರಯಾಣಿಕರನ್ನು ಕರೆತಂದಿದೆ. ಇದೇ ವೇಲೆ ಫ್ರೆಂಚ್ ಸರ್ಕಾರ ಇನ್ನೂ 100 ಪ್ರಯಾಣಿಕರನ್ನು ವಿಮಾನದ ಮೂಲಕ ಸ್ಥಳಾಂತರಿಸುವ ನಿರೀಕ್ಷೆಯಿದೆ ಎಂದು ಆಸ್ಟ್ರೇಲಿಯಾದ ಸರ್ಕಾರದ ಸಚಿವರು ತಿಳಿಸಿದ್ದಾರೆ.

ನ್ಯೂ ಕ್ಯಾಲೆಡೋನಿಯಾದಲ್ಲಿ ಇತ್ತೀಚಿನ ಸಶಸ್ತ್ರ ಘರ್ಷಣೆಗಳು, ಲೂಟಿ ಮತ್ತು ಬೆಂಕಿಯ ಹಚ್ಚಿ ಹಿಂಸಾಚಾರ ಹೆಚ್ಚಾಗಿದ್ದು ಇದರಲ್ಲಿ ಇಬ್ಬರು ಪೊಲೀಸ್ ಅಧಿಕಾರಿಗಳು ಸೇರಿದಂತೆ ಆರು ಜನರು ಸಾವನ್ನಪ್ಪಿದ್ದಾರೆ, ನೂರಾರು ಜನರು ಗಾಯಗೊಂಡಿದ್ದಾರೆ. ಕಳೆದ ಮೇ 13 ರಂದು ಪ್ಯಾರಿಸ್‌ನಲ್ಲಿನಲ್ಲಿನ ಫ್ರೆಂಚ್ ಸಮಸದರು ಸಭೆ ಸೇರಿ ನ್ಯೂ ಕ್ಯಾಲೆಡೋನಿಯಾ ಮತದಾರರ ಪಟ್ಟಿಯಲ್ಲಿ ಬದಲಾವಣೆಗಳನ್ನು ಮಾಡಲು ಫ್ರೆಂಚ್ ಸಂವಿಧಾನವನ್ನು ತಿದ್ದುಪಡಿ ಮಾಡುವ ಬಗ್ಗೆ ಚರ್ಚೆ ನಡೆಸುತ್ತಿದ್ದಂತೆ ಅಶಾಂತಿ



ಸ್ಫೋಟಗೊಂಡಿತ್ತು.

ಇದನ್ನು ವಿರೋಧಿಸಿ ನ್ಯೂ ಕ್ಯಾಲೆಡೋನಿಯಾದಲ್ಲಿ ಹಿಂಸಾಚಾರ ಶುರುವಾಗಿದೆ ಸ್ಥಳೀಯ ಜನರು ಹಾಗು ವಿದೇಶೀಯರು ಭಯ ಭೀತರಾಗಿದ್ದು ಫ್ರೆಂಚ್ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಇಂದು ನ್ಯೂ ಕ್ಯಾಲೆಡೋನಿಯಾದಲ್ಲಿ ಬರುವ ನಿರೀಕ್ಷೆಯಿದೆ, ಅಲ್ಲಿ ಸ್ಥಳೀಯ ಜನರು ದೀರ್ಘಕಾಲದಿಂದ ಸ್ವಾತಂತ್ರ್ಯವನ್ನು ಬಯಸಿದ್ದಾರೆ. ಅಶಾಂತಿಯು ಫ್ರಾನ್ಸ್ ನವಸಾಹತುಶಾಹಿ ಪರಂಪರೆಯನ್ನು ಮ್ಯಾಕ್ರನ್ ನಿರ್ವಹಿಸುವ ಬಗ್ಗೆ ಹೊಸ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಮಂಗಳವಾರ ತಡರಾತ್ರಿ ರಾಜಧಾನಿ ನೌಮಿಯಾದಿಂದ ಆಸ್ಟ್ರೇಲಿಯಾದ ಪೂರ್ವ ಕರಾವಳಿ ನಗರವಾದ ಬ್ರಿಸ್ಬೇನ್‌ಗೆ ಎರಡು ರಾಯಲ್ ಆಸ್ಟ್ರೇಲಿಯನ್ ಏರ್ ಫೋರ್ಸ್ –130 ಹರ್ಕ್ಯುಲಸ್‌ನಲ್ಲಿ 84 ಆಸ್ಟ್ರೇಲಿಯಾದ ನಾಗರಿಕರು ತಮ್ಮ ದೇಶಕ್ಕೆ ತೆರಳಿದ್ದಾರೆ ಎಂದು ಪೆಸಿಫಿಕ್ ಸಚಿವ ಪ್ಯಾಟ್ ಕಾನ್ರಾಯ್ ಹೇಳಿದ್ದಾರೆ.

ದಕ್ಷಿಣ ಪೆಸಿಫಿಕ್ ಪ್ರದೇಶವನ್ನು ತೊರೆಯಲು ಆಸ್ಟ್ರೇಲಿಯಾದ ವಿದೇಶಾಂಗ ಇಲಾಖೆಯಲ್ಲಿ ತನ್ನ ನಾಗರೀಕರಿಗೆ ತಿಳಿಸಿದೆ. ನ್ಯೂ ಕ್ಯಾಲೆಡೋನಿಯಾದಲ್ಲಿ 12 ದಿನಗಳ ತುರ್ತು ಪರಿಸ್ಥಿತಿಯನ್ನು ಘೋಷಿಸಲಾಗಿದೆ.

> **ಉಳಿದ 31 ಪ್ರಯಾಣಿಕರಲ್ಲಿ ಯಾವ ರಾಷ್ಟ್ರೀಯತೆಗಳಿವೆ ಎಂದು ಕಾನ್ರಾಯ್ ಹೇಳಲಿಲ್ಲ. ಆದರೆ ಬಿಕ್ಕಟ್ಟಿನಲ್ಲಿ ತಮ್ಮ ನಾಗರಿಕರಿಗೆ ಸಹಾಯ ಮಾಡಲು ಆಸ್ಟ್ರೇಲಿಯಾವು ಕೆನಡಾ ಮತ್ತು ಜಪಾನ್‌ನೊಂದಿಗೆ ಪರಸ್ಪರ ವ್ಯವಸ್ಥೆಗಳನ್ನುಮಾಡಿದೆ**
>
> **–ಪ್ಯಾಟ್ ಕಾನ್ರಾಯ್, ಪೆಸಿಫಿಕ್ ಸಚಿವ**

## ಏಮ್ಸ್ ಹಾಸ್ಟೆಲ್‌ನಲ್ಲಿ ವೈದ್ಯಕೀಯ ವಿದ್ಯಾರ್ಥಿ ಆತ್ಮಹತ್ಯೆ

**• ಉದಯವಾಹಿನಿ, ರಾಯ್‌ಪುರ**

ಛತ್ತೀಸ್‌ಗಢದ ರಾಜಧಾನಿ ರಾಯ್‌ಪುರದ ಆಲ್ ಇಂಡಿಯಾ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಕ್ಯಾಂಪಸ್‌ನಲ್ಲಿರುವ ಹಾಸ್ಟೆಲ್ ಕೋಣೆಯಲ್ಲಿ ವೈದ್ಯಕೀಯ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಎಂ ಬಿಬಿಎಸ್, ಪಿಜಿ ಇಂಟರ್ನ್ ಆಗಿದ್ದ ಮೃತ ರಂಜೀತ್ ಭೋಯರ್(25) ಮೃತರು. ಈತ ಮೂಲತಹ ಒಡಿ ಶಾದ ಭುವನೇಶ್ವರರಂದು ಗೊತ್ತಾಗಿದೆ. ಈತ ಖಿನ್ನತೆಗೆ ಚಿಕಿತ್ಸೆ ಪಡೆಯುತ್ತಿದ್ದರು ಮತ್ತು ಅವರು ಮಿತಿಮೀರಿದ ಔಷಧಗಳನ್ನು ಸೇವಿಸಿದ್ದರು ಎಂದು ಪ್ರಾಥಮಿಕ ತನಿಖೆ ತಿಳಿದುಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಇನ್‌ಸ್ಟಿಟ್ಯೂಟ್‌ನ ಕ್ಯಾಂಪಸ್‌ನಲ್ಲಿರುವ ಬಾಲಕರ ಹಾಸ್ಟೆಲ್‌ನಲ್ಲಿ ಕೋಣೆಯಲ್ಲಿ ಭೋಯರ್ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಬಗ್ಗೆ ಕೆಲವು ಸ್ನೇಹಿತರುನೋಡಿದ್ದಾರೆ ತಕ್ಷಣ ಹಾಸ್ಟೆಲ್ ವಾರ್ಡನ್‌ಗೆ ಮಾಹಿತಿ ನೀಡಿದ್ದು ಅಲ್ಲಿಗೆ ದಾವಿಸಿದ ವೈದ್ಯರು ಪರೀಕ್ಷಿಸಿದಾಗ ಅವರು ಕೊನೆಯುಸಿರೆಳೆದಿರುವುದು ಕಂಡುಬಂದಿದೆ ಎಂದು ಅಮಾನಕ ಪೊಲೀಸ್ ಠಾಣೆಯ ಅಧಿಕಾರಿ ತಿಳಿಸಿದ್ದಾರೆ. ಸ್ಥಳದಲ್ಲಿ ಯಾವುದೇ ಆತ್ಮಹತ್ಯೆ ಪತ್ರ ಪತ್ತೆಯಾಗಿಲ್ಲ ಎಂದು ಅವರು ತಿಳಿಸಿದ್ದಾರೆ. ವಿಷಯ ತಿಳಿದ ಪೊಲೀಸರು ಸ್ಥಳಕ್ಕೆ ಧಾವಿಸಿ ಮರಣೋತ್ತರ ಪರೀಕ್ಷೆ ನಡೆಸಿದ ಬಳಿಕ ಮೃತದೇಹವನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಿದ್ದಾರೆ .



> **ಕಳೆದ ವರ್ಷ ಪಿಜಿ ಇಂಟರ್ನ್‌ಶಿಪ್ ಪೂರ್ಣಗೊಳಿಸದ ಕಾರಣ ಭೋಯರ್ ಖಿನ್ನತೆಗೆ ಚಿಕಿತ್ಸೆಪಡೆಯುತ್ತಿದ್ದರು ಅವರು ಹೇಳಿದರು. ಮೇಲ್ನೋಟಕ್ಕೆ, ಅವರು ಔಷಧಿಗಳ ಮಿತಿಮೀರಿದ ಪ್ರಮಾಣವನ್ನು ತೆಗೆದುಕೊಂಡಿದ್ದಾರೆ ಎಂದು ತೋರುತ್ತದೆ ಆದರೆ ಮರಣೋತ್ತರ ಪರೀಕ್ಷೆಯ ವರದಿಯ ನಂತರ ಸಾವಿನ ನಿಖರವಾದ ಕಾರಣವನ್ನು ಕಂಡುಹಿಡಿಯಲಾಗುವುದು ಎಂದರು**

## ನಾಪತ್ತೆಯಾಗಿದ್ದ ಬಾಂಗ್ಲಾ ಸಂಸದ ಶವವಾಗಿ ಪತ್ತೆ

**ಢಾಕಾ:** ಭಾರತದಲ್ಲಿ ನಾಪತ್ತೆಯಾಗಿದ್ದ ಬಾಂಗ್ಲಾ ದೇಶದ ಹಿರಿಯ ಸಂಸದ ಅನ್ವರುಲ್ ಅಜೀಮ್ ಅನಾರ್ ಅವರು ಕೊಲ್ಕತ್ತಾದಲ್ಲಿ ಕೊಲೆಯಾದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಮೂವರನ್ನು ಬಂಧಿಸಲಾಗಿದೆ ಎಂದು ಗೃಹ ಸಚಿವ ಅಸಾದುಝ್ಮಾನ್ ಖಾನ್ ತಿಳಿಸಿದ್ದಾರೆ.



ಭಾರತದಲ್ಲಿ ನಾಪತ್ತೆಯಾಗಿದ್ದ ಅವಾಮಿ ಲೀಗ್ ಸಂಸದ ಅನ್ವರುಲ್ ಅಜೀಮ್ ಅನಾರ್ ಅವರನ್ನು ಕೋಲ್ಕತ್ತಾದ ಫ್ಲಾಟ್‌ನಲ್ಲಿ ಕೊಲೆ ಮಾಡ ಲಾಗಿದೆ ಎಂದು ಖಾನ್ ಸುದ್ದಿಗಾರರಿಗೆ ತಿಳಿಸಿದ್ದಾರೆ ಇಲ್ಲಿ ಯವರೆಗೆ ತಿಳಿದುರುವಂತೆ ಎಲ್ಲಾ ಹಂತಕರು ಬಾಂಗ್ಲಾದೇಶೀಯರು ಎಂದು ತಿಳಿದುಬಂದಿದೆ ಎಂದರು.

ಇದೊಂದು ಯೋಜಿತ ಕೊಲೆಯಾಗಿದೆ, 56 ವರ್ಷದ ಸಂಸದನ ಹತ್ಯೆಗೆ ಸಂಬಂಧಿಸಿದಂತೆ ಬಾಂಗ್ಲಾದೇಶ ಪೊಲೀಸರು ಮೂವರನ್ನು ಬಂಧಿಸಿದ್ದಾರೆ ಎಂದು ಸಚಿವರು ಹೇಳಿದ್ದಾರೆ ಎಂದು ದಿ ಡೈಲಿ ಸ್ಟಾರ್ ವರದಿ ಮಾಡಿದೆ. ಮೃತದೇಹ ಎಲ್ಲಿದೆ ಎಂದು ವಿಚಾರಿಸಿದಾಗ ಅದರ ಬಗ್ಗೆ ಇನ್ನಷ್ಟೇ ತಿಳಿಯಬೇಕಿದೆ ಎಂದರು. ಉದ್ದೇಶದ ಬಗ್ಗೆ ನಾವು ಶೀಘ್ರದಲ್ಲೇ ನಿಮಗೆ ತಿಳಿಸುತ್ತೇವೆ ಎಂದು ಸಚಿವರು ಹೇಳಿದರು, ಭಾರತೀಯ ಪೊಲೀಸರು ಪ್ರಕರಣಕ್ಕೆ ಸಹಕರಿಸುತ್ತಿದ್ದಾರೆ ಎಂದು ಹೇಳಿದರು. ಮೂರನೇ ಬಾರಿ ಸಂಸದರಾಗಿದ್ದ ಅಜೀಮ್ ಅನಾರ್ ಅವರು ಕಲಿಗಂಜ್ ಉಪಜಿಲಾ ಘಟಕದ ಅಧ್ಯಕ್ಷರಾಗಿದ್ದರು ಆರೋಗ್ಯ ಚಿಕಿತ್ಸೆಗಾಗಿ ವೈಯಕ್ತಿಕ ಕಳೆದ ಮೇ 12 ರಂದು ಭಾರತಕ್ಕೆ ತೆರಳಿದ್ದರು. ಮೇ 18 ರಂದು ಉತ್ತರ ಕೋಲ್ಕತ್ತಾದ ಬಾರಾನಗರ ಪೊಲೀಸ್ ಠಾಣೆಯಲ್ಲಿ ಅವರ ನಾಪತ್ತೆ ಕುರಿತು ಪ್ರಕರಣ ದಾಖಲಿಸಲಾಗಿದೆ ಎಂದು ವರದಿ ತಿಳಿಸಿದೆ. ಪ್ರಧಾನ ಮಂತ್ರಿ ಶೇಖ್ ಹಸೀನಾ ಅವ ರು ಅಜೀಂ ಅವರ ನಿಧನಕ್ಕೆ ತೀವ್ರ ಆಘಾತ, ದುಃಖ ವ್ಯಕ್ತಪಡಿಸಿದ್ದಾರೆ ಅವರು ಪ್ರತಿನಿಧಿಸುವ ಜೆನೈದಾ ಗಡಿ ಪ್ರದೇಶವಾಗಿದ್ದು, ಹೆ ಚ್ಚಿನ ಅಪರಾಧ ಪ್ರಮಾಣಕ್ಕೆ ಹೆಸರುವಾಸಿಯಾಗಿದೆ.

## ಯಾವುದೇ ಪರಿಸ್ಥಿತಿ ಎದುರಿಸಲು ಸನ್ನದ್ಧರಾಗಿರುವಂತೆ ನೌಕಾಪಡೆಗೆ ಸೂಚನೆ

**ನವದೆಹಲಿ:** ಹಿಂದೂ ಮಹಾಸಾಗರದಲ್ಲಿ ಹೆಚ್ಚುತ್ತಿರುವ ಚೀನಾ ಆಕ್ರಮಣಗಳು, ಕೆಂಪು ಸಮುದ್ರದಲ್ಲಿನ ಅಸ್ಥಿರ ಪರಿಸ್ಥಿತಿಯ ನಡುವೆಯೇ ರಾಷ್ಟ್ರೀಯ ಕಡಲ ಹಿತಾಸಕ್ತಿ ಗಳನ್ನು ಕಾಪಾಡಲು ಭಾರತೀಯ ನೌಕಾಪಡೆಯು ಯಾವಾಗಲೂ ಯುದ್ಧಕ್ಕೆ ಸಿದ್ಧವಾಗಿರಬೇಕು ಎಂದು ನೌಕಾಪಡೆಯ ಮುಖ್ಯಸ್ಥ ಅಡಿರಲ್ ದಿನೇಶ್ ಕೆ ತ್ರಿಪಾಠಿ ಅವರು ಕರೆ ನೀಡಿದ್ದಾರೆ.

ಇಲ್ಲಿನ ನೌಕಾ ಪ್ರಧಾನ ಕಛೇರಿಯಲ್ಲಿ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ಆಯಕಟ್ಟಿನ ನೀರಿನಲ್ಲಿ ಪ್ರ ಸ್ತುತ ಭದ್ರತಾ ವಾತಾವರಣ ಮತ್ತು ನೌಕಾಪಡೆಗೆ ಅಗತ್ಯವಿರುವ ಕ್ರಮಗಳನ್ನು ಪರಿಶೀಲಿಸಿದರು.

ಭಾರತದ ಕಡಲ ಶಕ್ತಿಯ ಪ್ರಾಥಮಿಕ ದ್ಯೋತಕವಾಗಿ, ಭಾರತೀಯ ನೌಕಾಪಡೆಯ ರೈಸನ್ ಡಿ ಟ್ರೆ ರಾಷ್ಟ್ರೀಯ ಕಡಲ ಹಿತಾಸಕ್ತಿಗಳನ್ನು ಯಾವುದೇ ಸಮಯದಲ್ಲಿ, ಎಲ್ಲಿಯಾದರೂ, ಹೇಗಾದರೂ ಕಾಪಾಡಲು ಎಲ್ಲಾ ಸಮಯದಲ್ಲೂ ಸದಾ ಸನ್ನದ್ಧರಾಗಿ



ರುವಂತೆ ಅವರು ಸೂಚಿಸಿದರು. ಅಧಿಕಾರಿಗಳಿಗೆ ನೀಡಿದ ಹೇಳಿಕೆಯಲ್ಲಿ, ನೌಕಾಪಡೆಯ ಮುಖ್ಯಸ್ಥರು ಸರ್ಕಾರದ ಆತ ನಿರ್ಭರ್ತ (ಸ್ವಾವಲಂಬನೆ) ಉಪಕ್ರಮದ ಕಡೆಗೆ ಭಾರತೀಯ ನೌಕಾಪಡೆಯ ಅಚಲ ಬದ್ಧತೆಯನ್ನು ಪುನರುಚ್ಚರಿಸಿದರು.

ಅಡಿರಲ್ ತ್ರಿಪಾಠಿ ಅವರು ಪ್ರತಿಕ್ರಿಯಾಶೀಲ ಶಕ್ತಿಯಾಗಿ ಉಳಿಯಲು ಸಾಗರ ವಲಯದಲ್ಲಿ ಅ ಸ್ತಿತ್ವದಲ್ಲಿರುವ ಮತ್ತು ಉದಯೋನ್ಮುಖ ಸವಾಲುಗಳನ್ನು ಪರಿಹರಿಸಲು ಆಂತರಿಕ ಪರಿಹಾರಗಳು, ನಾವೀನ್ಯತೆ ಸ್ಥಾಪಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳುವುದರ ಬಗ್ಗೆ ಗಮನ ಸೆಳೆದರು. ಇದೇ ಸಂದರ್ಭದಲ್ಲಿ ಅವರು ಸೇವೆಯಿಂದ ಎಲ್ಲಾ ಕಡ್ಡಾಯ ಕಾರ್ಯಗಳನ್ನು ಪೂರೈಸುವಲ್ಲಿ ಸಿಬ್ಬಂದಿ ಪ್ರದರ್ಶಿಸಿದ ಸಮರ್ಪಣೆ ಮತ್ತು ವತ್ತಿಪರತೆಯನ್ನು ಅಡಿರಲ್ ಶ್ಲಾಘಿಸಿದರು.

### ಸರಕು ಹಡಗುಗಳಿಗೆ ನೆರವು

**ಕಳೆದ ಕೆಲವು ತಿಂಗಳುಗಳಲ್ಲಿ, ಕೆಂಪು ಸಮುದ್ರದ ಸುತ್ತಲಿನ ಆಯಕಟ್ಟಿನ ನೀರಿನಲ್ಲಿ ದಾಳಿಗೆ ಒಳಗಾದ ನಂತರ ಭಾರತೀಯ ನೌಕಾಪಡೆಯು ಹಲವಾರು ಸರಕು ಹಡಗುಗಳಿಗೆ ನೆರವು ನೀಡಿತು. ಗಾಜಾದಲ್ಲಿ ತನ್ನ ಸೇನಾ ದಾಳಿಯನ್ನು ನಿಲ್ಲಿಸುವಂತೆ ಇಸ್ರೇಲ್ ಮೇಲೆ ಒತ್ತಡ ಹೇರಲು ಹೌತಿ ಉಗ್ರಗಾಮಿಗಳು ಕೆಂಪು ಸಮುದ್ರದಲ್ಲಿರುವ ವ್ಯಾಪಾರಿ ಹಡಗುಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುತ್ತಿದ್ದಾರೆ.**

## ಪ್ಯಾಲೆಸ್ಟೀನ್‌ಗೆ ಅಧಿಕೃತ ಮಾನ್ಯತೆ ನೀಡಲು ನಾರ್ವೆ, ಸ್ಪೇನ್, ಐರ್ಲೆಂಡ್ ತೀರ್ಮಾನ

**ಟೆಲ್ ಅವೀವ್:** ಪ್ಯಾಲೆಸ್ಟೀನ್ ರಾಷ್ಟ್ರಕ್ಕೆ ಮಾನ್ಯತೆ ನೀಡು ವುದಾಗಿ ನಾರ್ವೆ, ಸ್ಪೇನ್ ಮತ್ತು ಐರ್ಲೆಂಡ್ ಹೇಳಿವೆ. ಈ ಐತಿಹಾಸಿಕ ಘೋಷಣೆಯನ್ನು ಪ್ಯಾಲೆಸ್ಟೀನಿನ ಜನ ಸಂಭ್ರಮದಿಂದ ಸ್ವಾಗತಿಸಿದ್ದಾರೆ. ಆದರೆ, ಈ ಘೋಷಣೆಯನ್ನು ಇಸ್ರೇಲ್ ಖಂಡಿಸಿದೆ. ನಾರ್ವೆ ಮತ್ತು ಐರ್ಲೆಂಡ್‌ನಲ್ಲಿ ಇರುವ ತನ್ನ ರಾಯಭಾರಿಗಳು ವಾಪಸಾಗಬೇಕು ಎಂದು ಇಸ್ರೇಲ್ ಸೂಚಿಸಿದೆ. ಪ್ಯಾಲೆಸ್ಟೀನ್ ರಾಷ್ಟ್ರಕ್ಕೆ ಅಧಿಕೃತ ಮಾನ್ಯತೆಯನ್ನು ಮೇ 28ರಂದು ನೀಡಲಾಗುತ್ತದೆ. ಈ ನಡುವೆ ಇಸ್ರೇಲ್‌ನ ರಾಷ್ಟ್ರೀಯ ಭದ್ರತಾ ಸಚಿವ ಇತಾಮರ್ ಬೆನ್–ಗ್ವೈರ್ ಅವರು ಜೆರುಸಲೇಂನಲ್ಲಿ ಅಲ್–ಅಕ್ಸಾ ಮಸೀದಿ ಪ್ರದೇಶಕ್ಕೆ ಪ್ರಚೋದನಕಾರಿ ಭೇಟಿ ನೀಡಿದ್ದಾರೆ. ಈ ಸ್ಥಳವು ಟೆಂಪಲ್ ಮೌಂಟ್ ಎಂದು ಯಹೂದಿಯರು ನಂಬಿದ್ದಾರೆ. ಈ ಭೇಟಿಯು ಈ ಪ್ರದೇಶದಲ್ಲಿ ಬಿಕ್ಕಟ್ಟನ್ನು ತೀವ್ರಗೊಳಿಸುವ ಸಾಧ್ಯತೆ




ಇದೆ. ಪ್ಯಾಲೆಸ್ಟೀನ್ ರಾಷ್ಟ್ರಕ್ಕೆ ಮಾನ್ಯತೆ ನೀಡುವ ತೀರ್ಮಾನವನ್ನು ನಾರ್ವೆ ಮೊದಲು ಪ್ರಕಟಿಸಿತು. ನಾರ್ವೆ ಪ್ರಧಾನಿ ಯೂನಸ್ ಗಾರ್ ಸ್ಟೋರ ಅವರು, ಮಾನ್ಯತೆ ಇಲ್ಲವಾದರೆ ಮಧ್ಯಪ್ರಾಚ್ಯದಲ್ಲಿ ಶಾಂತಿ ಸಾಧ್ಯವಿಲ್ಲ' ಎಂದು ಹೇಳಿದ್ದಾರೆ. ಪ್ಯಾಲೆಸ್ಟೀನ್ ರಾಷ್ಟ್ರವನ್ನು ಮಾನ್ಯ ಮಾಡುವ ಮೂಲಕ ನಾರ್ವೆ, ಅರಬ್ ಶಾಂತಿ ಯೋಜನೆಯನ್ನು ಬೆಂಬಲಿಸುತ್ತಿದೆ ಎಂದು ಹೇಳಿದ್ದಾರೆ. ದೀರ್ಘಾವಧಿಗೆ ಶಾಂತಿ ನೆಲೆಸಬೇಕು ಎಂದಾದರೆ ದ್ವಿರಾಷ್ಟ್ರ ಸೂತ್ರದ ಪಾಲನೆ ಅಗತ್ಯ, ಪ್ಯಾಲೆಸ್ಟೀನ್ ರಾಷ್ಟ್ರಕ್ಕೆ ಮಾನ್ಯತೆ ನೀಡುವ ಯೋಚನೆ ತಮಗೆ ಇದೆ ಎಂಬ ಮಾತನ್ನು ಐರೋಪ್ಯ ಒಕ್ಕೂಟದ ಹಲವು ದೇಶಗಳು ಈಚೆಗೆ ಹೇಳಿವೆ. ಈಗಿನ ತೀರ್ಮಾನವು ಇಸ್ರೇಲ್ ಅನ್ನು ಇನ್ನಷ್ಟು ಏಕಾಂಗಿಯಾಗಿಸಬಹುದು, ಯುರೋಪಿನ ಇನ್ನಷ್ಟು ದೇಶಗಳು ಪ್ಯಾಲೆಸ್ಟೀನ್‌ಗೆ ಮಾನ್ಯತೆ ನೀಡುವುದಕ್ಕೆ ಇಂಬು ಕೊಡಬಹುದು. ಪ್ಯಾಲೆಸ್ಟೀನ್ ರಾಷ್ಟ್ರಕ್ಕೆ ಅಂದಾಜು 140 ದೇಶಗಳು ಈಗಾಗಲೇ ಮಾನ್ಯತೆ ನೀಡಿವೆ. ಈಗ ನಾರ್ವೆ, ಸ್ಪೇನ್ ಮತ್ತು ಐರ್ಲೆಂಡ್ ತೆಗೆದುಕೊಂಡಿರುವ ನಿರ್ಧಾರವು ಫ್ರಾನ್ಸ್ ಮತ್ತು ಜರ್ಮನಿಯ ಮೇಲೆ ತ ಮ್ಮ ನಿಲುವು ಮರುಪರಿಶೀಲಿಸಬೇಕಾದ ಒತ್ತಡವನ್ನು ಹೆಚ್ಚುಮಾಡಲಿದೆ.

> **ಈ ಕ್ರಮವು ಗತಕಾಲವನ್ನು, ಪ್ಯಾಲೆ ಸ್ಟೀನ್‌ನಲ್ಲಿ ಮೃತಪಟ್ಟವರ ಜೀವವನ್ನು ಮರಳಿ ತರುವುದಿಲ್ಲ ಎಂಬುದು ನಮಗೆ ಗೊತ್ತಿದೆ. ಆದರೆ ಇದು ಪ್ಯಾಲೆಸ್ಟೀನ್ ನಾಗರಿಕರ ವರ್ತಮಾನ ಮತ್ತು ಭವಿಷ್ಯಕ್ಕೆ ಬಹು ಮುಖ್ಯವಾಗಿರುವ ಘನತೆ, ಭರವಸೆಯನ್ನು ತರುತ್ತದೆ**
>
> **–ಪೆಪ್ರೊ ಸ್ಯಾಂಚೆಸ್, ಸ್ಪೇನ್ ಪ್ರಧಾನಿ**

## ನಿಜ್ಜರ್ ಹತ್ಯೆ : ಕೆನಡಾ ನ್ಯಾಯಾಲಯಕ್ಕೆ ಹಾಜರಾದ ಭಾರತ ಮೂಲದ ಆರೋಪಿಗಳು

**ಒಟ್ಟಾವ:** ಖಾಲಿಸ್ತಾನ ಪ್ರತ್ಯೇಕತಾ ಹೋರಾಟಗಾರ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆ ಪ್ರಕರಣದ ಆರೋಪಿಗಳಾದ ಮೂವರು ಭಾರತೀಯರು ಕೆನಡಾ ನ್ಯಾಯಾಲಯದ ಮುಂದೆ ಮೊದಲ ಬಾರಿಗೆ ಖುದ್ದು ಹಾಜರಾದರು. ಈ ವೇಳೆ ಯಾವುದೇ ಸಮುದಾಯದ ಜೊತೆ ಸಂಪರ್ಕ ಹೊಂದದಂತೆ ಆರೋಪಿಗಳಿಗೆ ನ್ಯಾಯಾಲಯ ಸೂಚಿಸಿತು. ಕರಣ್ ಬ್ರಾರ್(22), ಕಮಲ್ ಪ್ರೀತ್ ಸಿಂಗ್(22), ಕರಣ್ ಪ್ರೀತ್ ಸಿಂಗ್ (28) ಅವರು ಸರ್‍ರೆಯಲ್ಲಿರುವ ಬ್ರಿಟಿಷ್ ಕೊಲಂಬಿಯಾ ಪ್ರಾಂತೀಯ ನ್ಯಾಯಾಲಯಕ್ಕೆ ಹಾಜರಾದರು. ಮತ್ತೊಬ್ಬ ಆರೋಪಿ ಅಮನ್‌ದೀಪ್ ಸಿಂಗ್(22) ವಿಡಿಯೊ ಕಾನ್ಫರೆನ್ಸ್ ಮೂಲಕ ಹಾಜರಾದರು.

ನ್ಯಾಯಾಲಯಕ್ಕೆ ಖುದ್ದು ಹಾಜರಾದವರು ಕೆಂಪು ಬಣ್ಣದ ಜೈಲಿನ ಉಡುಗೆಯನ್ನು ತೊಟ್ಟಿದ್ದರು. ಮೇ 10ರಂದು ಒಂಟಾರಿಯೊದಲ್ಲಿ ಬಂಧನಕ್ಕೀಡಾಗಿರುವ ಅಮನ್‌ದೀಪ್ ಸಿಂಗ್ ಕಸ್ಟಡಿ ಮುಂದುವರಿದಿದೆ. ನ್ಯಾ



ಯಾಧೀಶ ಮಾರ್ಕ್ ಜೆಟ್ಟೆ ಒಂಟರ್‌ಸೆಪ್ಟರ್ ಮೂಲಕ ಆರೋಪಿಗಳ ಜೊತೆ ಮಾತನಾಡಿದರು. ಬಳಿಕ, ಮುಂದಿನ ವಿಚಾರಣೆಯನ್ನು ಜೂನ್ 25ಕ್ಕೆ ಮುಂದೂಡಿದರು. 'ಈ ಪ್ರಕರಣದಲ್ಲಿ ಮಾತ್ರ ಇಷ್ಟು ಪ್ರಮಾಣದ ಸಮುದಾಯದ ಹಿತಾಸಕ್ತಿ ಏಕೆ? ಆರೋಪಿಗಳು ನ್ಯಾಯಸಮ್ಮತ ವಿಚಾರಣೆಗೆ ಅರ್ಹರು' ಎಂದು ಕರಣ್ ಬ್ರಾರ್ ಪರ ಹಾಜರಾಗಿದ್ದ ವಕೀಲ ರಿಚರ್ಡ್ ಫ್ಲವರ್ ಹೇಳಿದ್ದಾರೆ. ಆರೋಪಿಗಳು ನ್ಯಾಯಾಲಯ ಪ್ರವೇಶಕ್ಕೂ ಮುನ್ನ, ನಿಜ್ಜರ್ ಬೆಂಬಲಿಗರು, ಸಿಖ್ ಪ್ರತ್ಯೇಕತಾವಾದಿ ಹೋರಾಟಗಾರರು ನ್ಯಾಯಾಲಯದ ಹೊರಗೆ ಪ್ರತಿಭಟನೆ ನಡೆಸಿದರು.

# ಬಿಜೆಪಿ, ಕಾಂಗ್ರೆಸ್‌ಗೆ ಚುನಾವಣಾ ಆಯೋಗ ಚಾಟಿ

## ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆಗೆ ಚುನಾವಣಾ ಆಯೋಗ ಪತ್ರ

**ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸೇರಿದಂತೆ ತಾರಾ ಪ್ರಚಾರಕರ ಚುನಾವಣಾ ಭಾಷಣಗಳಿಗೆ ಸಂಬಂಧಿಸಿದಂತೆ ಆಡಳಿತಾರೂಢ ಬಿಜೆಪಿ ಮತ್ತು ಮುಖ್ಯ ವಿರೋಧ ಪಕ್ಷ ಕಾಂಗ್ರೆಸ್ ವಿರುದ್ಧ ಚುನಾವಣಾ ಆಯೋಗ ಬುಧವಾರ ಚಾಟಿ ಬೀಸಿದೆ.



**ಚುನಾವಣಾ ಪಾವಿತ್ರ್ಯ ಕಾಪಾಡಿ**

ಲೋಕಸಭೆ ಚುನಾವಣೆಯಲ್ಲಿ ಈಗಾಗಲೇ ಐದು ಹಂತಗಳ ಮತದಾನ ಮುಗಿದಿದ್ದು, ಇನ್ನು ಕೇವಲ ಎರಡು ಹಂತಗಳು ಬಾಕಿ ಇವೆ. ಈ ನಡುವೆ ಚುನಾವಣಾ ಆಯೋಗವು ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪ್ರತ್ಯೇಕ ನಿರ್ದೇಶನಗಳನ್ನು ಜಾರಿ ಮಾಡಿ ದೆ. ದೇಶದ ಸಮಾಜೋ– ಸಾಂಸ್ಕೃತಿಕ ಪರಿಸ ರವು ಚುನಾವಣೆಗೆ ಬಲಿಯಾಗಬಾರದು ಎಂದು ಅದು ಹೇಳಿದೆ.

**ಪತ್ರದಲ್ಲಿ ಏನಿದೆ?:** ಚುನಾವಣೆಯು, ರಾಜಕೀಯ ಪಕ್ಷಗಳು ಗೆಲ್ಲುವ ಕಾರಣಕ್ಕಾಗಿ ಮಾತ್ರ ಸ್ಪರ್ಧಿಸುವ ಪ್ರಕ್ರಿಯೆ ಅಲ್ಲ, ಅದು ಮತದಾರರ ಸಮುದಾಯಕ್ಕೆ ಅನುಭವ, ಅನುಕರಣ ಮತ್ತು ಭರವಸೆಗಳನ್ನು ಮೂಡಿಸಲು ತಮ್ಮ ಸಾಮರ್ಥ್ಯವನ್ನು ಮುಂದಿಡುವ ಅವಕಾಶವನ್ನು ಅದು ನೀಡುತ್ತದೆ. ಎರಡನೆಯ ಭಾಗವು ಭಾರತೀಯ ಚುನಾವಣೆಯ ಬಹಳ ಅಮೂಲ್ಯ ಪರಂಪರೆಯನ್ನು, ನಮ್ಮ ಚುನಾ ವಣಾ ಪ್ರಜಾಪ್ರಭುತ್ವವನ್ನು ನೀಡುತ್ತದೆ. ನಿಮ್ಮ ಪಕ್ಷ ಸೇರಿದಂತೆ ಯಾರಿಂದಲೂ ಇದನ್ನು ಬಲ ಹೀನಗೊಳಿಸಲು ಅವಕಾಶ ನೀಡಬಾರದು ಎಂದು ಆಯೋಗ ತಿಳಿಸಿದೆ.

ಚುನಾವಣೆಗಳು ಕಾಲಕಾಲಕ್ಕೆ ನಡೆಯುವ ಚಟುವಟಿಕೆ. ಅವು ಬರುತ್ತವೆ ಮತ್ತು ಹೋಗುತ್ತವೆ. ಆದರೆ ನಿಮ್ಮಂತಹ ರಾಜಕೀಯ ಪಕ್ಷಗಳು ಶಾಶ್ವತ; ಮತ್ತೊಂದು ಚಿರಸ್ಥಾಯಿಯಾಗಿ ಉಳಿಯುವ ಸಂಗತಿಯೆಂದರೆ ಭಾರತದ ಸಮಾಜೋ– ಸಾಂಸ್ಕೃತಿಕ ಪರಿಸರ. ರಾಜಕೀಯ ಪಕ್ಷಗಳು ದೇಶದ ವರ್ತಮಾನ ಮತ್ತು ಭವಿಷ್ಯಕ್ಕಾಗಿ ನಾಯಕರನ್ನು ಪೋಷಿಸುವ ಹೊಣೆಗಾರಿಕೆಯಲ್ಲಿವೆ. ಅಧಿಕ ಸವಾಲಿನ ಚುನಾವಣಾ ಪ್ರಕ್ರಿಯೆಯಲ್ಲಿ, ಮುಖ್ಯವಾಗಿ ಹಿರಿಯ ಸದಸ್ಯರಿಗೆ ಸಂಬಂಧಿಸಿದಂತೆ ಶಿಸ್ತು ಮತ್ತು ನಡವಳಿಕೆಯನ್ನು ಹೇರುವಲ್ಲಿನ ಯಾವುದೇ ಲೋಪವನ್ನು ಅವು ತಾಳಿಕೊಳ್ಳಲಾರವು ಎಂದು ಎರಡೂ ಪಕ್ಷಗಳಿಗೆ ಆಯೋಗ ಹೇಳಿದೆ.

ಇದಕ್ಕೂ ಮುನ್ನ, ಪರಸ್ಪರ ಎದುರಾಳಿ ಪಕ್ಷಗಳ ವಿ ರುದ್ಧ ದೂರು ನೀಡಿ ಉಭಯ ಪಕ್ಷಗಳು ಚುನಾವಣಾ ಆಯೋಗಕ್ಕೆ ದೂರು ನೀಡಿದ್ದವು. ಈ ಸಂಬಂಧ ನೋಟಿಸ್ ನೀಡಿದ್ದ ಆಯೋಗ, ಆರೋಪಗಳ ಬಗ್ಗೆ ಪ್ರತಿಕ್ರಿಯೆ ಕೇಳಿತ್ತು. ಬುಧವಾರ ಈ ಪಕ್ಷಗಳಿಗೆ ಖಡಕ್ ನಿರ್ದೇಶನ ನೀಡಿರುವ ಅದು, ಪಕ್ಷಗಳ ವಿವರಣೆಯನ್ನು ತಳ್ಳಿಹಾಕಿದೆ.

ಮಾದರಿ ನೀತಿ ಸಂಹಿತೆ ಅಡಿಯಲ್ಲಿ ನಿರ್ಬಂಧಿಸಲಾಗಿರುವಂತಹ ಯಾವುದೇ ಹೇಳಿಕೆಗಳನ್ನು ನೀಡದಂತೆ ತನ್ನ ಎಲ್ಲಾ ತಾರಾ ಪ್ರಚಾರಕರಿಗೆ ಸೂಚನೆ ನೀಡುವಂತೆ ಬಿಜೆಪಿ ಮತ್ತು ಕಾಂಗ್ರೆಸ್‌ಗೆ ಆಯೋಗ ನಿರ್ದೇಶಿಸಿದೆ. ಯಾವುದೇ ಪಕ್ಷ ಅಥವಾ ಅಭ್ಯರ್ಥಿಯು ವಿಭಿನ್ನ ಜಾತಿಗಳು ಅಥವಾ ಸಮುದಾಯ, ಧರ್ಮ ಅಥವಾ ಭಾಷೆಗಳ ನಡುವೆ ಪರಸ್ಪರ ದ್ವೇಷ ಸೃಷ್ಟಿಸುವ ಅಥವಾ ಉದ್ವಿಗ್ನತೆ ಮೂಡಿಸುವ ಅಥವಾ ಪ್ರಸ್ತುತ ಇರುವ ಮನಸ್ತಾಪಗಳನ್ನು ಹೆಚ್ಚಿಸುವಂತಹ ಯಾವುದೇ ಚಟುವಟಿಕೆಯಲ್ಲಿ ತೊಡಗಬಾರದು ಎಂದು ಹೇಳಿದೆ. ಸಮಾಜವನ್ನು ಒಡೆಯುವಂತಹ ಭಾಷಣ ಅಥವಾ ಹೇಳಿಕೆಗಳನ್ನು ನೀಡದಂತೆ ಎಲ್ಲಾ ತಾರಾ ಪ್ರಚಾರಕರಿಗೆ ಸೂಚಿಸಲು ಅದು ಬಿಜೆಪಿಗೆ ಆದೇಶಿಸಿದೆ. ಧಾರ್ಮಿಕ ಕೋಮು ವಿಚಾರಗಳನ್ನು ಎಳೆಯುವ ಪ್ರಚಾರ ವಿಧಾನದಿಂದ ದೂರ ಇರುವಂತೆ ಸ್ಟಾರ್ ಕ್ಯಾಂಪೇನರ್‌ಗಳಿಗೆ ಸೂಚಿಸಿದೆ. ಸಭ್ಯ ಭಾಷಣಗಳನ್ನು ಮಾಡುವಂತೆ ಅದು ಆಗ್ರಹಿಸಿದೆ.

### ಕೋಮು ಭಾವನೆ ಕೆರಳಿಸಬೇಡಿ

**ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆಪಿ ನಡ್ಡಾ ಅವರಿಗೆ ಬರೆದಿರುವ ಪತ್ರದಲ್ಲಿ ಚುನಾವಣಾ ಆಯೋಗ, ಕೇಂದ್ರದಲ್ಲಿನ ಆಡಳಿತಾರೂಢ ಪಕ್ಷವಾಗಿ ಬಿಜೆಪಿಯು ಭಾರತದ ಸಂಯುಕ್ತ ಹಾಗೂ ಸೂಕ್ಷ್ಮ ರಚನೆಯ ವಾಸ್ತವಿಕ ಅಂಶವನ್ನು ಗಮನದಲ್ಲಿ ಇರಿಸಿಕೊಂಡು ಚುನಾವಣಾ ವಿಧಾನಗಳನ್ನು ಸಂಪೂರ್ಣವಾಗಿ ಅನುಸರಿಸುವುದನ್ನು ನಿರೀಕ್ಷಿಸಲಾಗಿದೆ ಎಂದು ಹೇಳಿದೆ.**

### ಕಾಂಗ್ರೆಸ್‌ಗೂ ಸೂಚನೆ

**ಖರ್ಗೆ ಅವರಿಗೆ ಪತ್ರ ಬರೆದಿರುವ ಆಯೋಗ, ತಾರಾ ಪ್ರಚಾರಕರು ರಕ್ಷಣಾ ಪಡೆಗಳ ಚಟುವಟಿಕೆಗಳಿಗೆ ಸಂಬಂಧಿಸಿದ ಯಾವುದೇ ರಾಜಕೀಯ ಪ್ರೊಪಗಂಡದಲ್ಲಿ ತೊಡಗದಂತೆ ನಿರ್ಬಂಧಿಸಲು ಸೂಚನೆ ನೀಡಿದೆ. ಭಾರತದ ಸಂವಿಧಾನವನ್ನು ರದ್ದುಗೊಳಿಸಲಾಗುತ್ತದೆ ಅಥವಾ ಮಾರಾಟ ಮಾಡಲಾಗುತ್ತದೆ ಎಂಬಂತಹ ಸುಳ್ಳು ಭಾವನೆಗಳನ್ನು ಮೂಡಿಸುವ ಹೇಳಿಕೆಗಳನ್ನು ಸಹ ನೀಡದಂತೆ ಎಚ್ಚರಿಕೆ ಕೊಟ್ಟಿದೆ. ಪ್ರಧಾನಿ ನರೇಂದ್ರ ಮೋದಿ ಅವರ 'ಮಂಗಳಸೂತ್ರ' ಹೇಳಿಕೆ ಹಾಗೂ ಜನರ ಸಂಪತ್ತನ್ನು ಮುಸ್ಲಿಮರಿಗೆ ಹಂಚುವ ಆರೋಪದ ವಿರುದ್ಧ ಚುನಾವಣಾ ಆಯೋಗಕ್ಕೆ ಕಾಂಗ್ರೆಸ್ ದೂರು ನೀಡಿತ್ತು. ಇತ್ತ ಬಿಜೆಪಿ ಕೂಡ, ಪ್ರಧಾನಿ ಮೋದಿ ಅವರು ಒಂದು ದೇಶ, ಒಂದು ಭಾಷೆ ಮತ್ತು ಒಂದು ಧರ್ಮಕ್ಕೆ ಪ್ರಯತ್ನಿಸುತ್ತಿದ್ದಾರೆ ಎಂಬ ಕಾಂಗ್ರೆಸ್ ಆರೋಪದ ವಿರುದ್ಧ ದೂರು ಕೊಟ್ಟಿತ್ತು.**

## ಮಿನಿ ನ್ಯೂಸ್

### ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚಾರ ಪುನರಾರಂಭ

**ಜಮ್ಮು:** ಜಮ್ಮು–ಶ್ರೀನಗರ ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ದಿನದ ಮಟ್ಟಿಗೆ ಸ್ಥಗಿತಗೊಂಡಿದ್ದ ವಾಹನ ಸಂಚಾರ ಬುಧವಾರ ಮುಂಜಾನೆ ಪುನರಾರಂಭಗೊಂಡಿದೆ. ಲಘು ಮೋಟಾರು ವಾಹನಗಳು ಮತ್ತು ಖಾಸಗಿ ಕಾರುಗಳು ಹೆದ್ದಾರಿಯಲ್ಲಿ ಎರಡೂ ದಿಕ್ಕುಗಳಲ್ಲಿ ಸಂಚರಿಸಲು ಅನುಮತಿಸಲಾಗಿದೆ ಎಂದು ಸಂಚಾರ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಆದಾಗ್ಯೂ, ಭಾರೀ ಮೋಟಾರು ವಾಹನಗಳು ಜಖಾನಿನಿಂದ ಶ್ರೀನಗರ ಕಡೆಗೆ ಏಕಮುಖ ಸಂಚಾರಕ್ಕೆ ನಿರ್ಬಂಧಿಸಲಾಗಿದೆ ಎಂದು ಅವರು ಹೇಳಿದರು. ರಸ್ತೆಯ ಕಳಪೆ ಸ್ಥಿತಿ ಮತ್ತು ಅಲೆಮಾರಿ ಹಿಂಡುಗಳ ಸಂಚಾರದಿಂದಾಗಿ ರಾಂಬನ್ ಮತ್ತು ಬನಿಹಾಲ್ ನಡುವೆ ನಿಧಾನ ಸಂಚಾರವಿದೆ ಎಂದು ಅವರು ಹೇಳಿದರು.

ದಟ್ಟಣೆ ತಪ್ಪಿಸಲು ಲೇ ನ್ ಶಿಸ್ತು ಅನುಸರಿಸಲು ಪ್ರಯಾಣಿಕರಿಗೆ ಸೂಚಿಸಲಾಗಿದೆ. ಅನಿರ್ದಿಷ್ಟ ಕಾರಣಗಳಿಗಾಗಿ ಮಂಗಳವಾರ ಹೆದ್ದಾರಿಯನ್ನು ಮುಚ್ಚಲಾಗಿತ್ತು ಆದರೂ ಇದು ದುರಸ್ತಿ ಮತ್ತು ನಿರ್ವಹಣೆ ಕಾರ್ಯಕ್ಕಾಗಿ ಎಂದು ಮೂಲಗಳು ಸೂಚಿಸಿವೆ. ಏತನ್ಮಧ್ಯೆ, ಮೊಘಲ್ ರಸ್ತೆ ಮತ್ತು ಭದೇ ವಾರ್–ಚಂಬಾ ರಸ್ತೆ ಸಂಚಾರಕ್ಕೆ ಮುಕ್ತವಾಗಿದೆ. ಕಾಶ್ಮೀರ ಕಣಿವೆಯ ಕಡೆಗೆ ಅಲೆಮಾರಿಗಳ ಚಲನೆ ಮತ್ತು ರಾಂಬನ್, ಬನಿಹಾಲ್ ನಡುವೆ ಗುಂಡು ಹಾರಿಸುವ ಅಪಾಯದಿಂದಾಗಿ ಅನಾನುಕೂಲತೆಯನ್ನು ತಪ್ಪಿಸಲು ಪ್ರಯಾಣಿಕರು ಮತ್ತು ನಿರ್ವಾಹಕರು ಹಗಲು ಹೊತ್ತಿನಲ್ಲಿ ಪ್ರಯಾಣಿಸಲು ಸೂಚಿಸಲಾಗಿದೆ.

### 5.58 ಕೋಟಿ ರೂ. ಡ್ರಗ್ಸ್ ವಶ

**ಚೈಬಾಸಾ:** ಜಾರ್ಖಂಡ್‌ನ ಪಶ್ಚಿಮ ಸಿಂಗ್‌ಭೂಮ್ ಜಿಲ್ಲೆಯಲ್ಲಿ ಪೊಲೀಸರು 5.58 ಕೋಟಿ ರೂಪಾಯಿ ಮೌಲ್ಯದ 37.23 ಕ್ವಿಂಟಾಲ್ ಗಸಗಸೆಯನ್ನು ವಶಪಡಿಸಿಕೊಂಡಿದ್ದಾರೆ. ಪಶ್ಚಿಮ ಸಿಂಗ್‌ಭೂಮ್ ಜಿಲ್ಲೆಯ ಚಕ್ರಧರಪುರದಿಂದ ಚೈಬಾಸಾಗೆ ಗಸಗಸೆ ತುಂಬಿದ ಟ್ರಕ್ ಬರುತ್ತಿದೆ ಎಂಬ ಸುಳಿವಿನ ಮೇರೆಗೆ ಪೊಲೀಸ್ ಅಧೀಕ್ಷಕ ಅಶುತೋಷ್ ಶೇಖರ್ ನೇತೃತ್ವದ ತಂಡ ಈ ದಾಳಿ ನಡೆಸಿದೆ. ಲಾರಿ ತಪಾಸಣೆಯ ವೇಳೆ ಚಾಲಕ ಮತ್ತು ಅವರ ಸಹಾಯಕ ಪೊಲೀಸ್ ತಂಡವನ್ನು ನೋಡಿ ಮಫಸಿಲ್ ಪೊಲೀಸ್ ಠಾಣೆಯ ಚೆಕ್ ಪೋಸ್ಟ್ ಬಳಿ ವಾಹನವನ್ನು ಬಿಟ್ಟು ಪರಾರಿಯಾಗಿದ್ದಾರೆ. ಅವರನ್ನು ಹಿಡಿಯಲು ಪೊಲೀಸ್ ತಂಡ ಹರಸಾಹಸ ಮಾಡಿದರೂ ಅದು ಸಾಧ್ಯವಾಗಲಿಲ್ಲ. ವಾಹನ ತಪಾಸಣೆ ನಡೆಸಿದ ಪೊಲೀಸರು 186 ಮೂಟೆಗಳಲ್ಲಿ ತುಂಬಿದ್ದ 3,723 ಕೆಜಿ ಗಸಗಸೆ ಮತ್ತು 40 ಮೂಟೆ ಮೂರಿ ಜೊತೆಗೆ ಎರಡು ಮೊಬೈಲ್ ಫೋನ್‌ಗಳು, ಎರಡು ಆಧಾರ್ ಕಾರ್ಡ್‌ಗಳು, ಚಾಲನಾ ಪರವಾನಗಿಯನ್ನು ವಶಪಡಿಸಿಕೊಳ್ಳಲಾಗಿದೆ. ಎನ್‌ಡಿಪಿಎಸ್ ಕಾಯ್ದೆಯ ಸಂಬಂಧಿತ ಸೆಕ್ಷನ್‌ಗಳ ಅಡಿಯಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ನಿಷಿದ್ಧ ವಸ್ತುವಿನ ಬೆಲೆ 5.58 ಕೋಟಿ ರೂಪಾಯಿ ಎಂದು ಎಸ್ಪಿ ತಿಳಿಸಿದ್ದಾರೆ.

### ಬುರ್ಖಾ ಧರಿಸಿ ನಕಲಿ ಮತದಾನಕ್ಕೆ ಯತ್ನಿಸಿದ ಮಹಿಳೆಯರ ಬಂಧನ

**ಪಾಟ್ನಾ:** ಬಿಹಾರದ ದರ್ಭಾಂಗಾದಿಂದ ನಕಲಿ ಮತದಾನವಾಗಿರುವ ಘಟನೆ ಬೆಳಕಿಗೆ ಬಂದಿದ್ದು, ಬುರ್ಖಾ ಧರಿಸಿ ನಕಲಿ ಮತ ಚಲಾಯಿಸಲು ಯತ್ನಿಸಿದ ಮೂವರು ಮಹಿಳೆಯರನ್ನು ಪೊಲೀಸರು ಬಂಧಿಸಿದ್ದಾರೆ. ಮಹಿಳೆಯರನ್ನು ಬಂಧಿಸಿದ ನಂತರ, 2 ಗಂಟೆಗೆ ಪೊಲೀಸ್ ಠಾಣೆಗೆ ಜಮಾಯಿಸಿದ ಮುಸ್ಲಿಮರ ಗುಂಪು ಮಹಿಳೆಯರನ್ನು ಬಲವಂತವಾಗಿ ಬಿಡುಗಡೆ ಮಾಡುವವರೆಗೆ ಗೊಂದಲವನ್ನು ಸೃಷ್ಟಿಸಿತು. ಪೂರ್ಣಪರದೆ ಪೊಲೀಸರ ಮಹಿಳೆಯರನ್ನು ಬಿಡುಗಡೆಗೊಳಿಸಿದಾಗ, ಪೊಲೀಸ್ ಠಾಣೆ ಆವರಣದಲ್ಲಿ ನೆರೆದಿದ್ದವರು ಸಂಭ್ರಮಾಚರಣೆ ಮಾಡಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಪೊಲೀಸರು 24 ಗುರುತಿಸಲ್ಪಟ್ಟ ಮತ್ತು 130 ಅಪರಿಚಿತ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಾರೆ.

### ಕೇಜ್ರಿವಾಲ್‌ಗೆ ಕೊಲೆ ಬೆದರಿಕೆ ಸಂದೇಶ ಬರೆದಿದ್ದ ವ್ಯಕ್ತಿ ಬಂಧನ

**ನವದೆಹಲಿ:** ಮುಖ್ಯಮಂತ್ರಿ ಮತ್ತು ಆಮ್ ಆದಿ ಪಕ್ಷದ ರಾಷ್ಟ್ರೀಯ ಸಂಚಾಲಕ ಅರವಿಂದ್ ಕೇಜ್ರಿವಾಲ್ ಅವರಿಗೆ ಕೊಲೆ ಬೆದರಿಕೆ ಸಂದೇಶ ಬರೆದಿದ್ದ ವ್ಯಕ್ತಿಯನ್ನು ಬಂಧಿಸಲಾಗಿದೆ. ಬಂಧಿತನನ್ನು ಆರೋಪಿ ಅಂಕಿತ್ ಗೋಯಲ್(33) ಎಂದು ಗುರುತಿಸಲಾಗಿದೆ. ಈತ ದೆಹಲಿ ಮೆಟ್ರೋ ನಿಲ್ದಾಣದಲ್ಲಿ ಬೆದರಿಕೆ ಸಂದೇಶ ಬರೆದಿದ್ದನು. ಅಂಕಿತ್ ಕೃತ್ಯ ಮೆಟ್ರೋ ನಿಲ್ದಾಣದಲ್ಲಿದ್ದ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಈ ಸಾಕ್ಷಿ ಆಧರಿಸಿ ದೆಹಲಿ ಪೊಲೀಸರು ಬಂಧಿಸಿದ್ದಾರೆ. ಮೆಟ್ರೋ ಘಟಕವು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸುತ್ತಿದೆ. ಈ ಹಿಂದೆ ಬೆದರಿಕೆ ಸಂದೇಶ ಕುರಿತು ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದ್ದ ಎಎಪಿ, ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರಿಗೆ ಸಾರ್ವಜನಿಕವಾಗಿ ಜೀವ ಬೆದರಿಕೆ ಹಾಕಲಾಗುತ್ತಿದೆ.

ಪಿಎಂಒ, ಬಿಜೆಪಿ ಮತ್ತು ನರೇಂದ್ರ ಮೋದಿಯವರ ಆದೇಶದ ಮೇರೆಗೆ ರಾಜೀವ್ ಚೌಕ್, ಪಟೇಲ್ ನಗರ ಮೆಟ್ರೋ ನಿಲ್ದಾಣದಲ್ಲಿ ಬೆದ ರಿಕೆ ಸಂದೇಶ ಬರೆಯಲಾಗಿದೆ. ಹೀಗಾಗಿ ಅರವಿಂದ್ ಕೇಜ್ರಿವಾಲ್ ಅವರಿಗೆ ಏನಾದರೂ ಸಂಭವಿಸಿದರೆ ಅದಕ್ಕೆ ಬಿಜೆಪಿ ಮತ್ತು ನರೇಂದ್ರಮೋದಿ ನೇರ ಹೊಣೆಯಾಗುತ್ತಾರೆ ಎಂದು ಗಂಭೀರ ಆರೋಪ ಮಾಡಿತ್ತು.

### ಮಣಿಪುರದಲ್ಲಿ ನಿಷೇಧಿತ ಸಂಘಟನೆಯ ಮೂವರು ಉಗ್ರರ ಬಂಧನ

**ಇಂಫಾಲ:** ಮಣಿಪುರದ ತೌಬಲ್ ಜಿಲ್ಲೆಯಲ್ಲಿ ನಿಷೇಧಿತ ಸಂಘಟನೆ ಕಂಗ್ಲೇಪಕ್ ಕಮ್ಯುನಿಸ್ಟ್ ಪಾರ್ಟಿದ ಮೂವರು ಉಗ್ರರನ್ನು ಭದ್ರತಾ ಪಡೆ ಗಳು ಬಂಧಿಸಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಗುಪ್ತಚರ ಆಧಾರದ ಮೇಲೆ ಸಂಘಟಿತ ಕಾರ್ಯಾಚರಣೆಯಲ್ಲಿ, ರಾಜ್ಯ ಪೊಲೀಸರು, ಗೂರ್ಖಾ ರೈಫಲ್ಸ್ ಮತ್ತು ಅಸ್ಸಾಂ ರೈಫಲ್ಸ್‌ನ ಸಿ ಬ್ಬಂದಿಗಳನ್ನು ಒಳಗೊಂಡ ಜಂಟಿ ತಂಡವು ಖೋಂಗ್‌ಜೋಮ್ ಬಜಾರ್‌ನ ಟೆಕ್ಚಾಮ್ ಲಾಮ್‌ಖೈ ಪ್ರದೇಶದ ಬಳಿ ತೈಬಂಗಾನ್‌ಬಾ ನೇತೃತ್ವದ ಕಂಗ್ಲೇಪಕ್ ಕಮ್ಯುನಿಸ್ಟ್ ಪಾರ್ಟಿ ಬಣದ ಮೂರು ಕಾರ್ಯಕರ್ತರನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತ ಮೂವರು ಉಗ್ರರಿಂದ ಎರಡು ದೇಶ ನಿರ್ಮಿತ 9 ಎಂಎಂ ಪಿಸ್ತೂಲ್‌ಗಳು, ಮ್ಯಾಗಜೀನ್‌ಗಳು, ಹದಿನಾಲ್ಕು 9 ಎಂಎಂ ಗುಂಡು , ಐದು 7.62 ಎಂಎಂ ಗುಂಡುಗಳು, ಮೂರು ಮೊಬೈಲ್ ಹ್ಯಾಂಡ್‌ಸೆಟ್‌ಗಳು ಮತ್ತು ಒಂದು ಕಾರನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಮತ್ತೊಂದು ಘಟನೆಯಲ್ಲಿ, ಇಂಫಾಲ್ ಪಶ್ಚಿಮ ಜಿಲ್ಲೆಯ ಲಾಮ್ಸಾಂಗ್ ಪ್ರದೇಶದಿಂದ ನಿಷೇಧಿತ ಸಜ್ಜು ಆರ್‌ಪಿಎಫ್/ಪಿಎಲ್‌ಎಯ ಆರು ಸದಸ್ಯರನ್ನು ಬಂಧಿಸಿದ್ದಾರೆ ಮತ್ತು ಒಂದು ಮ್ಯಾಗಜೀನ್ ಜೊತೆಗೆ ಒಂದು 9 ಎಂಎಂ ಪಿಸ್ತೂಲ್, ಒಂದು 32 ಪಿಸ್ತೂಲ್ ಜೊತೆಗೆ ಮ್ಯಾಗಜೀನ್, ಮದ್ದುಗುಂಡುಗಳು ಮತ್ತು ಎಂಟು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಂಡಿದ್ದಾರೆ.



# ಗೆಲುವಿನ ಓಟ ನಿಲ್ಲಿಸಿದ ಆರ್‌ಸಿಬಿ

## ರಾಜಸ್ಥಾನ್ 2 ಕ್ವಾಲಿಫೈಯರ್‌ಗೆ , ರಾಜಸ್ಥಾನ್‌ಗೆ ರೋಚಕ ಗೆಲುವು, ಐಪಿಎಲ್‌ನಿಂದ ಹೊರಬಿದ್ದ ಆರ್‌ಸಿಬಿ

ಬೌಲರ್‌ಗಳ ಸಂಘಟಿತ ಹೋರಾಟ ಹಾಗೂ ಯಶಸ್ವಿ ಜೈಸ್ವಾಲ್ (45 ರನ್) , ರಿಯಾನ್ ಪರಾಗ್ (36 ರನ್) ಬ್ಯಾಟಿಂಗ್ ಬಲದಿಂದ ಮಿಂಚಿದ ರಾಜಸ್ಥಾನ್ ರಾಯಲ್ಸ್ ತಂಡ 2024 ಎಲಿಮಿನೇಟರ್ ಪಂದ್ಯದಲ್ಲಿ ಆರ್‌ಸಿಬಿ ವಿರುದ್ಧ 4 ವಿಕೆಟ್‌ಗಳ ಗೆಲುವು ಸಾಧಿಸಿದೆ. ಲೀಗ್ ಹಂತದಲ್ಲಿ ಸತತ ನಾಲ್ಕು ಸೋಲು, ಮಳೆಯಿಂದಾಗಿ ಒಂದು ಪಂದ್ಯ ರದ್ದುಗೊಂಡ ಕಾರಣ ಬೇಸರಕ್ಕೆ ಒಳಗಾಗಿದ್ದ ರಾಜಸ್ಥಾನ್ ಬಳಗ ಈ ಗೆಲುವಿನೊಂದಿಗೆ ಖುಷಿ ಕಂಡು ಎರಡನೇ ಕ್ವಾಲಿಫೈಯರ್ ಪಂದ್ಯಕ್ಕೆ ಪ್ರವೇಶ ಪಡೆಯಿತು. ಸಂಜು ಬಳಗ ಮೊದಲ ಕ್ವಾಲಿಫೈಯರ್‌ನಲ್ಲಿ ಸೋತ ಸನ್ ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ.

ಈ ಸೋಲಿನೊಂದಿಗೆ ಆರ್‌ಸಿಬಿ ತಂಡದ 2024ರ ಐಪಿಎಲ್ ಅಭಿಯಾನ ಮುಕ್ತಾಯಗೊಂಡಿತು. ಪ್ಲೇಆಫ್ ಹಂತಕ್ಕೆ ಪ್ರವೇಶ ಪಡೆದಿರುವುದೇ ರೆಡ್ ಆರ್ಮಿಯ ದೊಡ್ಡ ಸಾಧನೆ ಎನಿಸಿಕೊಂಡಿತು. ಜತೆಗೆ ಆರ್‌ಸಿಬಿಯ ಅಪಾರ ಅಭಿಮಾನಿಗಳ ಹೃದಯ ಛಿದ್ರಗೊಂಡಿತು. ಈ ಬಾರಿಯಾದರೂ ಕಪ್ ಗೆಲ್ಲಬೇಕೆಂಬ ಆಸೆ ಕಮರಿತು. ಕಷ್ಟದಲ್ಲಿ ಪ್ಲೇಆಫ್ ಹಂತಕ್ಕೇರಿದ ಹೊರತಾಗಿಯೂ ಮುಂದಿನ ಹಂತಕ್ಕೆ ಹೋಗಲು ಸಾಧ್ಯವಾಗದ್ದಕ್ಕೆ ಬೇಸರ ವ್ಯಕ್ತಪಡಿಸಿದರು. ಚೆನ್ನೈ ವಿರುದ್ಧದ ಲೀಗ್ ಪಂದ್ಯದಲ್ಲಿ ಹೆಚ್ಚು ನಿಖರವಾಗಿ ಆಡಿದ್ದ ಆರ್‌ಸಿಬಿ ಈ ಪಂದ್ಯದಲ್ಲಿ ನಿರ್ಲಕ್ಷ್ಯ ತೋರಿತು. ಬ್ಯಾಟಿಂಗ್‌ನಲ್ಲಿ ಅನಗತ್ಯವಾಗಿ ವಿಕೆಟ್ ಒಪ್ಪಿಸಿದರೆ ಬೌಲಿಂಗ್ ವೇಳೆಯೂ ಕ್ಯಾಚ್ ಕೈಚೆಲ್ಲಿ, ಕಳಪೆ ಫೀಲ್ಡಿಂಗ್ ಮಾಡಿ, ರನ್‌ಔಟ್ ಚಾನ್ಸ್ ಕಳೆದುಕೊಂಡಿತು. ಇದು ಸೋಲಿಗೆ ಕಾರಣವಾಯಿತು.


ಇಲ್ಲಿನ ನರೇಂದ್ರ ಮೋದಿ ಕ್ರಿಕೆಟ್ ಸ್ಟೇಡಿಯಮ್‌ನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಲು ಆಹ್ವಾನ ಪಡೆದ ಆರ್‌ಸಿಬಿ ತಂಡ ನಿಗದಿತ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 172 ರನ್ ಬಾರಿಸಿತು. ಪ್ರತಿಯಾಗಿ ಬ್ಯಾಟ್ ಮಾಡಿದ ರಾಜಸ್ಥಾನ್ ರಾಯಲ್ಸ್ ತಂಡ ಇನ್ನೂ 6 ಎಸೆತಗಳು ಬಾಕಿ ಇರುವಂತೆಯೇ 6 ವಿಕೆಟ್ ನಷ್ಟಕ್ಕೆ 174 ರನ್ ಬಾರಿಸಿ ಗೆಲುವು ತನ್ನದಾಗಿಸಿಕೊಂಡಿತು.

ಸ್ಪರ್ಧಾತ್ಮಕ ಮೊತ್ತವನ್ನು ಬೆನ್ನಟ್ಟಲು ಹೊರಟ ರಾಜಸ್ಥಾನ್ ತಂಡಕ್ಕೆ ಆರಂಭದಲ್ಲಿ ರನ್ ಗಳಿಸಲು ಕಷ್ಟವಾಯಿತು. ಆದರೆ ಆ ಬಳಿಕ ಯಶಸ್ವಿ ಜೈಸ್ವಾಲ್ ಸ್ಕೋರ್ ಹೆಚ್ಚಿಸುವ ಮಾರ್ಗ ಕಂಡುಕೊಂಡರು. ಅವರು 30 ಎಸೆತಕ್ಕೆ 45 ರನ್ ಬಾರಿಸಿ ಅಗತ್ಯ ಆರಂಭ ಕೊಟ್ಟರು. ಟಾಮ್ ಕ್ಯಾಡ್‌ಮೋರ್ 20 ರನ್ ಗೆಔಟಾದರೆ ಸಂಜು ಸ್ಯಾಮ್ಸನ್ 17 ರನ್‌ಗೆ ವಿಕೆಟ್ ಒಪ್ಪಿಸಿದರು. ಬಳಿಕ ಕ್ರಿಸ್‌ಗೆ ಬಂದ ರಿಯಾನ್ ಪರಾಗ್ (36 ರನ್) ಮತ್ತೊಂದು ಉಪಯುಕ್ತ ಇನಿಂಗ್ಸ್‌ನೊಂದಿಗೆ ತಂಡಕ್ಕೆ ಗೆಲುವು ತಂದುಕೊಟ್ಟರು. ಹೆಟ್ಮಾಯರ್ 26 ರನ್ ಕೊಡುಗೆ ಕೊಟ್ಟಿತು.




### ಈ ಬಾರಿ ಮಿಂಚದ ಬ್ಯಾಟರ್‌ಗಳು

**ಮೊದಲು ಬ್ಯಾಟ್ ಮಾಡಿದ ಆರ್‌ಸಿಬಿ ತಂಡದ ಆರಂಭ ನಿರೀಕ್ಷಿತವಾಗಿರಲಿಲ್ಲ. ಕೊಹ್ಲಿ ಸ್ವಲ್ಪ ಚೈತನ್ಯ ತೋರಿದರೂ ಫಾಫ್ ಡು ಪ್ಲೆಸಿಸ್ ತಿಣುಕಾಡಲು ಶುರು ಮಾಡಿದ್ದರು. ಆದಾಗ್ಯೂ ಆರಂಭಿಕರು ಮೊದಲ ವಿಕೆಟ್‌ಗೆ 37 ಬೇರ್ಪಟ್ಟರು. ಬೌಲ್ಟ್ ಎಸೆತಕ್ಕೆ ದೊಡ್ ಹೊಡೆದ ಬಾರಿಸಲು ಮುಂದಾದ ಫಾಫ್ ಡು ಪ್ಲೆಸಿಸ್ ರೋವ್ಮನ್ ಪೊವೆಲ್ ಹಿಡಿದ ಅದ್ಭುತ ಕ್ಯಾಚ್‌ಗೆ ಬಲಿಯಾದರು. ಅದಕ್ಕಿಂತ ಮೊದಲು ಅವರು 17 ರನ್ ಬಾರಿಸಿದರು. ನಂತರ ಆಡಲು ಬಂದ ಕ್ಯಾಮೆರಾನ್ ಗ್ರೀನ್ 21 ಎಸೆತಕ್ಕೆ 27 ರನ್ ಬಾರಿಸಿದರು. ಅವರು ಔಟಾಗುವ ಮೊದಲು ಕೊಹ್ಲಿಯ ವಿಕೆಟ್ ಪತನಗೊಂಡಿತು. 24 ಎಸೆತಕ್ಕೆ 33 ರನ್ ಬಾರಿಸಿದ್ದ ಕೊಹ್ಲಿ ಚಹಲ್ ಎಸೆತಕ್ಕೆ ಔಟಾದರು. ಬಳಿಕ ಬಂದ ರಜತ್ ಪಾಟೀದಾರ್ ಉತ್ತಮ ಮೊತ್ತ ಪೇರಿಸುವ ಲಕ್ಷಣ ತೋರಿದರೂ 34 ರನ್‌ಗೆ ಸೀಮಿತಗೊಂಡರು. ಆರ್‌ಆರ್ ಬೌಲರ್‌ಗಳು ಆ ಬಳಿಕ ಮೇಲುಗೈ ಸಾಧಿಸಿದರು. ಗ್ಲೆನ್ ಮ್ಯಾಕ್ಸ್ ಮತ್ತೊಂದು ಬಾರಿ ಬೇಜವಾಬ್ದಾರಿ ಆಟವಾಡಿ ಶೂನ್ಯಕ್ಕೆ ಔಟಾದರು. ಬಳಿಕ ಮಹಿಪಾಲ್ ಲಾಮ್ರೋರ್ 32 ರನ್ ಗಳಿಸಿ ಸ್ಪರ್ಧಾತ್ಮಕ ಮೊತ್ತಕ್ಕೆ ನೆರವಾದರು. ದಿನೇಶ್ ಕಾರ್ತಿಕ್ ಕಡೆಯಿಂದ ಹೆಚ್ಚು ರನ್ ಮೂಡಿ ಬರಲಿಲ್ಲ. ಅವರು 11 ರನ್‌ಗೆ ಸೀಮಿತಗೊಂಡರು.**



## ಅಹಮದಾಬಾದ್‌ನಲ್ಲಿ ನಾಲ್ವರು ಶಸ್ತ್ರಾಸ್ತ್ರಧಾರಿಗಳ ಬಂಧನ!




ಎಲಿಮಿನೇಟರ್ ಪಂದ್ಯಕ್ಕೂ ಮುನ್ನ ಅಹಮದಾಬಾದ್ ವಿಮಾನ ನಿಲ್ದಾಣದಿಂದ ಭಯೋತ್ಪಾದಕ ಚಟುವಟಿಕೆಗಳ ಶಂಕೆ ಮೇರೆಗೆ ಗುಜರಾತ್ ಪೊಲೀಸರು ನಾಲ್ವರು ಶಸ್ತ್ರಾಸ್ತ್ರಧಾರಿಗಳನ್ನು ಸೋಮವಾರ ರಾತ್ರಿ ಬಂಧಿಸಿದ್ದಾರೆ. ಆದ್ದರಿಂದ ವಿರಾಟ್ ಕೊಹ್ಲಿ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಆರ್‌ಸಿಬಿ ಅಭ್ಯಾಸವನ್ನು ರದ್ದುಗೊಳಿಸಿದೆ.

ಐಪಿಎಲ್ 2024ರ ಎಲಿಮಿನೇಟರ್ ಪಂದ್ಯ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ರಾಜಸ್ಥಾನ್ ರಾಯಲ್ಸ್ ನಡುವೆ ನಡೆಯಲಿದೆ. ಈ ಪಂದ್ಯವು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರಿಕೆಟ್ ಸ್ಟೇಡಿಯಂನಲ್ಲಿ ರಾತ್ರಿ 7.30 ರಿಂದ ಆರಂಭವಾಗಲಿದೆ. ಒಂದೆಡೆ ಕೋಟ್ಯಂತರ ಕ್ರಿಕೆಟ್ ಅಭಿಮಾನಿಗಳು ಈ ಪಂದ್ಯಕ್ಕಾಗಿ ಕಾತರದಿಂದ ಕಾಯುತ್ತಿದ್ದರೆ, ಮತ್ತೊಂದೆಡೆ ವಿರಾಟ್ ಕೊಹ್ಲಿಯ ಸುರಕ್ಷತೆ ಆರ್‌ಸಿಬಿಗೆ ದೊಡ್ಡ ಆತಂಕ ತಂದೊಡ್ಡಿದೆ. ಹೀಗಾಗಿ ಎಲಿಮಿನೇಟರ್ ಪಂದ್ಯಕ್ಕೂ ಮುನ್ನ ವಿರಾಟ್ ಕೊಹ್ಲಿ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಆರ್‌ಸಿಬಿ ಅಭ್ಯಾಸವನ್ನು ರದ್ದುಗೊಳಿಸಿದೆ. ಅಲ್ಲದೆ ಪತ್ರಿಕಾಗೋಷ್ಠಿಯನ್ನು ಸಹ ನಡೆಸಿಲ್ಲ. ಮಹತ್ವದ ಪಂದ್ಯಕ್ಕೂ ಮುನ್ನ ಫ್ರಾಂಚೈಸಿಯ ಈ ನಡೆ ಆರ್‌ಸಿಬಿ ಅಭಿಮಾನಿಗಳ ಮನದಲ್ಲಿ ಹಲವು ಪ್ರಶ್ನೆಗಳನ್ನು ಮೂಡಿಸಿದೆ.

**ಎರಡೂ ತಂಡಗಳಿಂದ ಪತ್ರಿಕಾಗೋಷ್ಠಿ ರದ್ದು:** ಆರ್‌ಸಿಬಿ ಮತ್ತು ರಾಜಸ್ಥಾನ್ ನಡುವಿನ ಪಂದ್ಯಕ್ಕಾಗಿ ಉಭಯ ತಂಡಗಳು ಸೋಮವಾರವೇ ಅಹಮದಾಬಾದ್‌ಗೆ ತಲುಪಿದ್ದವು. ಆರ್‌ಸಿಬಿ ಕಳೆದ ಶನಿವಾರ ಚೆನ್ನೈ ವಿರುದ್ಧ ತನ್ನ ಕೊನೆಯ ಲೀಗ್ ಪಂದ್ಯವನ್ನು ಆಡಿತ್ತು. ಆ ನಂತರ ತಂಡದ ಆಟಗಾರರು ಭಾನುವಾರ ಮತ್ತು ಸೋಮವಾರ ವಿಶ್ರಾಂತಿ ಪಡೆದಿದ್ದರು. ಇದರ ಹೊರತಾಗಿಯೂ, ಅಹಮದಾಬಾದ್ ತಲುಪಿದ ನಂತರ ಆರ್‌ಸಿಬಿ, ಎಲಿಮಿನೇಟರ್ ಪಂದ್ಯದ ಮೊದಲು ಅಭ್ಯಾಸದ ಅವಧಿಯನ್ನು ರದ್ದುಗೊಳಿಸಿತು. ವಿರಾಟ್ ಕೊಹ್ಲಿಯ ಸುರಕ್ಷತೆಯ ದೃಷ್ಟಿಯಿಂದ ಆರ್‌ಸಿಬಿ ತನ್ನ ಅಭ್ಯಾಸವನ್ನು ರದ್ದುಗೊಳಿಸಿದ್ದು, ಎರಡೂ ತಂಡಗಳು ಪತ್ರಿಕಾಗೋಷ್ಠಿ ನಡೆಸಿಲ್ಲ ಎಂದು ಗುಜರಾತ್ ಪೊಲೀಸ್ ಅಧಿಕಾರಿಗಳನ್ನು ಉಲ್ಲೇಖಿಸಿ ಬಂಗಾಳಿ ದೈನಿಕ ಆನಂದಬಜಾರ್ ಪತ್ರಿಕೆ ಈ ಬಗ್ಗೆ ವರದಿ ಮಾಡಿದೆ.

**ವಿಮಾನ ನಿಲ್ದಾಣದಲ್ಲಿ 4 ಶಂಕಿತರ ಬಂಧನ:** ಎಲಿಮಿನೇಟರ್ ಪಂದ್ಯಕ್ಕೂ ಮುನ್ನ ಅಹಮದಾಬಾದ್ ವಿಮಾನ ನಿಲ್ದಾಣದಿಂದ ಭಯೋತ್ಪಾದಕ ಚಟುವಟಿಕೆಗಳ ಶಂಕೆ ಮೇರೆಗೆ ಗುಜರಾತ್ ಪೊಲೀಸರು ನಾಲ್ವರು ಶಸ್ತ್ರಾಸ್ತ್ರಧಾರಿಗಳನ್ನು ಸೋಮವಾರ ರಾತ್ರಿ ಬಂಧಿಸಿದ್ದಾರೆ. ನಾಲ್ವರು ಆರೋಪಿಗಳ ಬಗ್ಗೆ ಮಾಹಿತಿ ನೀಡಿರುವ ಪೊಲೀಸರು, ಅವರಿಂದ ಶಸ್ತ್ರಾಸ್ತ್ರಗಳು, ಅನುಮಾನಾಸ್ಪದ ವಿಡಿಯೋಗಳು ಮತ್ತು ಪಠ್ಯ ಸಂದೇಶಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದಿದ್ದಾರೆ.

ಎಲಿಮಿನೇಟರ್ ಪಂದ್ಯಕ್ಕೂ ಮುನ್ನ ನಾಲ್ವರು ಶಂಕಿತರ ಬಂಧನದಿಂದಾಗಿ ಆರ್‌ಸಿಬಿ ಟೆನ್ಷನ್‌ಗೆ ಒಳಗಾಗಿದ್ದು, ಈ ಕಾರಣಕ್ಕಾಗಿ ವಿರಾಟ್ ಕೊಹ್ಲಿ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಆರ್‌ಸಿಬಿ ಅಭ್ಯಾಸವನ್ನು ರದ್ದುಗೊಳಿಸಿದೆ. ಆದರೆ, ಈ ಘಟನೆಯ ನಂತರವೂ ರಾಜಸ್ಥಾನ ತಂಡ ಮೈದಾನದಲ್ಲಿ ಅಭ್ಯಾಸ ನಡೆಸಿದೆ. ಮತ್ತೊಂದೆಡೆ, ಎರಡೂ ತಂಡಗಳು ಪತ್ರಿಕಾಗೋಷ್ಠಿಯನ್ನು ರದ್ದುಗೊಳಿಸಿವೆ.

## ಆರ್‌ಸಿಬಿ ಗೆಲ್ಲಲ್ಲ ಎಂದ ರಾಯುಡು: ಮುಟ್ಟಿ ನೋಡಿಕೊಳ್ಳುವಂತಹ ಉತ್ತರ ಕೊಟ್ಟ ಇರ್ಫಾನ್ ಪಠಾಣ್

ಐಪಿಎಲ್‌ನ ನಾಕೌಟ್ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡವು ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಕಣಕ್ಕಿಳಿಯಲಿದೆ. ಇಂದು ನಡೆಯಲಿರುವ ಈ ಪಂದ್ಯದಲ್ಲಿ ಸೋಲುವ ತಂಡ ಐಪಿಎಲ್‌ನಿಂದ ಹೊರಬೀಳಲಿದೆ. ಅಂದರೆ ಇಂದಿನ ಪಂದ್ಯವು ಉಭಯ ತಂಡಗಳ ಪಾಲಿಗೂ ನಿರ್ಣಾಯಕ. ಹೀಗಾಗಿ ಈ ಮ್ಯಾಚ್‌ನಲ್ಲಿ ರಣರೋಚಕ ಪೈಪೋಟಿಯನ್ನು ನಿರೀಕ್ಷಿಸಬಹುದು.

ಇಂಡಿಯನ್ ಪ್ರೀಮಿಯರ್ ಲೀಗ್‌ನ ಎಲಿಮಿನೇಟರ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ರಾಜಸ್ಥಾನ್ ರಾಯಲ್ಸ್ ತಂಡಗಳು ಮುಖಾಮುಖಿಯಾಗಲಿದೆ. ಅಹಮದಾಬಾದ್‌ನಲ್ಲಿ ನಡೆಯಲಿರುವ ಈ ಪಂದ್ಯ ದಲ್ಲಿ ಗೆಲ್ಲುವವರು ಯಾರು ಎಂಬುದೇ ಈಗ ಕುತೂಹಲ. ಈ ಕುತೂಹಲದ ನಡುವೆ ಆರ್‌ಸಿಬಿ ತಂಡ ಈ ಸಲನೂ ಕಪ್ ಗೆಲ್ಲಲ್ಲ ಎಂದು ಅಂಬಾಟಿ ರಾಯುಡು ಭವಿಷ್ಯ ನುಡಿದಿದ್ದಾರೆ. ಚಾನೆಲ್ ಚರ್ಚೆಯೊಂದರಲ್ಲಿ ಈ ಬಗ್ಗೆ ಮಾತನಾಡಿದ ರಾಯುಡು, ಈ ಸಲ ಐಪಿಎಲ್ ಟ್ರೋಫಿ ದಕ್ಷಿಣ ಭಾರತದ ತಂಡಕ್ಕೆ ಸಿಗಲಿದೆ ಅನ್ನೋದಂತು ನಿಜ. ಆದರೆ ಅದು ಆರ್‌ಸಿಬಿಗೆ ಸಿಗಲ್ಲ, ಬದಲಾಗಿ ಸನ್‌ರೈಸರ್ಸ್ ಹೈದರಾಬಾದ್ ತಂಡದ ಪಾಲಾಗಲಿದೆ ಎಂದರು.





ತಕ್ಷಣವೇ ಕೌಂಟರ್ ಪಂಚ್ ನೀಡಿದ ಇರ್ಫಾನ್ ಪಠಾಣ್, ಅದು ಹೆಂಗೆಂದರೆ... 2019 ರ ವಿಶ್ವಕಪ್ ತಂಡದಲ್ಲಿ ದಕ್ಷಿಣ ಭಾರತದ ಒಬ್ಬ ಆಟಗಾರ ಆಯ್ಕೆಯಾಗಿದ್ದ. ಅದು ನೀನಲ್ಲ (ಅಂಬಾಟಿ ರಾಯುಡು) ವಿಜಯ್ ಶಂಕರ್...ಎನ್ನುವ ಮೂಲಕ ಕಾಲೆಳೆದರು. 2019 ರ ಏಕದಿನ ವಿಶ್ವಕಪ್‌ಗೆ ಅಂಬಾಟಿ ರಾಯುಡು ಆಯ್ಕೆಯಾಗಬೇಕಿತ್ತು. ಆದರೆ ಆಯ್ಕೆ ಸಮಿತಿಯು ಅಂಬಾಟಿ ರಾಯುಡುನನ್ನು ಕೈಬಿಟ್ಟು ವಿಜಯ ಶಂಕರ್ ಅವರನ್ನು ಆಯ್ಕೆ ಮಾಡಿದ್ದರು. ಈ ಅಚ್ಚರಿಯ ಆಯ್ಕೆ ಬಗ್ಗೆ, ತ್ರೀಡಿ ಕನ್ನಡಕದಲ್ಲಿ ಪಂದ್ಯ ವೀಕ್ಷಿಸುವುದಾಗಿ ಅಂಬಾಟಿ ರಾಯುಡು ಪ್ರತಿಕ್ರಿಯಿಸಿದ್ದರು.

ಇದೀಗ ಅಂಬಾಟಿ ರಾಯುಡು ದಕ್ಷಿಣ ಭಾರತದ ತಂಡ ಐಪಿಎಲ್ ಟ್ರೋಫಿ ಗೆಲ್ಲಲಿದೆ ಎಂದಿದ್ದಾರೆ. ಆದರೆ ಅದು ಆರ್‌ಸಿಬಿ ಅಲ್ಲ ಎನ್ನುವ ಮೂಲಕ ತನ್ನ ಸಪೋರ್ಟ್ ಎಸ್‌ಆರ್‌ಹೆಚ್ ತಂಡಕ್ಕೆ ಎಂಬುದನ್ನು ಪರೋಕ್ಷವಾಗಿ ತಿಳಿಸಿದ್ದಾರೆ. ಇದಕ್ಕೆ 2019ರ ವಿಶ್ವಕಪ್ ಆಯ್ಕೆಯ ವಿಚಾರವನ್ನು ಪ್ರಸ್ತಾಪಿಸಿ ಇರ್ಫಾನ್ ಪಠಾಣ್ ಕಾಲೆಳೆದಿದ್ದಾರೆ.

## ನನ್ನ ಮಗ ಸೆಕೆಂಡ್ ಹ್ಯಾಂಡ್ ಬಟ್ಟೆಗಳನ್ನು ಧರಿಸುತ್ತಾನೆ

ಬಾಲಿವುಡ್ ನಟ ಅಕ್ಷಯ್ ಕುಮಾರ್‌ಗೆ ಲಕ್ ಕೈ ಕೊಟ್ಟಂತಿದೆ. ಅವರು ನಟಿಸಿರುವ ಸಾಲು ಸಾಲು ಸಿನಿಮಾಗಳು ಬಾಕ್ಸ್ ಆಫೀಸ್‌ನಲ್ಲಿ ಮಕಾಡೆ ಮಲಗಿವೆ. ಇದರ ನಡುವೆ ಇದೀಗ ಮಗನ ಬಗ್ಗೆ ಅಕ್ಷಯ್ ನೀಡಿರುವ ಹೇಳಿಕೆ ಈಗ ಸದ್ದು ಮಾಡುತ್ತಿದೆ. ನನ್ನ ಮಗ ಸೆಕೆಂಡ್ ಹ್ಯಾಂಡ್ ಬಟ್ಟೆಗಳನ್ನು ಧರಿಸುತ್ತಾನೆ ಎಂದು ಅಕ್ಷಯ್ ಸಂದರ್ಶನವೊಂದರಲ್ಲಿ ಮಾತನಾಡಿದ್ದಾರೆ. ಲಂಡನ್ ವಿಶ್ವವಿದ್ಯಾನಿಲಯದಲ್ಲಿ ಆರವ್ ಓದುತ್ತಿದ್ದಾನೆ. 15 ವರ್ಷಕ್ಕೆ ಮಗ ಮನೆ ತೊರೆದಿದ್ದನು. ವಿದ್ಯಾಭ್ಯಾಸದ ಬಗ್ಗೆ ಅವನಿಗೆ ಯಾವಾಗಲೂ ಆಸಕ್ತಿ ಇತ್ತು. ಒಬ್ಬನೇ ಇರಲು ಇಷ್ಟಪಡುತ್ತಾನೆ. ಆದರೆ ಆರವ್ ಲಂಡನ್‌ಗೆ ಹೋಗೋದು ನನಗೆ ಇಷ್ಟವಿರಲಿಲ್ಲ. ಆದರೆ ಅದು ಅವನ ನಿರ್ಧಾರ. ಹಾಗಂತ ನಾನು ಅವನನ್ನು ತಡೆಯಲಿಲ್ಲ. ಯಾಕೆಂದರೆ ನಾನು ಕೂಡ 14ನೇ ವಯಸ್ಸಿಗೆ ಮನೆ ಬಿಟ್ಟಿದ್ದೆ ಎಂದು ಅಕ್ಷಯ್ ಕುಮಾರ್ ಹೇಳಿದ್ದಾರೆ. ಆರವ್ ತನ್ನ ಬಟ್ಟೆಯನ್ನು ತಾನೇ ತೊಳೆದುಕೊಳ್ಳುತ್ತಾನೆ. ಚೆನ್ನಾಗಿ ಅಡುಗೆ ಮಾಡುತ್ತಾನೆ ಕೂಡ. ದುಬಾರಿಯಾದ ಬಟ್ಟೆಗಳನ್ನು ಖರೀದಿಸಲು ಆತ ಇಷ್ಟಪಡುವುದಿಲ್ಲ. ಬಟ್ಟೆ ಖರೀದಿಸಲು ಸೆಕೆಂಡ್ ಹ್ಯಾಂಡ್ ಸ್ಟೋರ್‌ಗೆ ಹೋಗುತ್ತಾನೆ. ಸುಮ್ಮನೆ ಖರ್ಚು ಮಾಡುವುದು ಅವನಿಗೆ ಇಷ್ಟ ಇಲ್ಲ ಎಂದಿದ್ದಾರೆ. ಆರವ್ ಕುಮಾರ್‌ಗೆ ಈಗ 21 ವರ್ಷ ವಯಸ್ಸು. ಹಾಗಾದ್ರೆ, ನಟನೆಗೆ ಎಂಟ್ರಿ ಕೊಡುವುದು ಯಾವಾಗ ಎಂದು ಕೇಳಲಾಯ್ತು. ಆರವ್‌ಗೆ ನಟನೆ ಇಷ್ಟವಿಲ್ಲ. ಫ್ಯಾಷನ್ ಕ್ಷೇತ್ರದಲ್ಲಿ ಸಾಧನೆ ಮಾಡಲು ಅವರು ನಿರ್ಧರಿಸಿದ್ದಾರೆ. ಪತ್ನಿ ಮಗನನ್ನು ಬೆಳೆಸಿರುವ ರೀತಿಯ ಬಗ್ಗೆ ಖುಷಿಯಿದೆ ಎಂದು ಅಕ್ಷಯ್ ಮಾತನಾಡಿದ್ದಾರೆ.







## ಹೀರೋಯಿನ್ ಆದ ಖ್ಯಾತ ಯೂಟ್ಯೂಬರ್ ನಿಹಾರಿಕಾ

ಬೆಂಗಳೂರು ಮೂಲದ ಖ್ಯಾತ ಯೂಟ್ಯೂಬರ್ ನಿಹಾರಿಕಾ ಎನ್.ಎಂ ವಿಭಿನ್ನ ಕಂಟೆಂಟ್‌ಗಳ ಮೂಲಕ ಸೋಷಿಯಲ್ ಮೀಡಿಯಾದಲ್ಲಿ ಸೆನ್ಸೇಷನ್ ಕ್ರಿಯೇಟ್ ಮಾಡಿದ್ದಾರೆ. ಇದೀಗ ಬೆಳ್ಳಿತೆರೆಯಲ್ಲಿ ನಾಯಕಿಯಾಗಿ ಎಂಟ್ರಿ ಕೊಡಲು ನಿಹಾರಿಕಾ ರೆಡಿಯಾಗಿದ್ದಾರೆ. ನಿಹಾರಿಕಾ ಈಗ ಕಂಟೆಂಟ್ ಕ್ರಿಯೇಟರ್‌ನಿಂದ ನಾಯಕಿಯಾಗಿ ಬಡ್ತಿ ಪಡೆಯುತ್ತಿದ್ದಾರೆ. ತೆಲುಗು ಅಲ್ಲ, ಬದಲಿಗೆ ತಮಿಳು ಚಿತ್ರದ ಮೂಲಕ ಎಂಟ್ರಿ ಕೊಡ್ತಿದ್ದಾರೆ.

ನಿಹಾರಿಕಾ ನಾಯಕಿಯಾಗಿ ನಟಿಸಲಿರುವ ಸಿನಿಮಾವನ್ನು ದಕ್ಷಿಣದ ಪ್ರಖ್ಯಾತ ನಿರ್ಮಾಣ ಸಂಸ್ಥೆ ಲೈಕಾ ನಿರ್ಮಾಣ ಮಾಡುತ್ತಿದೆ. ಅಥರ್ವ ಈ ಚಿತ್ರದ ನಾಯಕನಾಗಿದ್ದು, ಆಕಾಶ್ ಭಾಸ್ಕರನ್ ಈ ಚಿತ್ರವನ್ನ ನಿರ್ದೇಶಿಸಲಿದ್ದಾರೆ.

ಇನ್ನೂ ಹೆಸರಿಡದ ಈ ಚಿತ್ರ ಪಕ್ಕಾ ಹಾಸ್ಯ ಪ್ರಧಾನ ಸಿನಿಮಾವಾಗಿದೆ. ರೊಮ್ಯಾನ್ಸ್ ಜೊತೆಗೆ ಕಾಮಿಡಿ ಇರುವ ರೋಡ್ ಟ್ರಿಪ್ ಈ ಚಿತ್ರದ ಜೀವಾಳ. ಸಂಗೀತ ನಿರ್ದೇಶಕ ಎಸ್.ಥಮನ್ ಈ ಚಿತ್ರದ ಸಂಗೀತ ನಿರ್ದೇಶಕರು. ಈ ಚಿತ್ರದಲ್ಲಿ ಅವರು ಪಾತ್ರವೊಂದನ್ನು ಕೂಡ ನಿರ್ವಹಿಸುತ್ತಿದ್ದಾರೆ. ಚಿತ್ರದ ತಾಂತ್ರಿಕ ವಿಭಾಗದಲ್ಲಿ ಯಾರೆಲ್ಲ ಕೆಲಸ ಮಾಡಲಿದ್ದಾರೆ ಅನ್ನುವ ಪ್ರಶ್ನೆಗೆ ಸದ್ಯಕ್ಕೆ ಉತ್ತರ ಇಲ್ಲ. ಸದ್ಯ ಚಿತ್ರದ ಪ್ರೀ-ಪ್ರೊಡಕ್ಷನ್ ಕೆಲಸ ಆರಂಭವಾಗಿದ್ದು, ಶೀಘ್ರದಲ್ಲಿಯೇ ಚಿತ್ರದ ಮುಹೂರ್ತ ನೆರವೇರಲಿದೆ.

ಅಂದಹಾಗೆ, ನಿಹಾರಿಕಾ ಬೇಡಿಕೆ ಎಷ್ಟಿದೆ ಎಂದರೆ, ನ್ಯಾಷನಲ್ ಸ್ಟಾರ್ ಯಶ್ 'ಕೆಜಿಎಫ್ 2' ಚಿತ್ರದ ಬಿಡುಗಡೆ ಸಮಯದಲ್ಲಿ, ನಿಹಾರಿಕಾ ಅವರನ್ನ ಚಿತ್ರದ ಪ್ರಚಾರಕ್ಕೆ ಬಳಸಿಕೊಂಡಿದ್ದರು. ಆ ಕಾಲಕ್ಕೆ ವಿಡಿಯೋ ಸಿಕ್ಕಾಪಟ್ಟೆ ವೈರಲ್ ಕೂಡ ಆಗಿತ್ತು. ತೆಲುಗಿನ ಮಹೇಶ್ ಬಾಬು, ವಿಜಯ್ ದೇವರಕೊಂಡ ಅವರಿಂದ ಹಿಡಿದು ಬಾಲಿವುಡ್‌ನ ರಣ್‌ಬೀರ್ ಕಪೂರ್, ಪ್ರಿಯಾಂಕಾ ಚೋಪ್ರಾವರೆಗೂ ನಿಹಾರಿಕಾ ಜೊತೆ ಸಿನಿಮಾ ಪ್ರಚಾರ ಮಾಡಿಸಿಕೊಂಡಿದ್ದಾರೆ. ಇದೀಗ ನೆಚ್ಚಿನ ಯೂಟ್ಯೂಬರ್ ನಾಯಕಿಯಾಗಿರೋದು ಸಹಜವಾಗಿ ಫ್ಯಾನ್ಸ್‌ಗೆ ಖುಷಿ ಕೊಟ್ಟಿದೆ.



## ಭಾವ ತೀರ ಯಾನ ಚಿತ್ರದ ಮೂಲಕ ಹಿರಿತೆರೆಗೆ ಕಾಲಿಟ್ಟ ಲಕ್ಷ್ಮಿ ನಿವಾಸ ನಟಿ

'ಬಿಗ್ ಬಾಸ್ ಸೀಸನ್ 7'ರ ಸ್ಪರ್ಧಿ ಚಂದನಾ ಅನಂತಕೃಷ್ಣ ಪ್ರಸ್ತುತ 'ಲಕ್ಷ್ಮಿ ನಿವಾಸ' ಸೀರಿಯಲ್ ಮೂಲಕ ಮೋಡಿ ಮಾಡ್ತಿದ್ದಾರೆ. ಇದೀಗ ಕಿರುತೆರೆಯಿಂದ ಹಿರಿತೆರೆಗೆ ನಟಿ ಪಾದಾರ್ಪಣೆ ಮಾಡಲು ರೆಡಿಯಾಗಿದ್ದಾರೆ. ನನ್ನ ಆಸೆನೂ ಒಂದು ದಿನ ಸಮುದ್ರನೇ ಆಗಿತ್ತು, ಆದ್ರೆ ಸಮುದ್ರದ ನೀರು ಕುಡಿಯೋಕೆ ಎಲ್ಲಾಗತ್ತೆ ಹೇಳಿ! ಎಂದು ಡೈಲಾಗ್ ಮೂಲಕ 'ಭಾವ ತೀರ ಯಾನ' ಚಿತ್ರದ ಫಸ್ಟ್ ಲುಕ್ ಬಿಡುಗಡೆಯಾಗಿದೆ. ನಟಿಯ ಲುಕ್ ಮತ್ತು ಸಿನಿಮಾದ ಡೈಲಾಗ್ ಪ್ರೇಕ್ಷಕರಿಗೆ ಮೆಚ್ಚುಗೆ ಆಗಿದೆ. ಮಯೂರ ಅಂಬೆಕಲ್ಲು ಮತ್ತು ತೇಜಸ್ ಕಿರಣ್ ಅವರು ನಿರ್ಮಾಣ ಮಾಡುತ್ತಿರುವ 'ಭಾವ ತೀರ ಯಾನ' ಚಿತ್ರದಲ್ಲಿ ಚಂದನಾ ಲೀಡ್ ರೋಲ್‌ನಲ್ಲಿ ನಟಿಸುತ್ತಿದ್ದಾರೆ. ಧೃತಿ ಎಂಬ ಪಾತ್ರಕ್ಕೆ ಜೀವ ತುಂಬಿದ್ದಾರೆ. ಸದ್ಯ ನಟಿಯ ಮೊದಲ ಸಿನಿಮಾದ ಅಪ್‌ಡೇಟ್ ಕೇಳಿ ಅಭಿಮಾನಿಗಳು ಥ್ರಿಲ್ ಆಗಿದ್ದಾರೆ.



## ಪುಷ್ಪ 2 ಅಪ್‌ಡೇಟ್ ಹಂಚಿಕೊಂಡ ರಶ್ಮಿಕಾ ಮಂದಣ್ಣ

ಕೊಡಗಿನ ಕುವರಿ ರಶ್ಮಿಕಾ ಮಂದಣ್ಣ ಬಹುನಿರೀಕ್ಷಿತ 'ಪುಷ್ಪ 2' ಚಿತ್ರದ ಬಗ್ಗೆ ಬಿಗ್ ಅಪ್‌ಡೇಟ್ ಹಂಚಿಕೊಂಡಿದ್ದಾರೆ. ಶ್ರೀವಲ್ಲಿಗಾಗಿ ಎದುರು ನೋಡ್ತಿದ್ದ ಫ್ಯಾನ್ಸ್‌ಗೆ ನಟಿ ಸಿಹಿಸುದ್ದಿ ನೀಡಿದ್ದಾರೆ.

ಸುಕುಮಾರ್ ನಿರ್ದೇಶನದ 'ಪುಷ್ಪ' 1 ಸಿನಿಮಾ ಗಲ್ಲಾಪೆಟ್ಟಿಗೆ ಲೂಟಿ ಮಾಡಿತ್ತು. ಅಲ್ಲು ಅರ್ಜುನ್ ಮತ್ತು ರಶ್ಮಿಕಾ ಮಂದಣ್ಣ ಕಾಂಬಿನೇಷನ್ ಸಿನಿಮಾ ಗೆಲುವಿಗೆ ಕಾರಣವಾಗಿತ್ತು. ಈಗ 'ಪುಷ್ಪ 2' ಚಿತ್ರತಂಡ ಮತ್ತೆ ಮನರಂಜನೆ ಕೊಡಲು ರೆಡಿಯಾಗಿದೆ. ಇದೀಗ ಪುಷ್ಪ 2 ಸಿನಿಮಾ 2ನೇ ಸಾಂಗ್ ಬಿಡುಗಡೆ ಮಾಡುವ ಬಗ್ಗೆ ನಟಿ ಸೋಷಿಯಲ್ ಮೀಡಿಯಾದಲ್ಲಿ ಮಾಹಿತಿ ನೀಡಿದ್ದಾರೆ. ಈ ಹಾಡು ಶೂಟ್ ಮಾಡಲು ಚೆನ್ನಾಗಿತ್ತು. ನಿಮ್ಮೆಲ್ಲರಿಗೂ ಈ ಹಾಡು ಇಷ್ಟವಾಗುತ್ತೆ ಎಂದು ಖಾತ್ರಿಯಿದೆ ಎಂದು ರಶ್ಮಿಕಾ ಬರೆದುಕೊಂಡಿದ್ದಾರೆ. ಚಿತ್ರದ 2ನೇ ಹಾಡು ಮೇ 23ರಂದು 11:07ಕ್ಕೆ ರಿಲೀಸ್ ಮಾಡೋದಾಗಿ ತಿಳಿಸಿದ್ದಾರೆ. ಸದ್ಯ 'ಪುಷ್ಪ 2' ಸಿನಿಮಾದ ಜೊತೆ ಅನಿಮಲ್ ಪಾರ್ಕ್, ರೈನ್‌ಬೋ, ದಿ ಗರ್ಲ್‌ಫ್ರೆಂಡ್, ಚಾವಾ ಸೇರಿದಂತೆ ಹಲವು ಸಿನಿಮಾಗಳಲ್ಲಿ ರಶ್ಮಿಕಾ ಮಂದಣ್ಣ ಬ್ಯುಸಿಯಾಗಿದ್ದಾರೆ.

## ಸುಹಾನಾ ಹುಟ್ಟುಹಬ್ಬಕ್ಕೆ ಸ್ಟಾರ್ಸ್‌ಗಳ ವಿಶ್

'ಪಠಾಣ್' ಸೂಪರ್ ಸ್ಟಾರ್ ಶಾರುಖ್ ಖಾನ್ ಪುತ್ರಿ, ಸುಹಾನಾ ಖಾನ್ ಮೇ 22 ಹುಟ್ಟುಹಬ್ಬದ ಸಂಭ್ರಮದಲ್ಲಿದ್ದಾರೆ. ಸುಹಾನಾ 24ನೇ ವರ್ಷದ ಹುಟ್ಟುಹಬ್ಬಕ್ಕೆ ಬಾಲಿವುಡ್ ನಟ-ನಟಿಯರು ಸ್ಪೆಷಲ್ ಆಗಿ ವಿಶ್ ಮಾಡಿದ್ದಾರೆ.

ಸದ್ಯ ಬರ್ತ್‌ಡೇ ಖುಷಿಯಲ್ಲಿರುವ ನಟಿಗೆ ಅನನ್ಯಾ ಪಾಂಡೆ, ಬಿಗ್ ಬಿ ಮೊಮ್ಮಗಳು ನಂದಾ, ಸಾರಾ ಸೇರಿದಂತೆ ಅನೇಕರು ಪ್ರೀತಿಯಿಂದ ಶುಭಕೋರಿದ್ದಾರೆ. ಅದಷ್ಟೇ ಅಲ್ಲ, ಮೇ 21ರಂದು ಶಾರುಖ್ ಒಡೆತನದ ಕೋಲ್ಕತ್ತಾ ನೈಟ ರೈಡರ್ಸ್ ತಂಡ ಸನ್ ರೈಸರ್ಸ್ ಹೈದರಾಬಾದ್ ವಿರುದ್ಧ ಗೆದ್ದು ಬೀಗಿದೆ. ಈ ಮೂಲಕ ಫೈನಲ್ ತಲುಪಿದೆ. ಈ ಮ್ಯಾಚ್ ನೋಡಲು ತಂದೆ ಜೊತೆ ಸುಹಾನಾ ಖಾನ್ ಕೂಡ ಇದ್ದರು. ಈ ಮೂಲಕ ಸುಹಾನಾ ಬರ್ತ್‌ಡೇ ಕೆಕೆಆರ್ ಗೆಲುವಿನ ಉಡುಗೊರೆ ಸಿಕ್ಕಂತೆ ಆಗಿದೆ.

ಸುಹಾನಾ ಈ ವರ್ಷ ಬೆಳ್ಳಿತೆರೆಗೆ ಗ್ರ್ಯಾಂಡ್ ಆಗಿ ಎಂಟ್ರಿ ಕೊಡಲು ರೆಡಿಯಾಗಿದ್ದಾರೆ. ಅದಕ್ಕಾಗಿ ತಯಾರಿ ಕೂಡ ಮಾಡಿಕೊಂಡಿದ್ದಾರೆ. ಕಿಂಗ್ ಸಿನಿಮಾದಲ್ಲಿ ತಂದೆಯೇ ಜೊತೆ ಸುಹಾನಾ ಪರಿಚಿತರಾಗುತ್ತಿದ್ದಾರೆ.



## ರಾಮ್ ಚರಣ್ ತಾಯಿಯ ಪಾತ್ರದಲ್ಲಿ ವಿಜಯ ಶಾಂತಿ

ಟಾಲಿವುಡ್ ನಟ ರಾಮ್ ಚರಣ್ 'ಗೇಮ್ ಚೇಂಜರ್' ಸಿನಿಮಾ ಬಳಿಕ 'ಉಪ್ಪೇನಾ' ಡೈರೆಕ್ಟರ್ ಜೊತೆ ಕೈಜೋಡಿಸಿದ್ದಾರೆ. ಇತ್ತೀಚೆಗೆ ಈ ಸಿನಿಮಾದ ಮುಹೂರ್ತ ಕಾರ್ಯಕ್ರಮ ಕೂಡ ಅದ್ದೂರಿಯಾಗಿ ಜರುಗಿತ್ತು. ಈಗ ಸಿನಿಮಾ ತಂಡದಿಂದ ಇಂಟ್ರಸ್ಟಿಂಗ್ ಮಾಹಿತಿಯೊಂದು ಹೊರಬಿದ್ದಿದೆ. ರಾಮ್ ಚರಣ್ ಚಿತ್ರಕ್ಕೆ ವಿಜಯ ಶಾಂತಿ ಎಂಟ್ರಿ ಕೊಟ್ಟಿದ್ದಾರೆ.

ರಾಮ್ ಚರಣ್ 16ನೇ ಸಿನಿಮಾದಲ್ಲಿ ಹೀರೋ ರಾಮ್ ತಾಯಿ ಪಾತ್ರದಲ್ಲಿ ವಿಜಯ ಶಾಂತಿ ಕಾಣಿಸಿಕೊಳ್ಳಲಿದ್ದಾರೆ. ಈಗಾಗಲೇ ಚಿತ್ರತಂಡ ವಿಜಯ ಶಾಂತಿ ಅವರನ್ನು ಭೇಟಿ ಮಾಡಿ ಕಥೆ ಕೂಡ ಹೇಳಿದ್ದಾರೆ. ನಟಿ ಗ್ರೀನ್ ಸಿಗ್ನಲ್ ಕೂಡ ನೀಡಿದ್ದಾರೆ ಎನ್ನಲಾಗಿದೆ. ರಾಮ್ ಚರಣ್ ತಾಯಿಯ ಪಾತ್ರಕ್ಕೆ ಪವರ್ ಫುಲ್ ನಟಿಯೇ ಬೇಕು ಎಂದು ಹಿರಿಯ ಸ್ಟಾರ್ ನಟಿಯನ್ನೇ ಚಿತ್ರತಂಡ ಮಣೆ ಹಾಕಿದೆ. ವಿಜಯ ಶಾಂತಿ ಪಾತ್ರಕ್ಕೂ ಭಾರೀ ಪ್ರಾಮುಖ್ಯತೆ ಇದೆ. ಅಂದಹಾಗೆ, ರಾಮ್ ಚರಣ್‌ಗೆ ನಾಯಕಿಯಾಗಿ ಜಾನ್ವಿ ಕಪೂರ್ ನಟಿಸುತ್ತಿದ್ದಾರೆ. ಹ್ಯಾಟ್ರಿಕ್ ಹೀರೋ ಶಿವರಾಜ್‌ಕುಮಾರ್ ಕೂಡ ಪವರ್‌ಫುಲ್ ಪಾತ್ರದಲ್ಲಿ ಕಾಣಿಸಿಕೊಳ್ತಿದ್ದಾರೆ. 'ಉಪ್ಪೇನಾ' ಡೈರೆಕ್ಟರ್ ಬುಚ್ಚಿಬಾಬು ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ.



**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**